The Mangalore Port Trust (Repeal) Bill, 1980.

SRI D.B. PAWAR (Minister for Fisheries and Ports).--I beg to move

"That leave be granted to introduce the Mangalore Ports Trust (Repeal) Bill, 1980."

MR. SPEAKER.—The question is :

"That leave be granted to introduce the Mangalore Port Trust (Repeal) Bill, 1980."

The motion was adopted and leave was granted.

SRI D.B. PAWAR.—I beg to introduce the Mangalore Port Trust repeal) Bill, 1980.

MR. SPEAKER.—The Bill is introduced.*

Motion of Thanks to the Governors Address

(Debate continued)

(ಶ್ರೀ ಎಂ. ಸಿ. ಬಸಪ್ಪನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

† ಶ್ರೀ ಕೆ. ಎ. ಕೆಂಗೇಗೌಡ (ಚಾಮರಾಜ).—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಮಾನ್ಯ ಹೆಚ್.ಟಿ. ಕೃಷ್ಣಪ್ಪನವರು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾನಿರ್ಣಯವನ್ನು ಈಸದನದ ಮುಂದೆ ಏನು ಮಂಡಿಸಿದ್ದಾರೆ, ಅದನ್ನು ನಾನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳು ವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣ ಅತಿ ಚಿಕ್ಕದಾಗಿದ್ದರೂ ಕೂಡ ಆ ಭಾಷಣದ ಮುಖಾಂತರ ನಮ್ಮ ಸರ್ಕಾರ ಮುಂದಿನ ಸಾಲಿನಲ್ಲಿ ಅಂದರೆ ೧೯೮೦-೮೧ನೇ ಸಾಲಿನ ಕನಿಷ್ಟ ಕಾರ್ಯಕ್ರಮ ಗಳನ್ನು ಹೇಳಿದ ರೀತಿಯಲ್ಲಿ ಇದೆ ಎಂಬುದು ಎಲ್ಲರೂ ಒಪ್ಪತಕ್ಕ ಮಾತು. ಮಾನ್ಯ ಕೃಷ್ಣಪ್ಪನವರು ನಿನ್ನೆ ದಿವಸ ಸತ್ಯವಾದ ಮಾತನ್ನು ಹೇಳಿದ್ದಾರೆ. ಪ್ರಾಮಾಣಿಕತನದಿಂದ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ, ಅದನ್ನೆಲ್ಲಾ ನಾನು ಮನಪೂರ್ವಕವಾಗಿ ಅನುಮೋದಿಸುತ್ತೇನೆ. ಮೊಟ್ಟಮೊದಲು ನಮ್ಮ ಸರ್ಕಾರದವರು ಶಿಕ್ಷಣದ ಬಗ್ಗೆ ಏನೊಂದು ಕನಿಷ್ಟ ಕಾರ್ಯಕ್ರಮಗಳನ್ನು ಈ ಸಾಲಿಗೆ ಹಾಕಿಕೊಂಡಿ ದ್ದಾರೆ, ಆ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತೇನೆ. ನಮ್ಮ ರಾಜ್ಯದಲ್ಲಿ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆ; ಆದರೆ ಇದುವರೆಗೆ ಅನೇಕ ಮಕ್ಕಳು ಕಡ್ಡಾಯ ಶಿಕ್ಷಣದ ವಯೋ ಗುಂಪಿಗೆ ಸೇರಿದ್ದರೂ ಸಹ ನೂರಕ್ಕೆ ನೂರರಷ್ಟು ಮಕ್ಕಳು ಶಾಲೆಗೆ ದಾಖಲಾಗಿಲ್ಲವೆಂದು ತಿಳಿಸುತ್ತಾ, ಈ ಸಾಲಿನಲ್ಲಿ ಆ ಬಗ್ಗೆ ನಾವು ಹೆಚ್ಚಿನ ಗಮನವನ್ನು ಕೊಟ್ಟು ಆ ವಯೋ ಗುಂಪಿನ ಎಲ್ಲ ಮಕ್ಕಳೂ ಶಾಲೆಗೆ ಸೇರುವಂತಹ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಪಡುತ್ತೇವೆಂದು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಿಜವಾಗಿಯೂ ಕೂಡ ಇದನ್ನು ನಾವು ಪ್ರಶಂಸಿಸ ಬೇಕಾಗುತ್ತದೆ. ಆದರೆ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುವ ಸಂದರ್ಭದಲ್ಲಿ ಕೆಲವು ನ್ಯೂನತೆ ಗಳು ಮಧ್ಯೆ ಮಧ್ಯೆ ಬರುತ್ತವೆ. ಬಡವರ ಮಕ್ಕಳು ಹಳ್ಳಿಗಾಡಿನಲ್ಲಾಗಲೀ ಅಥವಾ ಪಟ್ಟಣಗಳಲ್ಲಾಗಲೀ ತಮ್ಮ ತಮ್ಮ ತಂದೆ–ತಾಯಿಗಳ ಕೆಲಸಕ್ಕೆ ನೆರವಾಗುತ್ತಿರುತ್ತಾರೆ, ಅದಕ್ಕೆ ಕಾರಣ ಅವರಲ್ಲಿರತಕ್ಕ ಹಣದ ಕೊರತೆ ಮುಖ್ಯವಾದುದು. ಅವರಿಗೆ ಸರ್ಕಾರದವರು ಸ್ವಲ್ಪ ಹಣ ಸಹಾಯವನ್ನು ಒದಗಿಸಿದರೆ ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಆದ್ದರಿಂದ ಈ ಸಂದರ್ಭದಲ್ಲಿ, ಏನಾದರೊಂದು ಪ್ರೋತ್ಸಾಹದ ರೀತಿಯಲ್ಲಿ ಬಡ ಮಕ್ಕಳ ತಂದೆ ತಾಯಿಗಳಿಗೆ ಸೂಕ್ತ ಸಹಾಯವನ್ನು ಒದಗಿಸಿದರೆ ಅವರು

---

* ANNEXURE

† Indicates that remarks or speeches have not been revised by the member concerned

ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸುತ್ತಾರೆ. ಆ ಬಗ್ಗೆ ಸರ್ಕಾರ ವಿಶೇಷ ಗಮನ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್.—ಹಾಗಾದರೆ ಅವರಿಗೆ ಯಾವ ರೀತಿ ಸಹಾಯ ಮಾಡುತ್ತೀರಿ?

ಶ್ರೀ ಕೆ. ಎ. ಕೆಂಗೇಗೌಡ.—ಸರ್ಕಾರದವರು ಯಾವ ರೀತಿ ಸಹಾಯ ಒದಗಿಸಬೇಕೆಂದು ಮಾನ್ಯ ಪಾಟೀಲರು ಕೇಳುತ್ತಿದ್ದಾರೆ. ಬಡ ಮಕ್ಕಳ ತಂದೆ ತಾಯಿಗಳಿಗೆ ತಮ್ಮ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ತೊಂದರೆಯಾಗಿದ್ದರೆ, ಅವರಿಗೆ ಹಣದ ಸಹಾಯ ಮಾಡಿದರೆ ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಮಕ್ಕಳಿಗೆ ಬಟ್ಟೆ ಇರುವುದಿಲ್ಲ, ಹೊಟ್ಟೆಗೆ ಸರಿಯಾಗಿ ಅನ್ನ ಇರುವುದಿಲ್ಲ, ಇಂಥ ಸ್ಥಿತಿಯಲ್ಲಿ ಶಾಲೆಗೆ ಹೋದರೆ ತೊಂದರೆಯಾಗುತ್ತದೆಂದು ಮನೆಯಲ್ಲಿಯೇ ಇರುತ್ತಾರೆ. ಅಂಥವರಿಗೆ ಹಣದ ರೂಪದಲ್ಲಿ ಸಹಾಯ ನೀಡಿದರೆ ಅವರು ಮುಂದೆ ಬಂದು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆ ಬಗ್ಗೆ ಯಾವ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬ ಬಗ್ಗೆ ಸರ್ಕಾರ ಈ ಸದನದ ಕೆಲವು ಸದಸ್ಯರನ್ನು ಒಳಗೊಂಡಂತಹ ಒಂದು ಸಮಿತಿಯನ್ನು ರಚಿಸಬೇಕೆಂದು ಸಲಹೆ ಮಾಡುತ್ತೇನೆ. ಇದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

೩–೦೦ ಪಿ.ಎಂ.

ಮತ್ತೆ ಈ ಶಿಕ್ಷಣದ ವಿಚಾರವಾಗಿ ಹೇಳುವುದಾದರೆ, ಕಾಲೇಜುಗಳಲ್ಲಿ ಹೆಚ್ಚಿನ ಒಂದು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸೇರುವುದಕ್ಕೆ ಆಸೆ ಪಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಮುಖ್ಯ ಮಂತ್ರಿಗಳವರು ಮತ್ತು ನಮ್ಮ ಸರ್ಕಾರ ಮುಂದೆ ವೃತ್ತಿ ಪ್ರಧಾನವಾದ ಶಿಕ್ಷಣವನ್ನಾಗಿ ಮಾಡಬೇಕೆಂದಿರುವುದಾಗಿ ನಮ್ಮ ಗಮನವನ್ನು ಸೆಳೆದಿದ್ದಾರೆ. ಶಿಕ್ಷಣವನ್ನು ವೃತ್ತಿ ಪ್ರಧಾನವನ್ನಾಗಿ ಮಾಡಿದರೆ ನಿಜವಾಗಿಯೂ ಕೂಡ ನಮ್ಮ ಆರ್ಥಿಕ ಸಮಸ್ಯೆಗಳೇನಿವೆ, ನಿರುದ್ಯೋಗ ಸಮಸ್ಯೆಗಳೇನಿದೆ ಅದು ಪರಿಹಾರವಾದ ಹಾಗೆ ಆಗುತ್ತದೆಂದು ನಾನಾದರೂ ಆಶಿಸುತ್ತೇನೆ. ಈ ಕಾರಣದಿಂದಲೇ ನಮ್ಮ ಶಿಕ್ಷಣವನ್ನು ವೃತ್ತಿ ಪ್ರಧಾನವನ್ನಾಗಿ ಮಾಡುವ ಕಡೆ ನಮ್ಮ ಸರ್ಕಾರದವರು ವಿಶೇಷವಾದ ಗಮನವನ್ನು ಕೊಡುತ್ತಿದ್ದಾರೆ. ಕೇವಲ ಬಿ.ಎ., ಬಿ.ಎಸ್‌ಸಿ., ಎಂ.ಎ., ಎಂ ಎಸ್‌ಸಿ., ಡಾಕ್ಟರ್, ಇಂಜಿನಿಯರ್‌ಗಳಾಗಿ ಮುಂದೆ ಕೆಲಸ ಕಾರ್ಯಗಳು ಇಲ್ಲದೆ ಕೂಡುವುದಕ್ಕಿಂತ, ಅವರು ವೃತ್ತಿ ಶಿಕ್ಷಣವನ್ನು ಪಡೆದು ತಮ್ಮ ಕಾಲ ಮೇಲೆ ತಾವು ನಿಲ್ಲುವ ಹಾಗೆ ಮಾಡಿದರೆ ಅದರಿಂದ ಸಮಾಜಕ್ಕೂ ಹೊರೆಯಾಗದ ರೀತಿಯಲ್ಲಿ ಆಗುತ್ತದೆ ಎನ್ನುವ ಸರ್ಕಾರದ ಅಭಿಪ್ರಾಯವನ್ನು ನಾನು ಮನಃಪೂರ್ವಕವಾಗಿ ಸ್ವಾಗತಿಸುತ್ತೇನೆ.

ಸ್ವಾಮಿ, ಇನ್ನು ರೈಲ್ವೆ ವಿಷಯದ ಬಗ್ಗೆ ಹೇಳಬೇಕೆಂದರೆ ನಿಜವಾಗಿಯೂ ಕೂಡ ಈ ಸಾರಿ ನಮಗೆ ಒಂದು ಅದೃಷ್ಟವೆಂದು ಹೇಳಬೇಕು. ಕರ್ನಾಟಕ ರಾಜ್ಯದ ಒಬ್ಬ ನಮ್ಮ ಮುಸ್ಲೀಂ ಸಹೋದರರೊಬ್ಬರು ರೈಲ್ವೇ ರಾಜ್ಯ ಸಚಿವರಾಗಿದ್ದಾರೆ. ಅವರು ಅಧಿಕಾರವನ್ನು ವಹಿಸಿಕೊಂಡ ಕೂಡಲೇ ನಮಗೊಂದು ವಿಶೇಷವಾದ ಕಾರ್ಯವನ್ನು ಮಾಡಿಕೊಟ್ಟಿದ್ದಾರೆ, ಅದು ಏನೆಂದರೆ ಟಿಪ್ಪು ಎಕ್ಸ್‌ಪ್ರೆಸ್ ಅಂತ ಹೊಸದಾಗಿ ಒಂದು ರೈಲನ್ನು ಮೈಸೂರು–ಬೆಂಗಳೂರು ನಗರಗಳಿಗೆ ಓಡಾಡುವಂತೆ ಏರ್ಪಾಡು ಮಾಡಿದ್ದಾರೆ. ಆ ರೀತಿ ಮಾಡಿಸಿಕೊಡುವುದಾಗಿ ಮುಂಚಿತವಾಗಿಯೇ ಅವರು ಹೇಳಿದ್ದರು. ಈಗ ಅದರಂತೆ ಮಾಡಿಸಿ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಮೈಸೂರು ಮತ್ತು ಬೆಂಗಳೂರು ಜನತೆಯ ಪರವಾಗಿ ಹೃತ್ಪೂರ್ವಕವಾಗಿ ಅವರನ್ನು ಅಭಿನಂದಿಸುತ್ತೇನೆ, ಮತ್ತೆ ಮೈಸೂರು ಬೆಂಗಳೂರು ಮಾರ್ಗವನ್ನು ಬ್ರಾಡ್‌ಗೇಜ್ ಆಗಿ ತ್ವರಿತ ಗತಿಯಲ್ಲಿ ಮಾಡಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಕೂಡ ಹೇಳಿದ್ದಾರೆ ; ಇದನ್ನು ಕೂಡ ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಇನ್ನು ಉಕ್ಕಿನ ಕಾರ್ಖಾನೆ ಬಗ್ಗೆ ಶ್ರೀ ಎಚ್. ಟಿ. ಕೃಷ್ಣಪ್ಪನವರು ಹೇಳಿದ್ದಾರೆ, ಅದನ್ನೇ ನಾನು ಇನ್ನೊಂದು ಸಾರಿ ಹೇಳಿದರೆ ತಪ್ಪಾಗಲಾರದು. ಇದು ಬಹಳ ವರ್ಷಗಳಿಂದ ವಿಳಂಬವಾಗಿದೆ. ಇದನ್ನು ಆದಷ್ಟು ಜಾಗ್ರತೆ ಪ್ರಾರಂಭ ಮಾಡಿಸುವುದಾಗಿ ಮೊನ್ನೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ, ಇದು ನಿಜವಾಗಿಯೂ ತ್ವರಿತ ಗತಿಯಲ್ಲಿ ಆಗಬೇಕಾದ ಕಾರ್ಯ. ಇನ್ನು ಮುಂದಾದರೂ ಇದು ಆದಷ್ಟು ಬೇಗ ಆಗುತ್ತದೆಂದು ತಿಳಿದುಕೊಂಡಿದ್ದೇನೆ, ಈ ಕೆಲಸ ಆದರೆ ಕರ್ನಾಟಕ ರಾಜ್ಯಕ್ಕೆ ಒಂದು ದೊಡ್ಡ ಉದ್ದಿಮೆ ಆದ ಹಾಗೆ ಆಗುತ್ತದೆ. ಆ ದೃಷ್ಟಿಯಿಂದ ಇದು ಆದಷ್ಟು ಬೇಗ ಆಗಲಿ ಎಂದು ಹಾರೈಸುತ್ತೇನೆ.

ಇನ್ನು ಕೊಳಚೆ ಪ್ರದೇಶಗಳ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ನಗರದಲ್ಲಿ ಈ ಭಾಷಣದಲ್ಲಿ ನಮೂದಾಗಿರುವ ರೀತಿಯಲ್ಲಿ ೧೫೦ ಕ್ಕೂ ಹೆಚ್ಚಿನ ಕೊಳಚೆ ಪ್ರದೇಶಗಳಿವೆ ಎಂದು ಹೇಳಿದ್ದಾರೆ. ಇವತ್ತು ಇತರೇ ನಗರದಲ್ಲಿ ಎಷ್ಟು ಇದ್ದಾವೆ ಎನ್ನುವ ಬಗ್ಗೆ ಅವರು ಅಂಕಿ ಅಂಶ ಗಳನ್ನು ಕೊಟ್ಟಿಲ್ಲ. ಬೆಂಗಳೂರು ನಗರ ಕರ್ನಾಟಕದ ರಾಜಧಾನಿ. ಇಲ್ಲಿಯೇ ೧೫೦ ಕೊಳಚೆ ಪ್ರದೇಶ ಗಳು ಇವೆ ಎಂದು ಹೇಳಿದರೆ, ಬೆಂಗಳೂರು ನಗರ ಕರ್ನಾಟಕದ ರಾಜಧಾನಿ ಎನ್ನುವುದಕ್ಕೆ ಬದಲು ಮುಂದೆ ಅದು ಕೊಳಚೆ ಪ್ರದೇಶಗಳ ನಗರವೆಂದು ಹೆಸರು ಬಂದೀತು ಎನ್ನುವ ಅನುಮಾನ ಶಂಕೆ ನನಗೆ ಉಂಟಾಗಿದೆ.

ಶ್ರೀ ಎಂ. ಚಂದ್ರಶೇಖರ.—ಈಗ ೪೦೦ಕ್ಕೂ ಮೇಲ್ಪಟ್ಟು ಇವೆ. ೧೫೦ ಎಂದು ಹೇಳಿರುವುದು ಯಾವುದೋ ಹಿಂದಿನ ಕಾಲದ ಲೆಕ್ಕ.

ಶ್ರೀ ಕೆ. ಎ. ಕೆಂಗೇಗೌಡ.—೧೫೦ಕ್ಕೂ ಹೆಚ್ಚು ಇದ್ದಾವೆಂದು ಇವರಲ್ಲಿ ಹೇಳಿದ್ದಾರೆ. ತಾವು ಹೇಳುವ ರೀತಿಯಲ್ಲಿ ಅನ್‌ರೆಕಗ್ನೈಜ್ಡ್ ಸ್ಲಂಗಳು ಇವೆ. ಇವುಗಳ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳು ತ್ತೇವೆಂದು ಹೇಳಿದ್ದಾರೆ. ಸರ್ಕಾರದವರು ಇವುಗಳ ಬಗ್ಗೆ ಹೆಚ್ಚಿನ ಕ್ರಮ ತೆಗೆದುಕೊಂಡು ಸ್ಲಂಗಳನ್ನು ನಿರ್ಮೂಲನ ಮಾಡಬೇಕಾಗಿದೆ, ಅದಕ್ಕಾಗಿ ಒಂದು ಸ್ಲಂ ಕ್ಲಿಯರೆನ್ಸ್ ಬೋರ್ಡ್ ಅಂತ ಕೂಡ ಇದೆ. ಅದು ಸಹ ತನ್ನ ಕಾರ್ಯವನ್ನು ಮಾಡುತ್ತಿದೆ. ಆದರೆ ದಿನೇ ದಿನೇ ಕೊಳಚೆ ಪ್ರದೇಶಗಳು ಹೆಚ್ಚುತ್ತಿರು ವುದನ್ನು ತಡೆಗಟ್ಟುವ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಬೇಕಾಗಿದೆ. ಅದಕ್ಕೆ ನನ್ನ ಒಂದು ಸಲಹೆ ಏನೆಂದರೆ, ಈಗ ಏನು ಸ್ಲಂಕ್ಲಿಯರೆನ್ಸ್ ಬೋರ್ಡ್ ಸ್ಲಂಗಳನ್ನು ಕ್ಲಿಯರ್ ಮಾಡತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆಯೋ ಅದೇ ರೀತಿಯಲ್ಲಿ ಸ್ಲಂ ಪ್ರಿವೆನ್‌ಷನ್ ಬೋರ್ಡ್ ಅಂತ ಮಾಡಿದರೆ ಉತ್ತಮ. 'Prevention is better than cure' ಎನ್ನುವ ಗಾದೆಯ ಹಾಗೆ ಹೊಸದಾಗಿ ಸ್ಲಂಗಳು ಬಾರದೇ ಇರುವ ಹಾಗೆ ನೋಡಿಕೊಳ್ಳಲು ಇದು ಸಹಾಯಕವಾಗಿರುತ್ತದೆ. ಇದನ್ನು ಮಾಡಿದರೆ ಇದರಿಂದ ಯಾವುದೇ ನಗರದಲ್ಲಿ ಮೈಸೂರು, ಬೆಂಗಳೂರು, ಬೆಳಗಾಂ ಅಥವಾ ಧಾರವಾಡ ಹುಬ್ಬಳ್ಳಿ ನಗರದಲ್ಲಿ ಹೊಸದಾಗಿ ಏನು ಕೊಳಚೆ ಪ್ರದೇಶಗಳು ಉದ್ಭವವಾಗುತ್ತವೆ, ಅವು ಬೆಳೆಯದ ರೀತಿಯಲ್ಲಿ ಈ ಬೋರ್ಡ್ ಕ್ರಮ ತೆಗೆದುಕೊಳ್ಳಲು ಅನುಕೂಲವಾಗುತ್ತದೆ.

ಶ್ರೀ ಎಂ. ಚಂದ್ರಶೇಖರ.—ಇದನ್ನು ನಗರ ಸಭೆಯವರೇ ಚೆನ್ನಾಗಿ ನಿರ್ವಹಿಸಬಹುದಲ್ಲಾ.

ಶ್ರೀ ಕೆ. ಎ. ಕೆಂಗೇಗೌಡ. ಇಲ್ಲಿಯವರೆಗೆ ಸರಿಯಾಗಿ ನಿರ್ವಹಿಸುವುದಕ್ಕೆ ಆಗದೇ ಇರುವುದರಿಂದಲೇ ಕೊಳಚೆ ಪ್ರದೇಶಗಳು ಬೆಳೆದುಕೊಂಡು ಬಂದಿವೆ. ಆ ರೀತಿ ಒಂದು ಸಂಸ್ಥೆ ಮಾಡಿ ಅದರ ಕೆಲಸ ಕಾರ್ಯಗಳ ಬಗ್ಗೆ ಕೆಲವು ರೂಪ ರೇಷೆಗಳನ್ನು ಕೊಡತಕ್ಕಂಥದ್ದು ಸೂಕ್ತವೆಂದು ನಾನು ಸಲಹೆ ಕೊಡಬಯಸುತ್ತೇನೆ

ಮತ್ತೆ ವಿದ್ಯಾವಂತರಲ್ಲಿ ಕೆಲವರು ಇನ್‌ವ್ಯಾಲಿಡ್ಸ್ ಇರುತ್ತಾರೆ. ಇನ್‌ವ್ಯಾಲಿಡ್ಸ್ ಅಂತ ಹೇಳಿದರೆ, ಒಂದು ಕಾಲು ಕುಂಟರೋ, ಇಲ್ಲ ಕುರುಡನೋ ಆಗಿರುತ್ತಾನೆ. ಅಂಥವರಿಗೆ ಸರ್ಕಾರದವರು ಎರಡು ಪರ್ಸೆಂಟೇಜನ್ನು ಉದ್ಯೋಗದಲ್ಲಿ ಮೀಸಲಾತಿ ಇಡಬೇಕೆಂದು ಒಂದು ಖಾಯಂ ಆಜ್ಞೆಯನ್ನು ಮಾಡಿದ್ದಾರೆ. ಆದರೆ ಇದರ ಬಗ್ಗೆ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿಲ್ಲ. ಸಮರ್ಪಕವಾಗಿ ನಡೆಯುತ್ತಿಲ್ಲ ವೆಂದು ನನ್ನ ಅಭಿಪ್ರಾಯ. ಕೆಲವು ಇನ್‌ವ್ಯಾಲಿಡ್ಸ್ ಆಗಿರತಕ್ಕಂಥವರು ಅನೇಕ ಇಲಾಖೆಗಳಲ್ಲಿ ಟೆಂಪರರಿಯಾಗಿ ಅಲ್ಲಲ್ಲಿ ಕೆಲಸ ಮಾಡುತ್ತಿದ್ದಾರೆ. ಅಂಥವರಲ್ಲಿ ಕೆಲವು ಜನ ನನ್ನನ್ನು ಬಂದು ನೋಡಿ ದರು. ಅವರು ಹೇಳುತ್ತಿದ್ದರು, ಸ್ವಾಮಿ ನಮಗೆ ಬಹಳ ತೊಂದರೆಯಾಗಿದೆ, ರೆಗ್ಯುಲರ್ ಆಗಿ ಇಂಟರ್‌ವ್ಯೂ ಕರೆದಾಗ ೨ ಪರ್ಸೆಂಟ್ ರಿಜರ್ವೇಷನ್ ಪ್ರಕಾರ ನಮಗೆ ಕೆಲಸ ಕೊಡುತ್ತಿಲ್ಲ ಮತ್ತೆ ಎಲ್ಲೆಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ ನಮ್ಮ ಕೆಲಸವನ್ನು ರೆಗ್ಯುಲರೈಜ್ ಮಾಡಿದರೆ ಸಾಕು ನಮ್ಮ ತೊಂದರೆ ತಪ್ಪುತ್ತದೆಂದು ಹೇಳಿದರು. ಈ ಬಗ್ಗೆ ಸರ್ಕಾರ ಗಮನ ಹರಿಸದಿರುವುದು ಸರಿಯಲ್ಲವೆಂದು ಹೇಳ ಬಯಸುತ್ತೇನೆ.

ಬೆಂಗಳೂರು ನಗರದಲ್ಲಿ ವರ್ತುಲಾಕಾರದ ರಸ್ತೆಯನ್ನು ಅಭಿವೃದ್ಧಿಪಡಿಸುವ ಮೂಲಕ ಮತ್ತು ವರ್ತುಲಾಕಾರದ ರೈಲು ಮಾರ್ಗವನ್ನು ಅಭಿವೃದ್ಧಿಗೊಳಿಸುವಂತೆ ಭಾರತ ಸರ್ಕಾರವನ್ನು ಕೋರುವ ಮೂಲಕ ಸಂಚಾರದ ಒತ್ತಡವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತೇವೆ ಎಂದು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಬೆಂಗಳೂರು ನಗರ ಮಾತ್ರವಲ್ಲದೆ ರಾಜ್ಯದ ಇತರ ನಗರಗಳಲ್ಲೂ ಸಹ ವರ್ತುಲಾಕಾರದ ರಸ್ತೆಗಳ ನಿರ್ಮಾಣಕ್ಕೆ ಗಮನ ಹರಿಸುವುದು ಸೂಕ್ತ. ವರ್ತುಲಾಕಾರದ ರಸ್ತೆಗಳ ವ್ಯವಸ್ಥೆಯನ್ನು

ಲೋಕೋಪಯೋಗಿ ಇಲಾಖೆಯವರು ವಹಿಸಿಕೊಳ್ಳಬೇಕೇ ಅಥವಾ ಸಂಬಂಧಪಟ್ಟ ನಗರಸಭೆ ಮತ್ತು ಪುರಸಭೆಯವರು ವಹಿಸಿಕೊಳ್ಳಬೇಕೇ ಎನ್ನುವ ಬಗ್ಗೆ ಇನ್ನೂ ಕಾನೂನುಬದ್ಧ ತೀರ್ಮಾನವಾಗಿಲ್ಲ. ಮೈಸೂರು ನಗರದಲ್ಲಿ ಒಂದು ವರ್ತುಲಾಕಾರದ ರಸ್ತೆ ನಿರ್ಮಾಣ ಮಾಡಬೇಕೆಂದು ಹೊರಟು ಅದರ ವ್ಯವಸ್ಥೆ ಯಾರು ನೋಡಿಕೊಳ್ಳಬೇಕೆಂಬ ಬಗ್ಗೆ ಜಿಜ್ಞಾಸೆ ಬಂದು ಇನ್ನೂ ಅದು ಸರಿಯಾದ ರೂಪವನ್ನು ತಾಳಿಲ್ಲ. ಮೈಸೂರು ನಗರವು ಜನಸಂಖ್ಯೆಯ ಆಧಾರದ ಮೇಲೆ ಈ ರಾಜ್ಯದ ಎರಡನೆ ದೊಡ್ಡ ನಗರವಾಗಿದೆ. ಆದುದರಿಂದ, ಬೆಂಗಳೂರು ನಗರದಲ್ಲಿ ವರ್ತುಲಾಕಾರದ ರಸ್ತೆ ನಿರ್ಮಾಣ ಮಾಡುವಾಗ ಮೈಸೂರಿನಲ್ಲೂ ನಿರ್ಮಾಣ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದೂ, ತನ್ಮೂಲಕ ನಗರದ ಸೌಂದರ್ಯವನ್ನು ಕಾಪಾಡುವುದಲ್ಲದೆ ಸಂಚಾರ ಒತ್ತಡವನ್ನು ಕಡಮೆ ಮಾಡಿದಂತಾಗುತ್ತದೆಂದೂ ಮತ್ತು ಇದರ ಬಗ್ಗೆ ತೀವ್ರ ಗಮನ ಕೊಡಬೇಕೆಂದೂ ಹೇಳಬಯಸುತ್ತೇನೆ.

ಇನ್ನು ತೋಟಗಾರಿಕೆ ಕುರಿತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನನ್ನೂ ಹೇಳಿಲ್ಲ. ಆದರೂ, ನಾನು ಒಂದೆರಡು ಮಾತುಗಳನ್ನು ಈ ಕುರಿತು ಹೇಳಬೇಕಾಗಿದೆ. ಇಂದಿನ ಪ್ರಜಾವಾಣಿ ಪತ್ರಿಕೆಯಲ್ಲಿ ತೆಂಗಿನ ಮರಕ್ಕೆ ಬರುವ ಕಾಯಿಲೆಯೊಂದರ ಸುದ್ದಿ ಬಂದಿದೆ. ತೆಂಗಿನ ಮರಗಳು ರಾಷ್ಟ್ರದ ಸ್ವತ್ತು. ಇಂದು ತೆಂಗು ಮತ್ತು ಅಡಿಕೆ ಮರಗಳಿಗೆ ಬರುವ ಕಾಯಿಲೆಗಳ ಬಗ್ಗೆ ತೋಟಗಾರಿಕೆ ಇಲಾಖೆಯವರು ಸೂಕ್ತ ಗಮನ ಕೊಡದೆ ಇರುವುದರಿಂದ, ತೆಂಗು ಮತ್ತು ಅಡಿಕೆ ತೋಟಗಳ ಆಜುಬಾಜಿನಲ್ಲಿ ಜಮೀನಿರುವವರು ಹೊಸದಾಗಿ ತೆಂಗು ಮತ್ತು ಅಡಿಕೆ ತೋಟಗಳನ್ನು ಮಾಡಲು ಮುಂದೆ ಬರುವುದಿಲ್ಲ. ಮೈಸೂರು ರಸ್ತೆಯಲ್ಲಿರುವ ನಿಡಘಟ್ಟ ಮತ್ತು ಚನ್ನಪಟ್ಟಣದ ಪ್ರದೇಶಗಳಲ್ಲಿ ತೆಂಗಿನ ಮರಗಳಿಗೆ ಎರಡು ರೀತಿಯ ರೋಗಗಳು ಬಂದಿದೆ. ಮೊದಲನೆಯ ರೋಗವೆಂದರೆ, ತೆಂಗಿನ ಮರಗಳ ಗರಿಗಳು ಮೊದಲು ಜೋತು ಬೀಳುತ್ತದೆ. ಕೆಲವಾರು ದಿವಸಗಳ ನಂತರ ಮರಗಳನ್ನು ಅಳ್ಳಾಡಿಸಿದರೆ ಅವು ಬುಡ ಸಮೇತ ಬಿದ್ದು ಹೋಗುತ್ತವೆ. ಇದು ಇಂದಿನ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮತ್ತೊಂದು ಬೆಂಕಿ ರೋಗ ಎನ್ನುವ ಕಾಯಿಲೆ ತೆಂಗಿನ ಮರಗಳಿಗೆ ಬರುತ್ತಿದೆ. ಈ ಕಾಯಿಲೆಯಲ್ಲಿ ತೆಂಗಿನ ಗರಿಗಳು ಒಣಗಿ ಹೋಗುತ್ತವೆ ಹೀಗೆ ಕಾಯಿಲೆಗಳು ಬಂದು ಹತ್ತು-ಇಪ್ಪತ್ತು ವರ್ಷಗಳ ಕಾಲ ಕಷ್ಟಪಟ್ಟು ಬೆಳೆಸಿದ ತೆಂಗಿನ ಮರಗಳು ಒಂದೇ ಸಾರಿಗೆ ನಶಿಸಿ ಹೋಗುವುದಾದರೆ, ತೆಂಗಿನ ತೋಟಗಳನ್ನು ಮಾಡಿರುವ ರೈತರ ಗತಿ ಏನು? ಹೊಸದಾಗಿ ತೆಂಗಿನ ತೋಟಗಳನ್ನು ಮಾಡಲು ಹೊರಟಿರುವ ಆಜುಬಾಜಿನ ರೈತರ ಮೇಲೆ ಇದರಿಂದ ಎಂತಹ ಪರಿಣಾಮ ಬೀರುತ್ತದೆ. ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ತೋಟಗಾರಿಕೆ ಇಲಾಖೆಯವರು ಈ ಬಗ್ಗೆ ಸೂಕ್ತ ತಿಳುವಳಿಕೆಯನ್ನು ರೈತರಿಗೆ ಕೊಡಬೇಕು. ಕಾಯಿಲೆ ಬಂದಾಗ ಅದನ್ನು ಗುಣಪಡಿಸಲು ಬೇಕಾದ ಔಷಧೋಪಚಾರದ ಕ್ರಮಗಳನ್ನೂ ಅವರು ಕೈಗೊಳ್ಳಬೇಕು. ಆಗ ಮಾತ್ರ ರೈತರು ಧೈರ್ಯವಾಗಿರುತ್ತಾರೆ. ಕೆಲವು ಕಾಯಿಲೆಗಳನ್ನು ತಡೆಗಟ್ಟಲು ತೆಂಗಿನ ಮರಕ್ಕೆ ಔಷಧಿಯನ್ನು ಇಂಜಕ್ಷನ್ ಮೂಲಕ ಕೊಡುತ್ತಾರೆಂದು ಕೇಳಿದ್ದೇನೆ. ಹಾಗೆ ಔಷಧಿ ಕೊಟ್ಟ ಮರಗಳ ಎಳನೀರನ್ನು ಕುಡಿದರೆ ಮನುಷ್ಯನ ಶರೀರದ ಮೇಲೆ ವಿಷದ ಪರಿಣಾಮವನ್ನುಂಟು ಮಾಡುತ್ತದೆ ಎಂದು ತಿಳಿದು ಬಂದಿದೆ. ಆದುದರಿಂದ, ರೈತರಿಗೆ ಅಂತಹ ತೆಂಗಿನ ಮರಗಳ ಎಳನೀರನ್ನು ಯಾರಿಗೂ ಕುಡಿಯಲಿಕ್ಕೆ ಕೊಡಬಾರದೆಂದು ತಿಳುವಳಿಕೆ ನೀಡಬೇಕು. ಜೊತೆಗೆ ಇಂಜಕ್ಷನ್ ಕೊಟ್ಟ ಇಷ್ಟು ತಿಂಗಳವರೆಗೆ ಹಾಗೆ ಕಾಯಿಲೆಗಳನ್ನು ಬಿಟ್ಟಿದ್ದು ನಂತರ ಕುಡಿದರೆ ಏನೂ ಹಾನಿ ಸಂಭವಿಸುವುದಿಲ್ಲವೆಂದೂ ರೈತನಿಗೆ ತಿಳಿಸಬೇಕು ಇಂತಹ ದುಷ್ಪರಿಣಾಮ ಬೀರುವ ಸನ್ನಿವೇಶಗಳನ್ನು ಸಾರ್ವಜನಿಕರಿಗೂ ಮತ್ತು ರೈತರಿಗೂ ಪ್ರಚಾರದ ಮೂಲಕ ತಿಳುವಳಿಕೆ ನೀಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಸೌದೆ ಅಭಾವದ ವಿಷಯವನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ. ರಾಷ್ಟ್ರೀಯ ಶೇಕಡವಾರು ಸುಮಾರು ೩೩ ಪರ್ಸೆಂಟ್ ಕಾಡು ಇರಬೇಕೆಂದು ನಿಯಮ ಇದೆ ಆದರೆ, ನಮ್ಮ ರಾಜ್ಯದಲ್ಲಿ ಶೇಕಡ ೧೩ರಷ್ಟು ಮಾತ್ರ ಕಾಡು ಇದೆ ಎಂದು ಗೊತ್ತಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರಿಗೆ ಮರಗಳನ್ನು ಬೆಳೆಸುವ ಬಗ್ಗೆ ಸೂಕ್ತ ತಿಳುವಳಿಕೆ ನೀಡಬೇಕು. ಬಸರಿ, ಆಲ ಮುಂತಾದ ಮರಗಳ ಕೊಂಬೆಗಳನ್ನು ನೆಟ್ಟರೆ ಅವುಗಳು ಚಿಗುರಿ ಮೂರು ನಾಲ್ಕು ವರ್ಷಗಳಲ್ಲೇ ಮರಗಳಾಗಿ ಬೆಳೆಯುವುದನ್ನು ಕಂಡಿದ್ದೇವೆ. ಬಹಳ ಸುಲಭ ಕ್ರಮದಲ್ಲಿ ಇವುಗಳನ್ನು ಬೆಳೆಯಬಹುದು. ಈ ಮರಗಳಿಗೆ ಸದಾ ಮಳೆ ಬೇಕಾಗಿಲ್ಲ ಮತ್ತು ನಿತ್ಯ ನೀರು ಹಾಯಿಸಬೇಕಾಗಿಲ್ಲ. ಸೌದೆ ಅಭಾವವನ್ನು ನೀಗಿಸಲು ಇಂತಹ ಮರಗಳು ಬಹಳ ಉಪಯೋಗಕಾರಿಯಾಗಿವೆ. ಈಗ ನಾವು ಸೌದೆಗಾಗಿ ಮರಗಳನ್ನು ಕಡಿಯುತ್ತಿರುವ ಪ್ರಮಾಣದಲ್ಲೇ ಮರಗಳನ್ನು ಕಡಿಯುತ್ತಿದ್ದರೆ ಇನ್ನು ಇಪ್ಪತ್ತೈದು ವರ್ಷಕ್ಕೆ ಸೌದೆ ಸಿಗದೆ

ಹೋಗುವ ಪರಿಸ್ಥಿತಿ ಬರಬಹುದು. ಆದುದರಿಂದ, ಸುಲಭ ರೀತಿಯಲ್ಲಿ ಮರಗಳನ್ನು ಬೆಳೆಸುವ ಬಗ್ಗೆ ರೈತರಿಗೆ ತಿಳುವಳಿಕೆ ಕೊಡುವುದಲ್ಲದೆ ಅವರಿಗೆ ಉತ್ತೇಜನವನ್ನೂ ಕೊಡಬೇಕು. ಸೌದೆ ಬೆಲೆ ಇಂದು ಅಕ್ಕಿ ರಾಗಿಗಿಂತಲೂ ಜಾಸ್ತಿಯಾಗಿದೆ. ಸೌದೆ ಅಭಾವದಿಂದಾಗಿ ಅದರ ಬೆಲೆ ಸಹ ಏರಿದೆ. ಸೌದೆ ಅಭಾವ ಮತ್ತು ಬೆಲೆ ಏರಿಕೆಯಿಂದಾಗಿ ಜನರಲ್ಲಿ ಹಾಹಾಕಾರ ಉಂಟಾಗಿದೆ. ಆದುದರಿಂದ, ಪಟ್ಟಣಗಳಲ್ಲೂ ಮತ್ತು ಹಳ್ಳಿಗಳಲ್ಲೂ ಸೌದೆಯ ಅಭಾವದಿಂದಾಗಿ ಉಂಟಾಗಿರುವ ಹಾಹಾಕಾರವನ್ನು ನೀಗಿಸಲು ಸೂಕ್ತ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕೆಂದು ಪ್ರಾರ್ಥಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಹೆಚ್. ಟಿ. ಕೃಷ್ಣಪ್ಪನವರು ಮತ್ತು ಕೆಂಗೇಗೌಡರು ಮಾಡಿರತಕ್ಕ ಭಾಷಣವನ್ನು ನಾನು ಕೇಳಿದಮೇಲೆ, ಸ್ವಲ್ಪ ವಿವರವಾಗಿ ರಾಜ್ಯಪಾಲರ ಭಾಷಣದ ಮೇಲೆ ನಾನು ಹೇಳಲೇಬೇಕಾಗುತ್ತದೆ. ರಾಜ್ಯಪಾಲರು ಭಾಷಣ ಮಾಡಲೇ ಬೇಕೂಂತ ಏನೂ ಇಲ್ಲ. ನಾವು ಬ್ರಿಟೀಷ್ ಪಾರ್ಲಿಮೆಂಟರಿ ಪದ್ಧತಿಯನ್ನು ಒಪ್ಪಿಕೊಂಡಿರುವುದರಿಂದ ಇಲ್ಲಿ ಭಾಷಣಮಾಡಬೇಕಾಗಿದೆ. ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರು ರಾಜ್ಯಾಂಗ ರಚನೆ ಮಾಡಿದಂಥ ಸಂದರ್ಭದಲ್ಲಿ ಇದನ್ನು ಬರೆದರು. ರಾಜ್ಯಪಾಲರ ಭಾಷಣದಲ್ಲಿ ಎರಡು ಉದ್ದೇಶಗಳನ್ನು ನಾವು ನೋಡಬೇಕಾಗಿದೆ. ಒಂದನೆಯ ಉದ್ದೇಶ ಎಂದರೆ ಯಾವ ರೀತಿಯ ಸರ್ಕಾರ ಅಸ್ತಿತ್ವದಲ್ಲಿದೆ, ಮತ್ತು ರಾಜ್ಯದಲ್ಲಿ ಅಂಥ ಸರ್ಕಾರ ಪ್ರತಿ ವರ್ಷ ಮಾಡತಕ್ಕ ಗಹನವಾದ ಕೆಲಸಗಳ ವಿವರಗಳ ಪಟ್ಟಿಯ ಮಂಡನೆ. ಎರಡನೆಯದು ರಾಜ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಹೋಗಲಾಡಿಸುವುದರಲ್ಲಿ ಯಾವರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಂಬ ಎರಡು ಉದ್ದೇಶಗಳನ್ನು ಒಳಗೊಂಡಂತ ಭಾಷಣ ಇದು ಆಗಿರಬೇಕು. ಆದರೆ, ಈ ಭಾಷಣವನ್ನು ನೋಡಿದಾಗ, ಈ ಎರಡು ಉದ್ದೇಶಗಳನ್ನೂ ಕೂಡ ಸಮಂಜಸವಾಗಿ ನಮೂದು ಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮೊದಲನೆಯದಾಗಿ ರಾಜ್ಯಾಂಗದಲ್ಲಿರತಕ್ಕ ಮೂಲಭೂತ ಹಕ್ಕು ಮತ್ತು ಅದರಲ್ಲಿರತಕ್ಕ ಧ್ಯೇಯಧೋರಣೆಗಳನ್ನು ಯಾವ ರೀತಿ ಅನುಷ್ಠಾನಕ್ಕೆ ಸರ್ಕಾರ ತರುತ್ತದೆ, ಅದನ್ನು ಕಾರ್ಯಗತ ಮಾಡತಕ್ಕ ವಿಷಯವನ್ನು ಸ್ಪಷ್ಟವಾಗಿ ರಾಜ್ಯಪಾಲರ ಭಾಷಣದಲ್ಲಿ ಬರೆಯಲೇಬೇಕು. ಆ ವಿಚಾರವನ್ನು ಈ ಭಾಷಣದಲ್ಲಿ ಪ್ರಸ್ತಾಪಮಾಡಲೇ ಇಲ್ಲ ಆದರೆ, ಈ ಸರ್ಕಾರ ಯಾವರೀತಿ ಅಸ್ತಿತ್ವಕ್ಕೆ ಬಂತು ಎನ್ನುವ ವಿಚಾರ, ಮತ್ತೆ ಈ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಯಾವ ಪರಿಸ್ಥಿತಿ ಇತ್ತುಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಲೇಬೇಕಾಗುತ್ತದೆ. ಲೋಕಸಭೆ ಚುನಾವಣೆ ನಡೆದು ಪೂರ್ಣವಾಗಿ ಫಲಿತಾಂಶಗಳು ಹೊರಬೀಳುವ ಮುನ್ನ ಅಂದರೆ ೭ನೇ ತಾರೀಖು ಶ್ರೀಮಾನ್ ದೇವರಾಜ ಅರಸ್‌ರವರು ಸರ್ಕಾರಕ್ಕೆ ರಾಜೀನಾಮೆ ಕೊಟ್ಟರು. ಕರ್ನಾಟಕದ ಜನತೆ ನಮ್ಮ ಪಕ್ಷಕ್ಕೆ ಮನ್ನಣೆಕೊಡಲಿಲ್ಲವೆಂದು ಶ್ರೀಮಾನ್ ದೇವರಾಜ್ ಅರಸ್‌ರವರು ರಾಜೀನಾಮೆ ಕೊಡುವುದರ ಮೂಲಕ ಪ್ರಜಾತಂತ್ರಕ್ಕೆ ಒಳ್ಳೆಯ ಸೇವೆಯನ್ನು ಸಲ್ಲಿಸಿದ್ದಾರೆ. ಮಾನ್ಯ ದೇವರಾಜ್ ಅರಸ್ ಅವರಿಗೆ ಬಹುಮತದ ಬೆಂಬಲ ಇದ್ದರೂ ಕೂಡ ನಾವು ಮತ್ತೆ ಅಧಿಕಾರದಲ್ಲಿ ಮುಂದುವರಿಯುವುದು ಸರಿಯಲ್ಲವೆಂದು ತಿಳಿದು ರಾಜೀನಾಮೆ ಕೊಡುವ ಮೂಲಕ ಮೇಲ್ಪಂಕ್ತಿ ಹಾಕಿಕೊಟ್ಟರು. ಇವರ ಮೇಲ್ಪಂಕ್ತಿಯನ್ನು ಬೇರೆ ರಾಜ್ಯಗಳವರು ಅನುಸರಿಸಿದ್ದರೆ ಇವತ್ತು ಆ ರಾಜ್ಯಗಳ ವಿಧಾನ ಸಭೆಯನ್ನು ವಿಸರ್ಜನೆ ಮಾಡತಕ್ಕ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಶ್ರೀಮಾನ್ ದೇವರಾಜ ಅರಸ್ ಅವರು ರಾಜೀನಾಮೆ ಕೊಡದೇ ಹೋಗಿದ್ದರೆ ಏನಾಗುತ್ತಿತ್ತು ಎನ್ನುವ ಪ್ರಶ್ನೆ ಇತ್ತು. ಅಲ್ಲಿರತಕ್ಕ ಸ್ನೇಹಿತರು ಯಾರಾದರು ಒಬ್ಬರು ಸರ್ಕಾರ ನಡೆಸಿಕೊಂಡು ಹೋಗಬಹುದಿತ್ತು ಎನ್ನುವ ಅಭಿಪ್ರಾಯಗಳು ಇದ್ದವು. ಆದರೆ, ನಾನು ಸ್ಪಷ್ಟವಾಗಿ ಹೇಳುತ್ತೇನೆ, ಒಂದು ಪಕ್ಷ ದೇವರಾಜ ಅರಸ್ ಅವರು ಸರ್ಕಾರವನ್ನು ಮುಂದುವರಿಸಿ ಕೊಂಡು ಬಂದಿದ್ದರೂ ಕೂಡ, ಇಲ್ಲವೇ ಅವರ ಸ್ನೇಹಿತರು ಮುಂದುವರಿಸಿಕೊಂಡು ಬಂದಿದ್ದರೂ ಕೂಡ ಶ್ರೀಮತಿ ಇಂದಿರಾಗಾಂಧಿಯವರು ಆ ರೀತಿ ಮುಂದುವರಿಯುವುದಕ್ಕೆ ಬಿಡುತ್ತಾ ಇರಲಿಲ್ಲ. ನಾವು ರಾಜೀನಾಮೆಯನ್ನು ಯಾರಿಗೂ ಹೆದರಿಕೊಂಡು ಕೊಟ್ಟಿಲ್ಲ, ರಾಜೀನಾಮೆ ಕೊಡುವುದರ ಮೂಲಕ ಕರ್ನಾಟಕ ಜನತೆಯ ವಿಶ್ವಾಸಕ್ಕೆ ಪಾತ್ರರಾಗಿದ್ದೇವೆ. ತಾ : ೧೨-೨-೧೯೮೦ ರಂದು ಶ್ರೀಮಾನ್ ಗುಂಡೂರಾಯರು ಹೊಸ ಸರ್ಕಾರ ರಚನೆ ಮಾಡಿದರು, ಚುನಾವಣೆಗೆ ಮುಂಚೆ ಅವರ ಬೆಂಬಲಿಗರ ಸಂಖ್ಯೆ ೪೩ ಇತ್ತು. ಇವತ್ತು ನಮ್ಮ ಜೊತೆಯೇ ಇದ್ದಂತ ಸ್ನೇಹಿತರು ಅಲ್ಲಿಗೆ ಹೋಗಿದ್ದಾರೆ, ನಾನು ಈಗ ಅದರ ಗೋಜಿಗೆ ಹೋಗುವುದಿಲ್ಲ. ಇವರು ಹೋದ ನಂತರ ಸಂಖ್ಯೆ ಜಾಸ್ತಿ ಆಯಿತು. ಸರ್ಕಾರ ರಚನೆ ಮಾಡಿದಮೇಲೆ ಯಾವರೀತಿಯಾಗಿ ಸರ್ಕಾರ ನಡೆಸಿಕೊಂಡು ಹೋಗಬೇಕೆನ್ನುವುದನ್ನು ನಾವು

ಯೋಚಿಸಲೇಬೇಕು. ಮೊದಲು ೪೩ ಜನ ಏನಿದ್ದರು ಅವರಿಗೆ ನನ್ನ ಮನ್ನಣೆ ಉಂಟು. ನಂತರ ಹೋಗಿದ್ದಾರಲ್ಲ, ಅವರು ನನ್ನ ಸ್ನೇಹಿತರೇ ಆಗಿದ್ದರೂ ಸಹ, ಅವರಿಗೆ ನನ್ನ ಮನ್ನಣೆ ಇಲ್ಲ, ಶ್ರೀಮಾನ್ ಗುಂಡೂರಾಯರು ಪಕ್ಷದ ಸಭೆಯನ್ನು ಕರೆದು ನಾಯಕರಾಗಬೇಕಾಗಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಮಗೆ ಬಂದಿರುವ ಕಷ್ಟ ಏನು ಅಂದರೆ, ರಾಜಕಾರಣಿಗಳು ಬಹಳ ಬೇಗ ಮರೆಯುವುದು ಉಂಟು. ಯಾವ ಪಕ್ಷದಲ್ಲಿದ್ದುಕೊಂಡು ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆನ್ನುವುದು ಈಗ ಮರೆತು ಹೋಗಿದೆ. ಪಕ್ಷದ ನಾಯಕರಾಗಿ ಗುಂಡೂರಾಯರು ಚುನಾಯಿತರಾಗಿದ್ದಾರೆ.

೩–೩೦ ಪಿ. ಎಂ.

ಶ್ರೀ ಎಂ. ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ನಾನು ಹೇಳಿದ ವಿಷಯಕ್ಕೂ ಅವರು ಹೇಳಿದ ವಿಷಯಕ್ಕೂ ಬೇರೆ ಬೇರೆಯಾಗುತ್ತದೆ ಇದ್ದ ವಿಷಯ ಇದ್ದ ಹಾಗೆ ಹೇಳಿದರೆ ಕೆಂಡದಂತ ಕೋಪ ಅಂದ ಹಾಗೆ ಆಗಿದೆ. ನಾನು ಇದುವರೆಗೆ ನೋಡಿದಂತೆ ಯಾವುದೇ ರಾಜ್ಯದಲ್ಲಿ ಯಾವ ಪಕ್ಷವೇ ಆಗಲಿ, ಪಕ್ಷದ ಪಾರ್ಟಿಯವರು ಸಭೆಯನ್ನು ಕರೆದು ಯಾರು ಲೀಡರ್ ಆಗುತ್ತಾರೆ, ಅಂತಹವರು ರಾಜ್ಯಪಾಲರನ್ನು ನೋಡಿ ಅನಂತರ ಅವರು ಮುಖ್ಯ ಮಂತ್ರಿಗಳಾಗಿದ್ದು ನನಗೆ ಗೊತ್ತು. ಇವರು ಹಾಗೆ ಮಾಡಲಿಲ್ಲ. ಒಂದು ತರಹ ಪಟ್ಟಿಯನ್ನು ಮಾಡಿದರು, ಗವರ್ನರ್‌ಗೆ ಕೊಟ್ಟರು, ನೀವು ನಿಮ್ಮ ಪಾರ್ಟಿ ಮೀಟಿಂಗ್ ಮಾಡಿರಬಹುದು, ಯಾರನ್ನು ನೀವು ನಾಯಕನನ್ನಾಗಿ ಮಾಡಿಕೊಂಡಿದ್ದೀರಾ ಅವರ ಚುನಾವಣೆ ಮಾಡಲೇ ಬೇಕು. ಶ್ರೀಮಾನ್ ಗುಂಡೂರಾವ್ ಅವರು ನಿಮ್ಮ ಪ್ರತಿನಿಧಿ ಏನು ಅಲ್ಲ. ಯಾವ ಸದನದ ಪಾರ್ಟಿ ಸದಸ್ಯರಿದ್ದಾರೆ ಅವರ ಪ್ರತಿನಿಧಿಯಲ್ಲ, ಅವರು ಯಾರ ಪ್ರತಿನಿಧಿ ಅಂದರೆ ಶ್ರೀಮತಿ ಇಂದಿರಾಗಾಂಧಿ ಯವರು ನಾಮಕರಣ ಮಾಡಿದ ಪ್ರತಿನಿಧಿ. ಅವರನ್ನು ನಾಯಕರನ್ನಾಗಿ ಮಾಡಲೇ ಬೇಕು ಅಂತ ಹೇಳಿದ್ದಾರೆ. ಅದು ಇವರ ಪದ್ಧತಿ. ನಮಗೂ ಇದೇ ಪದ್ಧತಿ ಪ್ರಕಾರ ಮಾಡುತ್ತಿದ್ದರು, ನಾನು ದೇವರಾಜ ಅರಸ್ ವಿರುದ್ಧವಾಗಿ ನಾಯಕ ಚುನಾವಣೆಯಲ್ಲಿ ಸ್ಪರ್ಧೆ ಮಾಡಬೇಕೆಂದು ಇಷ್ಟಪಟ್ಟಾಗ ಅಲ್ಲಿಂದ ಏನು ಫೋನ್ ಬಂತು ಅಂದರೆ ಈಗ ಸದ್ಯಕ್ಕೆ ನೀನು ಸ್ಪರ್ಧೆ ಮಾಡಬೇಡ, ಅವರೇ ಆಗಿರಲಿ, ಈಗ ಸದ್ಯಕ್ಕೆ ಅವರನ್ನು ನಾಮಕರಣ ಮಾಡಿದ್ದೇನೆ ಅಂತ ಹೇಳಿದರು, ಆಗ ನಾನು ಬಿಡಬೇಕಾಯಿತು. ನನ್ನ ಅನುಭವ ಏನಿದೆ ಅದನ್ನು ಹೇಳುತ್ತಿದ್ದೇನೆ. ಇವೊತ್ತು ಮಾನ್ಯ ಗುಂಡೂರಾವ್ ಅವರು ಮುಖ್ಯ ಮಂತ್ರಿಯಾಗಿದ್ದಾರೆ, ಅವರು ಶ್ರೀಮತಿ ಇಂದಿರಾಗಾಂಧಿಯವರ ಪ್ರತಿನಿಧಿ. ನಿಮ್ಮ ಪ್ರತಿನಿಧಿ ಅಂತ ಹೇಳಿದರೆ ನಾನು ಒಪ್ಪಲಿಕ್ಕೆ ತಯಾರು ಇಲ್ಲ. ಅವರಿಗೆ ರಾಜಗುರುಗಳು ಸಹ ಒಬ್ಬರು ಇದ್ದಾರೆ. ನಾನು ಅಲ್ಲೆ ಇದ್ದು ಹೊರಬಂದ ಮನುಷ್ಯ ಆದ್ದರಿಂದ ಹೇಳುತ್ತಿದ್ದೇನೆ. ಇವರಿಗೆ ರಾಜಗುರುಗಳು ಕರ್ನಾಟಕದಲ್ಲಿ ಹಲವಾರು ರೀತಿಯಲ್ಲಿ ಇದ್ದಾರೆ. ಒಬ್ಬರು ಯುವಕರು ಇದ್ದಾರೆ, ಇನ್ನೊಬ್ಬರು ಮಧ್ಯವಯಸ್ಸಿನವರು ಇದ್ದಾರೆ. ಕೆಳಗಿನ ಹಂತದಲ್ಲಿ ಮಾತ್ರ ಯಾವ ತಾಲ್ಲೂಕಿಗೆ ಹೋಗಲಿ ಈ ರಾಜ ಗುರುಗಳ ಪ್ರಭಾವ ಇದ್ದೇ ಇದೆ. ಈಗ ಇವರ ರಾಜಗುರುಗಳು ಏನಿದ್ದಾರೆ ಅವರು ಹೇಳಿದ ಹಾಗೆ ಆಗಬೇಕು. ಅವರು ಹೇಳಿದವರಿಗೆ ಟಿಕೆಟ್ ಸಿಕ್ಕಬೇಕು. ಅವರು ಹೇಳಿದ ಹಾಗೆ ಮುಖ್ಯಮಂತ್ರಿಗಳು ನಡೆದುಕೊಳ್ಳಬೇಕು. ಈ ಮಟ್ಟದಲ್ಲಿ ಅಧಿಕಾರ ನಡೆಯುತ್ತಿದೆ. ರಾಜಗುರುಗಳು ಏನು ಮಾಡುತ್ತಿದ್ದಾರೆ ಅಂದರೆ, ನನಗೆ ತಿಳಿದಮಟ್ಟಿಗೆ ಯಾರು ಯಾರು ಮುಖ್ಯ ಅಧಿಕಾರಿಗಳು ಇದ್ದಾರೆ, ಉನ್ನತ ಸ್ಥಾನದಲ್ಲಿ ದ್ದಾರೆ ಅವರಿಗೆ ಟೆಲಿಫೋನ್ ಮೂಲಕ ಇಂತಹ ಕೆಲಸ ಮಾಡಲೇಬೇಕು ಅಂತ ತಿಳಿಸುವುದು.

ಶ್ರೀ ಹೆಚ್. ಡಿ. ದೇವೇಗೌಡ.—ಅವರ ರಾಜಗುರುಗಳ ಹೆಸರು ಏನು ಅಂತ ತಿಳಿಸಿ.

ಶ್ರೀ ಬಿ. ಬಸವಲಿಂಗಪ್ಪ.—ಅವರಿಗೆ ರಾಜಗುರುಗಳು ಇರತಕ್ಕದ್ದು ಎಲ್ಲರಿಗೂ ಕೂಡ ಗೊತ್ತಿದೆ. ನಿಮಗೆ ಗೊತ್ತಿಲ್ಲ ಅಂದರೆ ಹೇಗೆ ? ಅವರು ಈ ಮನೆಯ ಸದಸ್ಯರು ಅಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಹೆಸರು ಗೊತ್ತಾದರೆ ಕೆಲಸ ಮಾಡಿಸಿಕೊಳ್ಳುವುದಕ್ಕೆ ಅನುಕೂಲ ವಾಗುತ್ತದೆ. ಅದಕೋಸ್ಕರ ಕೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಈ ಮನೆಯ ಸದಸ್ಯರು ಅಲ್ಲ. ಆದ್ದರಿಂದ ಅವರ ಹೆಸರನ್ನು ಹೇಳಿ ಗೊಂದಲ ಉಂಟುಮಾಡಲಿಕ್ಕೆ ನಾನು ಹೋಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರಲ್ಲದೇ ಇರುವವರ ಬಗ್ಗೆ ನಾವು ಆಪಾದನೆ ಮಾಡುವಾಗ ಅವರ ಹೆಸರು ನಮೂದಿಸಬಾರದು, ಪ್ರಸ್ತಾಪ ಮಾಡಬಾರದು ಅಂತ ನಿಯಮ ಇದೆ, ಇಲ್ಲಿ ಈಗ ಅವರಿಗೆ ಉನ್ನತ ಸ್ಥಾನ ಕೊಡುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಈ ರಾಜಗುರುಗಳ ಪಾತ್ರ ಸರ್ಕಾರದ ಮೇಲೆ ಹೆಚ್ಚು ಪರಿಣಾಮಕಾರಿಯಾಗಿ ಬೀರುತ್ತಿದೆ. ಇದರಿಂದ ರಾಜ್ಯದ ಆಡಳಿತ ದಾರಿ ಬಿಟ್ಟು ಹೋಗತಕ್ಕ ಪ್ರಶ್ನೆ ಇದೆ. ಆದಕಾರಣ ಈಗ ಇಲ್ಲಿ ನಾನು ಮಂತ್ರಿಗಳನ್ನು ಕೇಳುವುದೇನೆಂದರೆ, ಈ ರಾಜಗುರುಗಳೇನೂ ಈ ಸದನದಲ್ಲಿ ಸದಸ್ಯರಾಗಿಲ್ಲ. ಆದಕಾರಣ ಇಂತಹವರನ್ನು ದೂರ ಇಡತಕ್ಕುದರ್ದ್ದಿ ಬಹಳ ಒಳ್ಳೆಯದು, ದಯಮಾಡಿ ನಿಮ್ಮ ಕೈಲಿ ಆದರೆ ಆ ಕೆಲಸ ಮಾಡಿ, ಇನ್ನು ಮಾನ್ಯ ಗುಂಡೂರಾವ್ ಅವರು ಮುಖ್ಯ ಮಂತ್ರಿಗಳಾದ ಮೇಲೆ ಉನ್ನತ ಭಾಷಣ ಮಾಡಲಿಕ್ಕೆ ಹೊರಟ್ಟಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.— ಅಧ್ಯಕ್ಷರೆ, ಅವರು ಎಲ್ಲಿಯೋ ಗೂಬೆ ಕೂರಿಸಿ ಮಾತನಾಡುವುದು ಸರಿಯಿಲ್ಲ. ಏನಾದರೂ ವಿಚಾರ ಇದ್ದರೆ ಹೇಳಲಿ. ಈಗ ಮಾನ್ಯ ಸದಸ್ಯರಾದಂಥ ಬಸವಲಿಂಗಪ್ಪನವರು ಒಂದು ರೀತಿಯಲ್ಲಿ ಅಪಾದನೆ ಮಾಡಿಲಿಕ್ಕೆ ಹೊರಟಿದ್ದಾರೆ. ಆಪಾದನೆ ಮಾಡಿಲ್ಲ ಅಂತ ನಾನು ತಿಳಿದುಕೊಂಡಿದ್ದೇನೆ. ಆಪಾದನೆ ಮಾಡುವುದು ಇದ್ದರೆ ಪ್ರಾಮಾಣಿಕ ದೃಷ್ಟಿಯಿಂದ ದಯಮಾಡಿ ವಿಚಾರ ತಿಳಿಸಲಿ. ಇದು ಏನೂ ಇಲ್ಲದೇ ಇದ್ದರೆ ನಮಗೆ ಉತ್ತರ ಕೊಡಲಿಕ್ಕೆ ಕಷ್ಟವಾಗುತ್ತದೆ. ಏಕೆಂದರೆ ಸಮಸ್ಯೆ ಅರ್ಥ ಮಾಡಿಕೊಳ್ಳದಿದ್ದರೆ ಉತ್ತರ ಹೇಳಲಿಕ್ಕೆ ಆಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಕಿರಿಯ ಸ್ನೇಹಿತರು ನನಗೆ ಬಹಳ ದಿವಸದಿಂದ ಗೊತ್ತು. ತಮಗೆ ಚುಚ್ಚಿದರೆ ದಯಮಾಡಿ ಸ್ವಲ್ಪ ತಡೆದುಕೊಳ್ಳಿ. ನಾವು ತಪ್ಪು ಹೆಜ್ಜೆ ಇಟ್ಟಾಗ ತಿಳಿದುಕೊಳ್ಳಬೇಕಾದ್ದು ಅವಶ್ಯಕ. ಶ್ರೀಮಾನ್ ಗುಂಡೂರಾವ್ ಅವರು ಮುಖ್ಯ ಮಂತ್ರಿ ಪದವಿಯಲ್ಲಿ ಅಧಿಕಾರವನ್ನು ನಡೆಸುತ್ತಿದ್ದಾರೆ ಎಂದು ಹೇಳಿದ್ದೇನೆ. ಅವರು ಏನು ಹೇಳಿದ್ದಾರೆ ಅಂದರೆ, ಶ್ರೀಮತಿ ಇಂದಿರಾಗಾಂಧಿಯವರು ದೇವತೆ ಇದ್ದ ಹಾಗೆ, ನಾನು ಆ ದೇವತೆಯ ಪೂಜಾರಿ, ಶ್ರೀ ದೇವರಾಜ ಅರಸ್ ಅವರು ಆ ದೇವತೆಯ ಪೂಜೆ ಮಾಡುವುದನ್ನು ಬಿಟ್ಟು ದೇವತೆ ಆಗಲಿಕ್ಕೆ ಪ್ರಯತ್ನ ಮಾಡಿದರು ಅದಕ್ಕೋಸ್ಕರ ಅಧಿಕಾರ ಕಳೆದುಕೊಂಡರು ಅಂತ ಹೇಳಿದ್ದಾರೆ. ಇದು ಏನಾದರೂ ತಪ್ಪೇ ಸ್ವಾಮಿ ? ತಪ್ಪು ಇಲ್ಲ. ಶ್ರೀಮತಿ ಇಂದಿರಾಗಾಂಧಿಯವರೇ ಸರ್ವಸ್ವ. ಇದ್ದಾರೆ ಇವರು ಮುಖ್ಯ ಮಂತ್ರಿಯಾಗಿದ್ದೇನೆ ಅನ್ನುವ ಅರಿವೇ ಇಲ್ಲ. ಈ ರಾಜ್ಯದ ಮೂರು ಕೋಟಿ ಕನ್ನಡ ಜನ ನಿಮ್ಮ ಕೈಲಿ ಅಧಿಕಾರ ಕೊಟ್ಟಾಗ ನಾನು ಅವರ ಪೂಜಾರಿ, ಅವರಿಗೋಸ್ಕರ ಪೂಜೆ ಮಾಡುತ್ತೇನೆ, ನಾನು ಯಾವತ್ತೂ ಅವರ ಸೇವೆ ಮಾಡುತ್ತೇನೆಂದು ಅವರು ಹೇಳತಕ್ಕ ಮಾತು ರಾಜಕೀಯ ರಂಗದಲ್ಲಿ ಒಳ್ಳೆಯ ಪರಿಣಾಮಕಾರಿಯಾದ ಮಾತು ಅಂತ ಹೇಳಿದರೆ, ನೀವು ಸ್ವತಂತ್ರರಲ್ಲ ಅಂತ ಅರ್ಥವಾಗುತ್ತದೆ. ನೀವು ಅವರು ಹೇಳಿದ ಹಾಗೆ ಕೇಳಿದಂತೆ ಆಗುತ್ತದೆ. ಈ ರೀತಿ ಆದರೆ ರಾಜ್ಯದ ಮುಖ್ಯ ಮಂತ್ರಿಯಾಗಿ ಸ್ವತಂತ್ರವಾಗಿ ನಿರ್ಭೀತಿಯಿಂದ ಕಾರ್ಯನಿರ್ವಹಿಸುತ್ತಾರೆಂಬ ಭರವಸೆ ನಮಗೆ ಇಲ್ಲ. ನೀವು ಪೂಜೆ ಮಾಡಲಿಕ್ಕೆ ಅಭ್ಯಂತರವಿಲ್ಲ. ನಾನೂ ಪೂಜೆ ಮಾಡಿದವನೆ, ನಾನು ಬಹಳ ವರ್ಷ ಪೂಜೆ ಮಾಡಿದ್ದೇನೆ. ನೀವು ೧೦ ವರ್ಷದಿಂದ ಮಾಡಿದ್ದರೆ ನಾನು ೨೦ ವರ್ಷದಿಂದ ಮಾಡಿದ್ದೇನೆ. ನಿಷ್ಠೆಯಿಂದ ಮಾಡಿದ್ದೇನೆ. ಅನಂತರ ನನಗೆ ಅರಿವಾಗಿರುವುದನ್ನು ಹೇಳುತ್ತಿದ್ದೇನೆ. ಇದರ ಪರಿಣಾಮ ಏನಾಗುತ್ತದೆ ?

ಶ್ರೀ ಎಂ. ವೀರಪ್ಪಮೊಯ್ಲಿ.—ಇಂದಿರಾಗಾಂಧಿಯವರ ಪೂಜೆಯನ್ನೇನೋ ಮಾಡಿದಿರಿ, ಅದರೆ ಅದಕ್ಕ ಫಲ ಏನು ಸಿಕ್ಕಿತು ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಕಾಂಗ್ರೆಸ್ ಪ್ರತಿನಿಧಿಯಾಗಿ ಎಲ್ಲ ಕಡೆಗೂ ಭೇಟಿ ಕೊಟ್ಟು ನೋಡಿಕೊಂಡು ಬಂದಿದ್ದೇನೆ. ನಾನ್ನು ಶ್ರೀಮತಿ ಇಂದಿರಾಗಾಂಧಿಯವರ ಹತ್ತಿರ ನಿಷ್ಠೆಯಿಂದ ಇದ್ದ ಮನುಷ್ಯ. ೬ ತಿಂಗಳ ಹಿಂದೆ ನಾನು ಮಂತ್ರಿ ಜಾಗಕ್ಕೆ ರಾಜೀನಾಮೆ ಕೊಡತಕ್ಕ ಪ್ರಸಂಗ ಬಂತು. ಅದರೆ ಆಗ ನಾನು ರಾಜೀನಾಮೆಯನ್ನು ಕೊಡಲಿಲ್ಲ. ನೀವೂ ನನ್ನ ಮನೆಗೆ ಬಂದು ನನ್ನನ್ನು ರಾಜೀನಾಮೆ ಕೊಡುವಂತೆ ಕೇಳಿದಿರಿ. ಅದಕ್ಕೆ ಕ್ಷಮಿಸಿ ಎಂದು ನಾನು ಹೇಳಿದೆ. ರಾಜೀನಾಮೆ ಕೊಡಬೇಕೆಂದು ಯಾರು ಹೇಳಿದರೂ ನಾನು ಕೊಡಲಿಲ್ಲ. ಕಾರಣ ಯಾರು ನಿಷ್ಠೆಯಿಂದ ಸೇವೆ ಸಲ್ಲಿಸಿದರು ಅದರಲ್ಲೂ ನಿಮ್ನವರ್ಗದ ಜನ, ಹಿಂದುಳಿದ ಜನ, ಮುಸಲ್ಮಾನ್ ಜನ ಏನು ತುಳಿತಕ್ಕೆ ಸಿಕ್ಕಿದ್ದರು, ಇಂಥ ಜನರ ಮೇಲೆ ನಂಬಿಕೆ ಇಟ್ಟುಕೊಂಡು ಕೆಲಸಮಾಡಿದವರಿಗೆ ಜವಾಬ್ದಾರಿ ಕೊಡಬೇಕೆಂಬ ಸದ್ಬುದ್ಧಿ ಅಯಮ್ಮನಿಗಿಲ್ಲ

ಮಾನ್ಯ ಗುಂಡೂರಾವ್‌ರವರು ನನ್ನ ಕಿರಿಯ ಸ್ನೇಹಿತರು. ಅವರು ಇವತ್ತಿನದಿವಸ ಮುಖ್ಯ ಮಂತ್ರಿಗಳಾಗಿದ್ದಾರೆ. ಅವರಿಗೆ ಇನ್ನೂ ಬಿಸಿ ರಕ್ತ ಇರುವುದರಿಂದ ಅವರು ಇನ್ನೂ ಹೆಚ್ಚು ಹೆಚ್ಚು ಒಳ್ಳೆಯ ಕೆಲಸಗಳನ್ನು ರಾಜ್ಯದ ಜನತೆಗೆ ಮಾಡಲಿ ಎಂದು ಹಾರೈಸುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಜನತೆಯ ಸ್ವಾತಂತ್ರ್ಯ ಹಗರಣವಾಗಬಾರದು, ತುಳಿತಕ್ಕೆ ಸಿಕ್ಕಿರುವ ಬಡ ಜನ ಏನಿದ್ದಾರೆ ಅವರು ಮೇಲಕ್ಕೆ ಬರಬೇಕು, ಎಂಬ ಒಂದೇ ಒಂದು ಉದ್ದೇಶದಿಂದ ನಾನು ಆ ಕಡೆ ಹೋಗದೆ ನನಗೆ ಬಂದ ಆಹ್ವಾನವನ್ನು ತಿರಸ್ಕಾರಮಾಡಿ ಈ ಕಡೆ ಬಂದು ಕುಳಿತುಕೊಂಡಿದ್ದೇನೆ. ನಾನು ಯಾವತೂ ಈ ಕಡೆ ಕುಳಿತುಕೊಂಡಿದ್ದವನಲ್ಲ. ೧೯೫೭ನೇ ಇಸವಿಯಿಂದಲೂ ನಾನು ಸದಸ್ಯನಾಗಿ ಇಲ್ಲವೇ ಆ ಕಡೆಯೇ ಕುಳಿತಿದ್ದೆ. ಇತ್ತೀಚೀಗೆ ನಾನು ಒಬ್ಬ ಸದಸ್ಯನಾಗಿ ಈ ಕಡೆ ಕುಳಿತ್ತಿದ್ದೆನೆ ತುಳಿತಕ್ಕೆ ಸಿಕ್ಕಿರುವ ಈ ಜನರನ್ನು ಮೇಲಕ್ಕೆತರಬೇಕೆಂಬ ಒಂದು ಆಸೆಯನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡು, ನಾನು ಒಬ್ಬನಾದರೂ ಇದರ ವಿರುದ್ಧ ಸಿಡಿದೆದ್ದು ಕಾರ್ಯಸಾಧನೆ ಮಾಡಬೇಕೆಂಬ ಸಂಕಲ್ಪ ಮಾಡಿದ್ದೇನೆ. ಮುಕ್ಕೋಟಿ ಜನರ ಭವಿಷ್ಯ ನಿರ್ಮಾಣಕ್ಕಾಗಿ ಎಲ್ಲ ಅಧಿಕಾರವನ್ನೂ ಕೈಗೆ ಕೊಟ್ಟಾಗ ಇಂದಿರಾಗಾಂಧಿಯವರು ನನ್ನ ದೇವತೆ ನಾನು ಅವರ ಪೂಜಾರಿ ಎಂದು ಮಾನ್ಯ ಗುಂಡೂರಾಯರು ಹೇಳಿದ್ದು ಸರಿಯಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ದೇವತೆಯಾಗಿ, ಮಾನ್ಯ ಗುಂಡೂರಾಯರು ಪೂಜಾರಿಯಾದರೆ, ಇನ್ನು ಈ ರಾಜ್ಯದ ಜನತೆಯನ್ನು ಯಾವ ಸ್ಥಿತಿಗೆ ತೆಗೆದುಕೊಂಡು ಹೋಗುತ್ತಾರೆಂಬುದನ್ನು ಯೋಚಿಸಬೇಕಾಗಿದೆ. ಇನ್ನು ಎಷ್ಟು ದಿವಸದವರೆಗೆ ನಾವು ವ್ಯಕ್ತಿಪೂಜೆ ಮಾಡಬೇಕು ? ಈ ಬಗ್ಗೆ ಜಾನ್ ಸ್ಟೆಟ್ ವಾರ್ಟ್‌ಮಿಲ್ ಎಂಬುವವರು ಈ ರೀತಿ ಹೇಳಿದ್ದಾರೆ.

> "No country can remain democratic, and no people can preserve the constitutional Government, if the people are imbued with an immoderate sense of Hero-worship." ಎಂದು ;

ನಾನು ಈ ಮಾತನ್ನು ಹೇಳಿ ಒಬ್ಬ ವ್ಯಕ್ತಿಯನ್ನು ದೂಷಣೆ ಮಾಡುತ್ತಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ನಾಯಕಿ ಆಗಬಾರದೆಂದು ನಾನು ಹೇಳುವುದಿಲ್ಲ. ಆದರೆ ನಮ್ಮ ಎಲ್ಲ ಸ್ವಾತಂತ್ರ್ಯವನ್ನೂ ತೆಗೆದುಕೊಂಡು ಹೋಗಿ ಆ ವ್ಯಕ್ತಿಯ ಕಾಲಿನಮೇಲೆ ಹಾಕಿ ನಮಸ್ಕಾರ ಮಾಡುವುದು ಸರಿಯಲ್ಲವೆಂದು ನನ್ನ ಭಾವನೆ. ನಾನು ಬಹಳ ದಿವಸಗಳವರೆಗೆ ಕಾಂಗ್ರೆಸ್ ಪಕ್ಷದಲ್ಲೇ ಇದ್ದೆ. ಅವರು ಹೇಳಿದ್ದನ್ನೆಲ್ಲಾ ನಾನು ಕೇಳುತ್ತಾ ಬಂದರೆ ಅದು ಪ್ರಜಾಪ್ರಭುತ್ವಕ್ಕೆ ಧಕ್ಕೆ ಬಂದಂತಾಗುತ್ತದೆ. ಆದರೆ ಪಕ್ಷದಲ್ಲಿದ್ದ ಮೇಲೆ ಅವರು ಹೇಳಿದಂತೆ ಕೇಳಬೇಕಾದ ಪ್ರಸಂಗಗಳು ಬಂದೇ ಬರುತ್ತವೆ. ಭಕ್ತಿ ಎನ್ನುವ ಬಗ್ಗೆ ಮಾನ್ಯ ಅಂಬೇಡ್ಕರ್‌ರವರು ಈರೀತಿ ಹೇಳಿದ್ದಾರೆ.

> "Bhakti in religion may be a road to salvation of the soul. But in politics, Bhakti or Hero-worship is a sure road to degradation and eventual dictatorship." ಎಂದು ;

ಭಕ್ತಿ ಇರಬಾರದೆಂದು ನಾನು ಹೇಳುವುದಿಲ್ಲ. ಆದರೆ ಅವರ ದಾಸಾನುದಾಸರಾಗಿ, ಅವರು ಹೇಳಿದ್ದನ್ನೆಲ್ಲಾ ಕೇಳಿಕೊಂಡು, ತಲೆಬಾಗಿ ನಡೆಯುವುದು ಎಂದರೆ ಏನು ಅರ್ಥ ? ಈರೀತಿ ವ್ಯಕ್ತಿಪೂಜೆ ಮಾಡಿ ಜನರನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆಂಬುದನ್ನು ಯೋಚಿಸಬೇಕಾಗಿದೆ. ನಾನು ಹೇಳುವ ಮಾತಿನಬಗ್ಗೆ ನಿಮಗೆ ಪರಿಜ್ಞಾನ ಬಂದಾಗ ಇವತ್ತಲ್ಲ ನಾಳೆಯಾದರೂ ಬಸವಲಿಂಗಪ್ಪನವರು ದಡ್ಡರಲ್ಲ ಎಂಬುದು ನಿಮಗೇ ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವುಹಿರಿಯ ರಾಜಕಾರಣಿಗಳು. ತಾವು ಮಾತನಾಡುವಾಗ ಕೆಲವರು ತಮ್ಮ ಮನೆಗೆ ಬಂದು ಒತ್ತಾಯ ಮಾಡಿದರು ಎಂದು ಹೇಳಿದಿರಿ. ಆದರೆ ನಮಗೆ ತಿಳಿದಿರುವಂತೆ ತಾವು ಕೆಲವು ಷರತ್ತುಗಳನ್ನು ಹಾಕಿದಿರಿ, ಅದಕ್ಕೆ ಅವರು ಒಪ್ಪದಿದ್ದಾಗ ಈ ನಿರ್ಣಯ ಬಂತು.

ಶ್ರೀ ಬಿ. ಬಸವಲಿಂಗಪ್ಪ.—ಆ ರೀತಿ ನಾನು ಯಾವ ಷರತ್ತನ್ನೂ ಹಾಕಲಿಲ್ಲ. ರಾಷ್ಟ್ರದ ಹಿತದೃಷ್ಟಿಯಿಂದ ಒಂದು ಮಾತನ್ನು ಹೇಳಬಯಸುತ್ತೇವೆ. ಡಾ॥. ಅಂಬೇಡ್ಕರ್‌ರವರು, ಜಾನ್ ಸ್ಟೆವಾರ್ಟ್‌ರವರು ಏನು ವಿಚಾರಗಳನ್ನು ಹೇಳಿದ್ದಾರೆ ಅದು ನಮಗೆಲ್ಲಾ ದಾರಿದೀಪವಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಗುಂಡೂರಾವ್‌ರವರು ಕಳೆದ ತಿಂಗಳು ೬ನೇ ತಾರೀಖು ರೆವಿನ್ಯೂ ಅಧಿಕಾರಿಗಳ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದ್ದಾರೆ. ಅವರು ಹೊಸದಾಗಿ ಮುಖ್ಯ ಮಂತ್ರಿಗಳಾಗಿರುವುದರಿಂದ ಆದಿವಸ ಏನು ಮಾತನಾಡಬೇಕೆಂದು ಅವರಿಗೆ ಗೊತ್ತಿರಲಿಲ್ಲ. ಸಾಮಾನ್ಯವಾಗಿ ಯಾವ ಅಧಿಕಾರಿಯೇ ಆಗಲಿ ದಕ್ಷತೆಯಿಂದ ಕೆಲಸಮಾಡಬೇಕು. ಹಾಗೆ ಮಾಡದೆ ಅಧಿಕಾರ ದುರುಪಯೋಗ ಮಾಡಿಕೊಂಡರೆ ಅಂಥವರಿಗೆ ಶಿಕ್ಷೆ ಮಾಡಲಾಗುತ್ತದೆಂದು ಹೇಳುವುದು ವಾಡಿಕೆ. ಇದು ಸಾರ್ವಜನಿಕ ಆಡಳಿತದಲ್ಲಿ ಹೇಳತಕ್ಕ ಮಾತು ಆ ದಿವಸ ಅವರು ಏನು ಬುದ್ಧಿವಾದವನ್ನು ಆ ಅಧಿಕಾರಿಗಳಿಗೆ ಸ್ಪಷ್ಟವಾಗಿ ಹೇಳಿದ್ದಾರೆ, ಅದು ಒಂದುರೀತಿಯಲ್ಲಿ ಬೇರೆಯವರಿಗೆ ದಾರಿದೀಪವಾಗಿದೆ. ಇದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಅಂಶ.

DRINK BUT STAY SOBER AT WORK.

> "I don't mind if you drink Wisky but attend to files only in the morning after sobriety downs on you. ಇದು ಬುದ್ಧಿವಾದವೇ ? Mr. Rao made it clear that the Government would not bother about Club going and other habits of the officers in their private iife so long as such lifestyles did not come in the way of discharging their official duties."

ನಾವು ಯಾವ ಕೆಲಸವನ್ನೇ ಮಾಡುತ್ತಿರಲಿ, ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಅಧಿಕಾರಿಗಳನ್ನು ನಾವು ಯಾವರೀತಿ ಹಿಡಿತದಲ್ಲಿಟ್ಟುಕೊಳ್ಳಬೇಕೆಂದು ತಿಳಿದುಕೊಳ್ಳದಿದ್ದರ ಆಡಳಿತವನ್ನು ಯಾವರೀತಿ ನಡೆಸಿಕೊಂಡು ಹೋಗಬಹುದೆಂದು ಯೋಚಿಸಿನೋಡಿ

ಮಾನ್ಯ ಮುಖ್ಯ ಮಂತ್ರಿಯವರು ಅಧಿಕಾರಿಗಳಿಗೆ ಕುಡಿಯಲಿಕ್ಕೆ ಹೇಳುತ್ತಾರೆ. ಅವರು ಕುಡಿಯಿರಿ ಎಂದು ಹೇಳಿದ್ದು ಫಾರಿನ್ ವಿಸ್ಕಿ ಎಂದು ಕಾಣುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಅದರ ಮೇಲೆ ಡೆಫನೀಷನ್ ಬೇಡವೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಡೆಫನೀಷನ್ ಅಂದರೆ ಈರೀತಿ ಇರಬಹುದು ಉನ್ನತಮಟ್ಟದ ಅಧಿಕಾರಿಗಳಿದ್ದರೆ ಫಾರಿನ್‌ವಿಸ್ಕಿಕುಡಿಯಿರಿ ಎಂದು ಹೇಳಿದ್ದಾರೆಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ಉನ್ನತ ಮಟ್ಟದಲ್ಲಿರುವಂಥರಿಗೆ ಈ ರೀತಿಯಾದ ವಿಸ್ಕಿಯನ್ನು ಕುಡಿಯಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇನ್ನೊಂದು ಸಮಯದಲ್ಲಿ ಹೇಳಿದ್ದಾರೆ ಅದನೆಂದರೆ ಅಧಿಕಾರಿಗಳು ಹೆಂಡತಿ ಮಕ್ಕಳನ್ನು ಕಾರಿನಲ್ಲಿ ಕರೆದುಕೊಂಡು ಹೋದರೆ ನಿಮ್ಮ ಗಂಟೇನು ಹೋಯ್ತು ? ಅದನ್ನೂ ಪತ್ರಿಕೇಲಿ ಹಾಕ್ಬಿಡೋದಾ ? ಎಂದು ಹೇಳಿದ್ದಾರೆ. ಎಷ್ಟು ಮೇಲಪಕ್ತಿಯ ಉಪದೇಶ ಹಾಕಿಕೊಟ್ಟಿದ್ದಾರೆ ? ಅಧಿಕಾರಿಗಳು ಇರುವುದು ನೀವು ಹೇಳಿದಂತೆ ಕೆಲಸಮಾಡುವುದಕ್ಕೆ ಹೊರತು...........

ಶ್ರೀ ಬಿ. ವಿ. ಕಕ್ಕಿಲಾಯ.—ಅವರು ಮತ್ತೊಂದು ಮಾತನ್ನು ಹೇಳಿರುತ್ತಾರೆ, ಅದೇನೆಂದರೆ ಶ್ರೀಮಂತರು ಡಿನ್ನರ್‌ಗೆ ಕರೆದರೆ ಹೋಗಿ, ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಅವರಿಗೆ ಬೇಕಾದ ಕೆಲಸ ಮಾಡಿಕೊಡುವುದಕ್ಕೆ ಹೋಗಬೇಡಿ. ಬಡವರಮೇಲೆ ಅನುಕಂಪವಿರಲಿ ಎಂದೂ ಕೂಡ ಹೇಳಿರುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಕೂಡ ಉಪಮಂತ್ರಿ ಆಗಿದ್ದೆ ಮಂತ್ರಿ ಆಗಿದ್ದೆ ಆ ಅನುಭವದಿಂದ ಹೇಳುವುದಾದರೆ. ಅಡ್ಮಿನಿಸ್ಟ್ರೇಷನ್ ಯಾವರೀತಿಯಲ್ಲಿ ನಡೆಸಬೇಕು, ಸರ್ಕಾರವನ್ನು ಯಾವರೀತಿ ರಚನೆ ಮಾಡಬೇಕು ಎನ್ನುವುದನ್ನು ಇವರು ಇನ್ನೂ ಅರಿತುಕೊಳ್ಳಬೇಕು. ಅಧಿಕಾರವನ್ನು ಕೈಯಲಿ ಇಟ್ಟುಕೊಂಡು ಆಡಳಿತವನ್ನು ನಡೆಸಬೇಕು. ಶಕ್ತಿ ಸಮಾರ್ಥವಿಲ್ಲದೆ ಸರ್ಕಾರವನ್ನು ನಡೆಸುವುದಕ್ಕೆ ಆಗುವುದಿಲ್ಲ. ಬರೆ ಬರೀ ಮಾತನಾಡಿ ಮನೆಗೆ, ಹೋಗಿಬಿಟ್ಟರೆ ಸರ್ಕಾರಿ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತವೆಂದು ತಿಳಿದುಕೊಂಡರೆ ಅದು ತಪ್ಪುಭಾವನೆಯಾಗುತ್ತದೆ. ನಿನ್ನೆದಿವಸ ಸೀಮೆಎಣ್ಣೆ ಸಕ್ಕರ ಬೆಲೆ ಜಾಸ್ತಿಯಾಗಿದೆ ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದಕ್ಕೆ, ಶ್ರೀಮಾನ್ ಬಂಗಾರಪ್ಪನವರು ಸೀಮೆ ಎಣ್ಣೆ ಗಾಡಿಯವರನ್ನು ಕರೆದು ಮಾತನಾಡುತ್ತೇನೆಂದು ಹೇಳಿದರು. ಸರ್ಕಾರದ ಆಡಳಿತ

ಯಂತ್ರವನ್ನು ಹಿಡಿದಿರತಕ್ಕಂಥವರು ಒಂದು ನಿಗದಿಯಾದ ಬೆಲೆಯನ್ನು ರೂಪಿಸುವ ಕೆಲಸವನ್ನು ಮಾಡದೆ ಅವರನ್ನು ಕರೆದು ಬುದ್ಧಿವಾದವನ್ನು ಹೇಳುತ್ತೇನೆಂದರೆ ಅವರು ಕೇಳುತ್ತಾರೆಯೋ ? ಅಡ್ಮಿನಿಸ್ಟ್ರೇಷನ್ ಎಂದರೆ ಏನು ? ಸಮಸ್ಯೆಗಳಿಗೆ ಹೊಂದಿಕೊಂಡು ಹೋಗಬೇಕಾದರೆ ನಮ್ಮ ವ್ಯಕ್ತಿತ್ವದಲ್ಲಿಯೂ ನಮ್ಮ ನಡೆವಳಿಕೆಯಲ್ಲಿಯೂ ಕೂಡ ನಿಷ್ಠೆ ಇರಬೇಕು. ಅಧಿಕಾರಿಗಳೂ ಕೂಡ ಧರ್ಮ ಮತ್ತು ನಿಷ್ಠೆಯಿಂದ ನಡೆದುಕೊಳ್ಳಬೇಕು. ಅಧಿಕಾರಿಗಳೂ ನಿಸ್ಪಕ್ಷಪಾತವಾಗಿ ಕೆಲಸಕಾರ್ಯಗಳನ್ನು ನಿರ್ವಹಿಸಬೇಕು. ಎಲ್ಲಿಯವರೆಗೆ ಈ ಒಂದು ಮನೋಭಾವನೆ ಆಡಳಿತಯಂತ್ರವನ್ನು ನಡೆಸತಕ್ಕಂಥವರಲ್ಲಿ ಮೂಡುವುದಿಲ್ಲವೋ ಅಲ್ಲಿಯವರೆಗೆ ಅಡ್ಮಿನಿಸ್ಟ್ರೇಷನ್ನನ್ನು ಒಂದು ವ್ಯವಸ್ಥಿತವಾದರೀತಿಯಲ್ಲಿ ನಡೆಸಲು ಸಾಧ್ಯವಾಗುವುದಿಲ್ಲ.

ಫೆಬ್ರವರಿ ತಿಂಗಳ ೨೧ನೇ ತಾರೀಖು ಭಾಲ್ಕಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ತುಲಾಭಾರ ನಡೆಯಿತು. ಮಾನ್ಯ ಭೀಮಣ್ಣ ಖಂಡ್ರೆಯವರು ಈ ಒಂದು ತುಲಾಭಾರದ ಕಾರ್ಯಕ್ರಮವನ್ನು ಏರ್ಪಡಿಸಿದ್ದರೆಂದು ಕಾಣುತ್ತದೆ. ನಾನೂಕೂಡ ಮಂತ್ರಿಯಾಗಿ ಆ ಜಾಗಕ್ಕೆ ಹೋಗುತ್ತಿದ್ದಾಗ ಅವರು ಏನು ಮಾಡುತ್ತಿದ್ದರು ಎಂದರೆ, ಲಾರಿಗಳಲ್ಲಿ ಜನರನ್ನು ಕರೆದುಕೊಂಡುಬರುವುದು ಭಾಷಣ ಕೇಳಿಸುವುದು, ಮತ್ತೆ ಅವರನ್ನು ವಾಪಸ್ ಲಾರಿಗಳಲ್ಲಿ ಕರೆದುಕೊಂಡುಹೋಗಿ ಬಿಡುವುದು. ಏನಾದರೂ ಆಗಲಿ, ಪಾಪ ಅವರನ್ನು ಮತ್ತೆ ಲಾರಿಗಳಲ್ಲಿಯೇ ವಾಪಸ್ ಕರೆದುಕೊಂಡುಹೋಗಿ ಅವರ ಊರುಗಳಿಗೆ ಬಿಡುತ್ತಿದ್ದರು. ಅದೊಂದು ಒಳ್ಳೆಯ ಕೆಲಸ ಅವರು ಮಾಡುತ್ತಿದ್ದರು ಹೀಗೆ ಅದು ಅವರಿಗೆ ಮಾಮೂಲಿಯಾಗಿ ಬಂದಿರತಕ್ಕಂಥ ಪದ್ಧತಿ, ಮೊನ್ನೆ ತುಲಾಭಾರವಾದಗಲೂ ಕೂಡ ಅದೇರೀತಿ ಲಾರಿಗಳಲ್ಲಿ ಕರೆದುಕೊಂಡು ಬಂದಿರಬಹುದು. ಅಲ್ಲಿ ಒಂದು ಘಟನೆ ನಡೆಯಿತು. ಅದರಬಗ್ಗೆ ಶ್ರೀಮಾನ್ ದೇವರಾಜ ಅರಸ್‌ರವರು ಒಂದು ಕಾಲಿಂಗ್ ಅಟೆಂಷನ್ ನೋಟಿಸ್‌ಕೂಡ ಕೊಟ್ಟು ಅದರಬಗ್ಗೆ ಚರ್ಚೆ ಆಯಿತು ಎಂದು ಕಾಣುತ್ತದೆ. ಅಲ್ಲಿ ೯ ಜನರು ಸತ್ತರು, ನೂರಾರುಜನರು ಆಸ್ಪತ್ರೆಯಲ್ಲಿ ಅಡ್ಮಿಟ್‌ಆಗಿರುತ್ತಾರೆಂದು ಸುದ್ದಿ ಬಂದಿರುತ್ತದೆ. ಇದು ಇವರು ತುಲಾಭಾರ ಮಾಡಿಸಿಕೊಂಡು ಜನರಿಗೆ ಮಾಡಿದ ಉಪಕಾರ ತುಲಾಭಾರ ಮಾಡಿಸಿಕೊಂಡವರು ಅದರ ಬಗ್ಗೆ ಏನಾದರೂ ಯೋಚನೆ ಮಾಡಿದರ ಎಂದು ಕೇಳುತ್ತೇನೆ ? ಈರೀತಿ ತುಲಾಭಾರ ಮಾಡಿಸಿ ಕೊಂಡರೆ ಜನರಮೇಲೆ ಯಾವರೀತಿ ಪರಿಣಾಮವಾಗುತ್ತದೆ, ಏನು ಆಗುತ್ತದೆ ಎಂಬುದನ್ನು ಏನಾದರೂ ಯೋಚನೆ ಮಾಡಿದ್ದೀರಾ ತುಲಾಭಾರ ಮಾಡುವುದಕ್ಕೆ ಯಾರು ಹಣ ಕೊಡುತ್ತಾರೆ ? ಎಲ್ಲಿಂದ ಹಣಬರುತ್ತದೆ ? ಎಂಬುದನ್ನು ಯಾವುದನ್ನು ಯೋಚನೆ ಮಾಡಲಿಲ್ಲ. ಶ್ರೀಮಾನ್ ಗುಂಡೂರಾಯರು ಮೊನ್ನೆ ಮೊನ್ನೆತಾನೆ ಮುಖ್ಯಮಂತ್ರಿಗಳಾದವರು. ಸತ್ಕಾರ್ಯಮಾಡಿದಂಥವರಿಗೆ ಮನ್ನಣೆ ಕೊಡತಕ್ಕಂಥಾದ್ದು ವಾಡಿಕೆಯಾಗಿರುತ್ತದೆ. ಇವರು ಮುಖ್ಯಮಂತ್ರಿಗಳಾಗಿ ಮಾಡಿದಂಥ ಕೆಲಸವಾದರೂ ಏನು ? ದೇಶಕ್ಕೆ ಯಾರು ಹಿಂದೆ ಮಾಡದಂಥ ಕೆಲಸವನ್ನ ಇವರು ಮಾಡಿದ್ದು ? ನಾಳೆದಿವಸ ನಿಮ್ಮನ್ನು ಬೆಳ್ಳಿಯಲ್ಲಿ ತೂಕಮಾಡುತ್ತೇವೆಂದು ಚಿಕ್ಕಪೇಟೆಯವರು ಕರೆಯುತ್ತಾರೆ, ನೀವು ಅಲ್ಲಿಗೂ ಹೋಗುತ್ತೀರೇನು ? ನಿಮಗೆ ಆ ರೀತಿ ಸತ್ಕಾರ ಸಮಾರಂಭಗಳನ್ನು ಮಾಡಿ ನಿಮ್ಮ ಸರ್ಕಾರದ ಲಾಭವನ್ನು ಪಡೆಯುವುದಕ್ಕೆ ಕೆಲವರು ಕಾದಿರುತ್ತಾರೆ. ಅದನ್ನು ತಾವು ಅರಿಯಬೇಕು. ಅದರ ಪರಿಣಾಮ ಏನಾಗುತ್ತದೆಂಬುದನ್ನು ಚೆನ್ನಾಗಿ ತಿಳಿದು ಕೊಳ್ಳಬೇಕು ಯಾರೂ ಕೂಲಿಕೆಲಸಮಾಡತಕ್ಕಂಥವನಾಗಲಿ, ದನಕಾಯುವವನಾಗಲಿ ಯಾರು ನಿಮಗೆ ತುಲಭಾರ ಮಾಡುವುದಕ್ಕೆ ಬರುವುದಿಲ್ಲ. ಯಾರು ಅಕ್ರಮ ಹಣವನ್ನು ಸಂಪಾದನೆ ಮಾಡಿರುತ್ತಾರೆ, ಅವರೇ ಇಂಥ ಕೆಲಸಗಳನ್ನು ಮಾಡುವುದಕ್ಕೆ ಮುಂದೆ ಬರುವುದು. ನನಗೂ ಕೂಡ ಸನ್ಮಾನ ಮಾಡಿದ್ದಾರೆ. ಏತಕ್ಕೆ ಸನ್ಮಾನ ಮಾಡಿದರೆಂದರೆ, ನ್ಯಾಯಕ್ಕಾಗಿ ಹೋರಾಟ ಮಾಡಿದ್ದಾನೆಂಬ ಕಾರಣಕ್ಕಾಗಿ ಸನ್ಮಾನ ಮಾಡಿದರು. ಮಾನ್ಯ ಮುಖ್ಯಮಂತ್ರಿಗಳಿಗೆ ನಾಲ್ಕುದಿವಸದ ಕೆಳಗೆ ಗದೆ ಕತ್ತಿ ಇವುಗಳನ್ನೆಲ್ಲ ಕೊಟ್ಟು ಸನ್ಮಾನ ಮಾಡಿದರು. ಇವುಗಳು ಏತಕ್ಕೆಸ್ವಾಮಿ? ಯಾರಿಗೆ ಹೊಡೆಯುವುದಕ್ಕೆ ಹೋಗುತ್ತೀರಿ ಹೇಳಿ ? ಹೆಂಗಸರಿಗೆ ಹೊಡೆಯುವುದಕ್ಕೆ ಹೋಗುತ್ತೀರಾ ? ಗಂಡಸರಿಗೆ ಹೊಡೆಯುವುದಕ್ಕೆ ಹೋಗುತ್ತೀರಾ ಹೇಳಿ ?

ಶ್ರೀ ವೈ. ರಾಮಕೃಷ್ಣ.—ತಾವು ಮಿನಿಸ್ಟರ್‌ಆಗಿದ್ದಾಗ ಕೇರಳಾದಲ್ಲಿ, ತಮಿಳುನಾಡಿನಲ್ಲಿ ಹೋಗಿ ಕತ್ತಿ ಗದೆ, ಗುರಾಣಿ ಇವುಗಳನ್ನು ಸ್ವೀಕರಿಸಿದಿರಲ್ಲ ಅದು ನಿಜವಲ್ಲವೆ ಹೇಳಿ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಇಲ್ಲವೆಂದು ಹೇಳುವುದಿಲ್ಲ. ಅವರು ನನ್ನನ್ನು ಕರೆದು ಸನ್ಮಾನ ಮಾಡಿದ್ದು ನಾನು ರಾಜಿನಾಮ ಕೊಟ್ಟಮೇಲೆ. ಪಂಜಾಬ್ ಮದ್ರಾಸ್ ಮತ್ತು ಆಂಧ್ರಪ್ರದೇಶಗಳಲ್ಲಿ ನನ್ನನ್ನು ಕರೆದು ಸನ್ಮಾನ ಮಾಡಿ ಕತ್ತಿ ಗುರಾಣಿ ಎಲ್ಲವನ್ನು ಕೊಟ್ಟಿರುತ್ತಾರೆ. ಏತಕ್ಕೆ ಕೊಟ್ಟರೆಂಬುದನ್ನೂ

ಹೇಳುತ್ತೇನೆ. ನಾನು ಅಧಿಕಾರಬಿಟ್ಟುಬಂದಮೇಲೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್‌ಟ್ರೈಬ್ಸ್ ಜನಾಂಗದವರಿಗೆ, ಹಿಂದುಳಿದವರ್ಗದವರ ಕಲ್ಯಾಣಕ್ಕಾಗಿ ಹೋರಾಟ ಮಾಡಿದ್ದಾರೆ ಎಂಬ ಒಂದು ಕಾರಣದಿಂದ ಜನ ನನಗೆ ಕರೆದು ಸನ್ಮಾನ ಮಾಡಿರುತ್ತಾರೆಯೇ ಹೊರತು ಬೇರೆಯಾವ ಕಾರಣಕ್ಕೂ ಅಲ್ಲ. ಆದ್ದರಿಂದ ಸರ್ಕಾರದ ಕೆಲಸಕಾರ್ಯಗಳನ್ನು ಸರಿಯಾಗಿ ಮಾಡಿದರೆ ಸನ್ಮಾನ ಮಾಡುವುದು ವಾಡಿಕೆ ಮತ್ತು ಅದನ್ನು ಬೇಡವೆಂದು ಹೇಳುವುದಕ್ಕೂ ಆಗುವುದಿಲ್ಲ ೨೦ ವರ್ಷಗಳಕಾಲ ಮಂತ್ರಿಯಾಗಿದ್ದಾಗ ನನಗೂ ಕೂಡ ಹೂವಿನ ಹಾರವನ್ನು ಹಾಕುವವರು ಬೇಕಾದಷ್ಟು ಜನರು ಇದ್ದರು. ಅವರನ್ನೂ ನಾನು ಯಾವರೀತಿ ಕಾಣುತ್ತಿದ್ದೆ ಎಂದರೆ ಒಂದು ಸಂದರ್ಭದಲ್ಲಿ ಮಾನ್ಯ ಕೆಂಗೇಗೌಡರಿಗೆ ಅದರ ಬಗ್ಗೆ ಹೇಳಿರುತ್ತೇನೆ. ಈರೀತಿ ಹೂವಿನ ಹಾರವನ್ನು ಹಾಕುವುದಕ್ಕೆ ಬರುತ್ತಿರುವವರಲ್ಲ. ಇವರೆಲ್ಲ ನನ್ನ ನಿಜವಾದ ಸ್ನೇಹಿತರಲ್ಲ. ನಾನು ಮಂತ್ರಿಯಾಗಿರುವುದರಿಂದ ನನ್ನ ಒಂದು ಲಾಭವನ್ನು ಪಡೆಯಲು, ಈರೀತಿ ಮಾಡುತ್ತಾರೆ. ಆದರೆ ನನ್ನ ನಿಜವಾದ ಸ್ನೇಹಿತರು ಯಾರು ಎಂದರೆ, ನಾನು ಯಾವತ್ತಿನ ದಿವಸ ಅಧಿಕಾರದಿಂದ ಹೊರಗೆ ಬರುತ್ತೇನೆ, ಅವತ್ತಿನದಿವಸ ನನ್ನ ಪಕ್ಕದಲ್ಲಿ ಯಾರು ನಿಂತುಕೊಳ್ಳುತ್ತಾರೋ ಅವರೇ ನನ್ನ ನಿಜವಾದ ಸ್ನೇಹಿತರು ಎಂದು ಹೇಳಿರುತ್ತೇನೆ. ಆದ್ದರಿಂದ ಈಗ ಅಧಿಕಾರ ನಡೆಸುತ್ತಿರುವವರು ಇದನ್ನು ತಿಳಿದು ಹುಷಾರಾಗಿ ಹೆಜ್ಜೆ ಇಟ್ಟುಕೆಲಸ ಮಾಡಿ ಎಂದು ಹೇಳುತ್ತಿದ್ದೇನೆ

೪–೦೦ ಪಿ.ಎಂ.

ನಂತರ, ಶ್ರೀ ಹೆಚ್.ಡಿ. ಕೃಷ್ಣಪ್ಪನವರು ಬಹಳ ಸ್ವಾರಸ್ಯವಾಗಿ ಭಾಷಣ ಮಾಡುತ್ತಾ ಒಂದು, ವಿಷಯವನ್ನು ಪ್ರಸ್ತಾಪ ಮಾಡಿದರು. ಅವರು ಏನು ಹೇಳಿದರೆಂದರೆ, ಈ ಕರ್ನಾಟಕದಲ್ಲಿ ಯಾವುದೇ ಆಡಳಿತ ನಡೆಸಿರಲಿ, ಅವರೆಲ್ಲಾ ಕಾಂಗ್ರೆಸ್ಸಿನವರೇ ಆಗಿದ್ದಾರೆ . ಅವರು ಓ ಕಾಂಗ್ರೆಸ್‌ನವರಾಗಿಲಿ, ಕಾಂಗ್ರೆಸ್ ನವರಾಗಿರಲಿ ಕಾಂಗ್ರೆಸ್ಸ್ 'ಯು' ನವರು ಆಗಿರಲಿ ಎಲ್ಲರೂ ಕಾಂಗ್ರೆಸ್ಸಿನವರೇ ಆಗಿದ್ದಾರೆ. ಆದ್ದರಿಂದ ವ್ಯತ್ಯಾಸ ಏನೂ ಇಲ್ಲಾ ಎಂದು ಹೇಳಿದ್ದಾರೆ. ಈಗ ಮಾನ್ಯ ಕೃಷ್ಣಪ್ಪನವರು ಸದನದಲ್ಲಿ ಇಲ್ಲ. ಅವರಿಗೆ ಈಗ ನಾನು ಕೇಳಬೇಕಾಗುತ್ತದೆ. ಏನೆಂದರೆ ೧೯೬೯ರಲ್ಲಿ ಕಾಂಗ್ರೆಸ್–ಓ ಏಕೆ ಆಯಿತು ಎಂದು? ಕಾಂಗ್ರೆಸ್–ಐ ಏಕೆ ಆಯಿತು ಎಂದು? ಕಾಂಗ್ರೆಸ್ ಯು ಏಕೆ ಆಯಿತು ಎಂದು? ೧೯೬೯ನೇ ಇಸವಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ರಾಷ್ಟ್ರದ ಒಬ್ಬ ವ್ಯಕ್ತಿಯಾಗಿದ್ದರು. ೧೯೬೯ನೇ ಇಸವಿಯಲ್ಲಿ ಅವರು ಪ್ರಧಾನಿಯಾಗಿದ್ದರು. ಯಾರು ಈ ದೇಶದಲ್ಲಿ ಕಾಂಗ್ರೆಸ್ಸಿಗರು ಇದ್ದರು ಅವರು ಇವರ ಆಡಳಿತವನ್ನು ಸಹಿಸದೆ ಇವರನ್ನು ಕಿತ್ತುಹಾಕಿದರು. ಆಗ ನಾವು ಎಲ್ಲಗೂ ಶ್ರೀಮತಿ ಇಂದಿರಾಗಾಂಧಿಯವರಿಗೆ ಬೆಂಬಲಿಗರಾಗಿ ನಿಂತೆವು. ಆಗ ನಾನು ಎ.ಐ.ಸಿ.ಸಿ. ಸದಸ್ಯನಾಗಿದ್ದೆ. ನೀವು ಪ್ರಧಾನಿ ಆಗಿ ಮುಂದುವರಿಯಬೇಕು, ನೀವು ಇರತಕ್ಕ ಸಂಸ್ಥೆಯೇ ಕಾಂಗ್ರೆಸ್ ಎಂದು ನಾನು ಆಗ ಹೇಳಿದ್ದೇನೆ. ಅದರಂತೇ ಬಹುಜನ ಹೇಳಿದರು ಅವತ್ತು ಏನಾಯಿತು? ಸಂಸ್ಥಾ ಕಾಂಗ್ರೆಸ್ ಎಂದು ರಚನೆ ಆಯಿತು. ಕಾಂಗ್ರೆಸ್–ಓ ಒಂದು ಕಡೆ, ಕಾಂಗ್ರೆಸ್–ಆರ್ ಎಂದು ಒಂದು ಕಡೆ ಆಯಿತು ಅದು ರೂಲಿಂಗ್ ಕಾಂಗ್ರೆಸ್ ಆಯಿತು. ೧೯೭೭ರವರೆಗೆ ಹೀಗೆ ನಡೆದು ಬಂತು. ೧೯೭೭ರಲ್ಲಿ 'ಓ' ಕಾಂಗ್ರೆಸ್ ಒಂದು ಕಡೆ ಇತ್ತು. ೧೯೭೭ರಲ್ಲಿ ಚುನಾವಣೆಗಳು ನಡೆದವು. ಆ ನಂತರ ಏನೇನಾಯಿತು. ಎಲ್ಲರಿಗೂ ಗೊತ್ತಿದೆ. ೧೯೭೭ರಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್'ಆರ್'ಗೆ ಸೋಲು ಉಂಟಾಯಿತು. ಆ ನಂತರ ಕಾಂಗ್ರೆಸ್–ಓ ಮತ್ತು ಜನತಾ ಒಂದಾದವು. ಆ ನಂತರ ಶ್ರೀ ಬ್ರಹ್ಮಾನಂದ ರೆಡ್ಡಿಯವರು ಅಧ್ಯಕ್ಷರಾದರು ಸ್ವಲ್ಪ ಕಾಲದ ನಂತರ ಶ್ರೀ ಬ್ರಹ್ಮಾನಂದ ರೆಡ್ಡಿಯವರನ್ನು ಕಿತ್ತುಹಾಕಬೇಕೆಂಬ ಪಿತೂರಿ ನಡೆಯಿತು. ಆಗ ರೆಡ್ಡಿಯವರ ಮನೆಗೆ ನಾನು ಮತ್ತು ಇತರರು ಹೋಗಿ ಅವರನ್ನು ರಾಜೀನಾಮೆ ಕೊಡುವಂತೆ ಕೇಳಿ ಶ್ರೀಮತಿ ಇಂದಿರಾಗಾಂಧಿಯವರನ್ನು ಅಧ್ಯಕ್ಷ ಸ್ಥಾನಕ್ಕೆ ಕೂರಿಸುತ್ತೇವೆಂದು ಕೇಳಿದೆವು. ರಾಜೀನಾಮೆ ಕೊಡುವುದಿಲ್ಲವೆಂದು ಅವರು ಹೇಳಿದರು. ಶ್ರೀಮತಿ ಇಂದಿರಾಗಾಂಧಿಯವರಿಗೋಸ್ಕರ ಕೆಲಸ ಮಾಡಬೇಕೆಂದು ಆಗ ಪ್ರಯತ್ನ ಬಹಳವಾಗಿ ನಡೆಯಿತು. ಆ ಬಗ್ಗೆ ಹಗಲಿರುಳೂ ದುಡಿದ ಶ್ರೀ ದೇವರಾಜ ಅರಸ್ ಅವರನ್ನು ನೆನೆಸಿಕೊಳ್ಳಬೇಕು. ಆಗ ಮಾನ್ಯ ಶ್ರೀ ಕಂತಯ್ಯನವರೂ ಬೆಂಬಲಿಗರಾಗಿದ್ದರು. ಆಗ ಶ್ರೀಮಾನ್ ದೇವರಾಜ ಅರಸ್ ಅವರು ಪ್ರಮುಖವಾದ ಪಾತ್ರವನ್ನು ವಹಿಸಿದ್ದರು. ೧೯೭೮ರ ಜನವರಿ ತಿಂಗಳಲ್ಲಿ ನಡೆದ ಎ.ಐ.ಸಿ.ಸಿ. ಸಮ್ಮೇಳನದಲ್ಲಿ ನಾನು ಮೂರನೆಯವನಾಗಿ ಮಾತನಾಡಿದ್ದೇನೆ. ಆಗ ನಾವೇ ಶ್ರೀಮತಿ ಇಂದಿರಾಗಾಂಧಿಯವರೆ ಕಾಂಗ್ರೆಸ್, ಕಾಂಗ್ರೆಸ್ ಎಂದರೆ, ಇಂದಿರಾಗಾಂಧಿ ತಾವು ಅಧ್ಯಕ್ಷ ಪಟ್ಟವನ್ನು ಒಪ್ಪಿಕೊಳ್ಳಬೇಕೆಂದು ಅವರನ್ನೆ ಕೇಳಿದ್ದೆವು. ಅವತ್ತಿನ ದಿವಸ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದೆವು. ಯಾರಿಗೋಸ್ಕರ ನಾವು ಶ್ರೀಮತಿ ಇಂದಿರಾಗಾಂಧಿಯವರನ್ನು ಅಧ್ಯಕ್ಷರ

ನ್ನಾಗಿ ಮಾಡಿದೆವು. ಇವರಿಗೋಸ್ಕರವೇ ೧೯೬೯ರಲ್ಲಿ ಕಾಂಗ್ರೆಸ್ ಒಡೆಯಿತು. ೧೯೭೭ರಲ್ಲಿ ಇವರಿಗೋಸ್ಕರ ಕಾಂಗ್ರೆಸ್ ಒಡೆಯಿತು. ೧೯೭೮ರಲ್ಲಿಯೂ ಇವರಿಗೋಸ್ಕರ ಕಾಂಗ್ರೆ ಒಡೆಯಿತು. ೧೯೭೭ರ ಈಚೆಗೆ ಏನು ಅನುಭವಗಳನ್ನು ಇಟ್ಟುಕೊಂಡು, ಅವರಿಗೆ ತೋಚಿದ ರೀತಿಯಲ್ಲಿ, ಮನಸ್ಸಿಗೆ ಬಂದಹಾಗೆ ಪ್ರಯತ್ನಗಳನ್ನು ಮಾಡಿದರು. ಅವರಿಗೆ ನಾನು ೧೯೭೭ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಪರಾಭವಗೊಂಡ ಮೇಲೂ ಹೇಳಿದೆ, ಅವರ ರೀತಿ ನೀತಿಗಳನ್ನು ಬದಲಾವಣೆ ಮಾಡಲಿಲ್ಲ. ಆದರೆ ಶ್ರೀಮತಿ ಗಾಂಧಿಯವರ ಪ್ರಕಾರ ದೇವರಾಜ ಅರಸ್ ಅವರು ಮಾಡಿದ ತಪ್ಪು ಏನು? ಶ್ರೀಮತಿ ಇಂದಿರಾಗಾಂಧಿಯವರು ಕಗ್ಗತ್ತಲೆಯಲ್ಲಿ ಇರುವಾಗ ಅವರನ್ನು ಬೆಳಕಿಗೆ ತಂದವರು ಯಾರು? ಅವರನ್ನು ಮತ್ತೆ ಪಾರ್ಲಿಮೆಂಟ್ ಸದಸ್ಯರನ್ನಾಗಿ ಮಾಡಿದವರು ಯಾರು? ದೇಶದಲ್ಲಿ ಜನತಾ ಪಕ್ಷದವರ ಆಡಳಿತ ಇದ್ದ ಸಮಯದಲ್ಲಿ ಶ್ರೀಮಾನ್ ದೇವರಾಜ ಅರಸ್ ಅವರು, ಶ್ರೀಮತಿ ಇಂದಿರಾಗಾಂಧಿಯವರನ್ನು ಪಾರ್ಲಿಮೆಂಟಿಗೆ ಕಳುಹಿಸಬೇಕೆಂದು ಹಟದಿಂದ ಕೆಲಸ ಮಾಡಿ ಅದರಲ್ಲಿ ಸಮರ್ಥರಾದರು. ಕೊನೆಗೆ ಶ್ರೀ ದೇವರಾಜ ಅರಸ್ ಅವರು, ಪ್ರಬಲರಾಗುತ್ತಿದ್ದಾರೆ, ಇವರು ದಕ್ಷಿಣ ಭಾರತದಲ್ಲಿಯೇ ಬೆಳೆಯುತ್ತಿದ್ದಾರೆ. ಇವರು ಹಿಂದುಳಿದ ವರ್ಗಕ್ಕೆ ಸೇರಿದವರು, ಇವರು ಬೆಳೆದರೆ ನಮಗೆ ಏನಾದರೂ ತೊಂದರೆಯಾಗಬಹುದು ಇವರ ಮೇಲೆ ಕಣ್ಣಿಟ್ಟರು ಆ ನಂತರ ಅದುದೆಲ್ಲಾ ಗೊತ್ತೇ ಇದೆ. ಇದರ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಈ ಬಗ್ಗೆ ಯಾರೂ ತಪ್ಪು ತಿಳಿದುಕೊಳ್ಳಬೇಡಿ. ಶ್ರೀಮಾನ್ ದೇವರಾಜ ಅರಸ್ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುವುದು ಬಿಡುವುದು ಅದು ಬೇರೆ ವಿಷಯ. ಈಗ ಶ್ರೀ ಬಂಗಾರಪ್ಪನವರು ಅಧ್ಯಕ್ಷರಾಗಿದ್ದಾರೆ. ಇವರೂ ರಾಜೀನಾಮೆಯನ್ನು ಕೊಡಬೇಕಾಗಬಹುದು. ಅವರು ಕೊಡದೇ ಹೋದರೆ, ಅವರನ್ನು ಕಿತ್ತುಹಾಕುತ್ತಾರೆ. ಬೇಕಾದರೆ ಇದನ್ನು ಮುಂದೆ ಪರದೆಯ ಮೇಲೆ ನೋಡಿ. ಅವರು ಯಾರನ್ನು ಪ್ರಭಲರಾಗಲು ಬಿಡುವುದಿಲ್ಲ, ಯಾರು ಹೇಳಿದರೂ ಇವರು ಕೇಳುವವರಲ್ಲ, ಅವರು ಕಿತ್ತು ಹಾಕುವುದೇ ಸ್ಪಷ್ಟ. ನಾಳೆ ನೋಡಿ. ಈ ರೀತಿ ಆಗುವುದು ಸ್ಪಷ್ಟ. ಇಂತಹ ಒಂದು ಪದ್ಧತಿ ಎಷ್ಟು ದಿವಸ ನಡೆದೀತು. ನಾವು ಸಿಡಿದು ಎದ್ದು ಬಂದು ಇಲ್ಲಿ ಕುಳಿತುಕೊಂಡಿದ್ದೇವೆ. ಪ್ರಜಾಪ್ರಭುತ್ವ ಬೆಳೆಯ ಬೇಕಾದರೆ, ಅದಕ್ಕೆ ಮಾನ್ಯತೆ ಸಿಕ್ಕಬೇಕಾದರೆ ಇಂತಹ ಒಂದು ಕೆಲಸ ಮಾಡಬೇಕಾಗುತ್ತದೆ. ನನಗೆ ಅಧಿಕಾರ ಬೇಕಾಗಿಲ್ಲ. ನನಗೆ ಅಧಿಕಾರದಲ್ಲಿ ಆಸೆ ಇದ್ದಿದ್ದರೆ ನಾನು ಆ ಕಡೆ ಉಳಿಯ ಬಹುದಾಗಿತ್ತು. ಆಗ ನಾನು ಬಹುಶಃ ಮಂತ್ರಿಯಾಗಬಹುದಿತ್ತು. ಆಗ ನಾನು ಶ್ರೀಮಾನ್ ಗುಂಡೂರಾಯರ ಕೈಕೆಳಗೆ ಕೆಲಸ ಮಾಡಬೇಕಾಗುತ್ತಿತ್ತು. ಯಾಕೆಂದರೆ ನಾನು ಹರಿಜನ–ಗಿರಿಜನ ಪಂಗಡದವನಾಗಿದ್ದೇನೆ. ನನ್ನ ವ್ಯಕ್ತಿತ್ವ, ಅನುಭವ ಏನಿದ್ದರೂ ಕೂಡ ಅವು ಅಲ್ಲಿ ಬರುತ್ತಿರಲಿಲ್ಲ. ನನಗೇನೂ ಶ್ರೀ ಗುಂಡೂರಾಯರ ಮೇಲೆ ವೈಯುಕ್ತಿಕ ದ್ವೇಶ ಇಲ್ಲ. ಅವರೂ ನಾವೂ ಹಿಂದೆ ಮಂತ್ರಿಮಂಡಲದಲ್ಲಿ ಜೊತೆಯಲ್ಲಿ ಇದ್ದೆವು. ಅವರ ಕೈಕೆಳಗೆ ನಾನು ಮಂತ್ರಿಯಾಗಿರುವುದಕ್ಕೆ ಇಷ್ಟವಿಲ್ಲವೆಂದು ಹೇಳಿ ನಾನು ಈ ಕಡೆ ಬಂದು ಕುಳಿತುಕೊಂಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಇವರ ಎಲ್ಲಾ ಮಾತನ್ನೂ ಜನ ಕೇಳಿದ್ದಾರೆ. ಮನುಷ ಅಭ್ಯಾಸ ಬಲ ಏನಿದೆ ಅದರಂತೆ ಮಾತನಾಡುತ್ತಿದ್ದಾರೆ. ಅದರೆ ಪ್ರಾಮಾಣಿಕತೆ ಅಂತ ಏನು ಹೇಳುತ್ತಿದ್ದಾರೆ ಅದು ಮನಬಂದಂತೆ ಆಗಬಾರದು ಅಷ್ಟೇ?

ಶ್ರೀ ಬಿ. ಬಸವಲಿಂಗಪ್ಪ.—ಈ ಬಗ್ಗೆ ನಾನು ಶ್ರೀಮಾನ್ ವೀರಪ್ಪ ಮೊಯ್ಲಿಯವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಅನುಭವಿಸಿದ್ದನ್ನು ಇಲ್ಲಿ ನಾನು ಹೇಳಿದರೆ ಏಕೆ ನಿಮಗೆ ಸಂಕಟ ಸ್ವಾಮಿ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಬಹಳಷ್ಟು ಚೆನ್ನಾಗಿ ಮಾತನಾಡುತ್ತಿದ್ದಾರೆ. ಅದನ್ನು ನಾನು ನೋಡಿದ್ದೇನೆ. ಮುಖ್ಯ ಮಂತ್ರಿ ನಮ್ಮ ನಾಯಕ, ಇಂದಿರಾಗಾಂಧಿಯವರು ನಮ್ಮ ನಾಯಕಿ ಎಂಬುದಾಗಿ ಒಪ್ಪಿಗೊಂಡಿದ್ದರೆ ನಾನು ಶ್ರೀ ಗುಂಡೂರಾವ್‌ರವರ ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಿ ಇರಬೇಕಾಗಿತ್ತು. ಆ ಕಾರಣದಿಂದ ನಾನು ಸಿಡಿದು ಬಂದೆ ಎಂಬುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಅದು ಸದಸ್ಯರಿಗೆಲ್ಲಾ ತಿಳಿಯಲಿ ಎಂದು ಹೇಳಿದೆನೇ ಹೊರತು ಇನ್ನೇನೂ ಅಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಇನ್ನೊಂದು ಸಾರಿ ಹೇಳುತ್ತೇನೆ. ನಾನು ಹೇಳಿದ್ದನ್ನು, ನೀವು ತಿಳಿದುಕೊಳ್ಳಲಿಲ್ಲ ಎಂದು ಕಾಣುತ್ತದೆ. ನೀವೂ, ನಾನು ಹಿಂದುಳಿದವರ್ಗದವರು, ನೀವೂ ನಾನೂ ಎಷ್ಟೇ ಬೆಳೆದರೂ ಅದಕ್ಕೆ ಮಾನ್ಯತೆ ಇಲ್ಲ ಎಂದು ಹೇಳಿದೆ. ಮಾನ್ಯತೆ ಯಾರ್ಯಾರಿಗೆ ಎಂದರೆ.........

ಶ್ರೀ ವೀರಪ್ಪ ಮೊಯ್ಲಿ.—ಅದು ತಮ್ಮ ಅಭಿಪ್ರಾಯ ಅಷ್ಟೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಹೊಸದಾಗಿ ಅಲ್ಲಿಗೆ ಹೋಗಿದ್ದೀರಿ. ಸ್ವಲ್ಪ ಕಾದು ನೋಡಿ.

ವೈಸ್ ಚೇರ್ಮನ್.—ನಿಮ್ಮ ಅಭಿಪ್ರಾಯವನ್ನು ಒಪ್ಪುವಂತೆ ಮತ್ತೊಬ್ಬರನ್ನು ಒತ್ತಾಯ ಮಾಡುವುದಕ್ಕಾಗುವುದಿಲ್ಲ

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರ ಕಷ್ಟ ಏನೆಂದರೆ, ನಾನು ಅವರು ಇದ್ದಂತಹ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದೇನೆ. ಅದನ್ನು ನಿಜವಾಗಿಯೂ ಮೆಚ್ಚಬೇಕಾದುದು. ಅವರು ೨೦-೨೧ ವರ್ಷ ಅಧಿಕಾರದಲ್ಲಿದ್ದಂತಹವರು ಆದ ಕಾರಣ ಮಾತನಾಡುವಾಗ ಕೈ-ಜಾಡಿಸಿ ಮಾತನಾಡಿದರೆ ಅದಕ್ಕೆ ಎಲ್ಲರ ಒಪ್ಪಿಗೆ ಇದೆ, ತಮ್ಮ ಮಾತನ್ನು ಒಪ್ಪುತ್ತಾರೆಂದು ತಿಳಿದು ಅವರು ಭಾಷಣವನ್ನು ಮುಂದುವರಿಸುತ್ತಿದ್ದಾರೆ. ಆದರೆ ಬಂದಿರತಕ್ಕಂತಹ ಕಷ್ಟವೇನೆಂದರೆ ಅವರು ಕೆಲವೊಂದು ಅಭಿಪ್ರಾಯವನ್ನು ಬೇರೆಯವರ ಮೇಲೆ ಹೊರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಅಲ್ಲೇ ಕಷ್ಟವಾಗಿರುವುದು, ಇದನ್ನೇ ನಾನು ಸ್ಪಷ್ಟೀಕರಣ ಮಾಡಿದ್ದು.

ಶ್ರೀ ಬಿ. ಬಸವಲಿಂಗಪ್ಪ.—ಇದುವರೆಗೂ ನಡೆದದ್ದನ್ನು ಹೇಳಿದ್ದೇನೆ. ಇದರಿಂದ ನಾನು ಬೇರೆಯವರ ಮೇಲೆ ಹೊರಿಸುವಂತಹದ್ದು ಏನೂ ಇಲ್ಲ. ಸದಸ್ಯರೆಲ್ಲರೂ ಇಲ್ಲಿದ್ದಾರೆ ಅವರು ಹೇಳಲಿ. ನನಗೆ ಮಾತನಾಡುವಂತಹ ಹಕ್ಕು ಇದೆ, ಮಾತನಾಡುತ್ತಿದ್ದೇನೆ. ನನ್ನ ಮಾತು ಸರಿ ಕಾಣದೆ ಹೋದರೆ ಮುಂದುವರಿಸುವುದಿಲ್ಲ, ಇಲ್ಲಿಗೆ ನಿಲ್ಲಿಸುತ್ತೇನೆ. ಅವರು ಬೇಕಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಇಷ್ಟೆಲ್ಲಾ ನಾನು ಏಕೆ ಮಾತನಾಡುತ್ತಿದ್ದೇನೆಂದರೆ ನಾವು ಎಷ್ಟೇ ಜನ ಇರಲಿ, ಮುಂದೆ ಬರತಕ್ಕಂತಹ ಅಪಾಯ ಏನಿದೆ ಈ ಪ್ರಜಾತಂತ್ರಕ್ಕೆ, ಪ್ರಜಾಪ್ರಭುತ್ವಕ್ಕೆ ರಾಜ್ಯಾಂಗದ ಪ್ರಕಾರ ರಚನೆಯಾಗಿರುವಂತಹ ಸರ್ಕಾರಗಳು ಏನಿವೆ ಇವುಗಳಿಗೆ ನೀವು ನಡೆಯುತ್ತಿರುವ ರೀತಿ, ಆಮೇಲೆ ವಿರುದ್ಧವಾಗಿದೆ, ನಾವೆಲ್ಲರೂ ಕಷ್ಟಪಡಬೇಕಾಗುತ್ತದೆ, ಎಲ್ಲಾ ವಿಷಯಗಳು ಒಬ್ಬರೆ ಕೈಯಲ್ಲೇ ನಡೆಯುತ್ತವೆ ಎಂಬುದಾಗಿ ತಿಳಿದುಕೊಂಡಿರಬೇಡಿ. ಹಾಗೇನಾದರೂ ಮಾಡಿದರೆ ಈ ಒಂದು ಪ್ರಜಾಪ್ರಭುತ್ವದಲ್ಲಿ ಒಬ್ಬರಿಗಾಗಿ ಎಲ್ಲರೂ ಕೆಲಸಮಾಡಬೇಕಾಗಿ ಬರುತ್ತದೆ ಎಂದು ಹೇಳುತ್ತಿದ್ದೇನೆ.

ಇನ್ನು ರಾಜ್ಯಪಾಲರ ಭಾಷಣದ ಬಗ್ಗೆ ಕೆಲವಾರು ವಿಚಾರಗಳನ್ನು ಹೇಳುವುದಿದ್ದರೂ ಕೂಡ ಪ್ರಮುಖವಾದ ವಿಷಯಗಳ ಬಗ್ಗೆ ಮಾತ್ರ ಹೇಳುತ್ತೇನೆ. ಈ ರಾಜ್ಯಕ್ಕೆ ಸಂಬಂಧಪಟ್ಟಿರತಕ್ಕಂತಹ ಸರ್ಕಾರದ ಧೋರಣೆಗಳ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಲೇಬೇಕು. ಆದರೆ ಅವರು ಆ ರೀತಿ ಮಾಡಲಿಲ್ಲ. ಶ್ರೀಮಾನ್ ಗುಂಡೂರಾವ್ ರವರು ಏನು ಮಾಡಿದ್ದಾರೆಂದರೆ ತಮ್ಮ ಭಾಷಣದಲ್ಲಿ ಅವೆಲ್ಲವನ್ನೂ ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರಾಜ್ಯಾಂಗದ ವಿರುದ್ಧವಾಗಿದೆ. ರಾಜ್ಯಪಾಲರ ಭಾಷಣದಲ್ಲಿ ಕಾನ್ಸ್ಟಿಟ್ಯೂಷನಲ್ಲಿ ಏನೆಂದು ಡೈರೆಕ್ಟೀವ್ ಪ್ರಿನ್ಸಿಪಲ್ ಸ್ಟೇಟ್ ಪಾಲಿಸಿ, ಇದೆ ಅದರ ಪ್ರತಿಯೊಂದು ಅಂಶವನ್ನು ಜಾರಿಗೆಕೊಡತಕ್ಕಂತಹದ್ದು ಸರ್ಕಾರದ ಕರ್ತವ್ಯ. ಈ ದೇಶದಲ್ಲಿ ಯಾರೊಬ್ಬರು ಬಡ ಜನಗಳು ಇದ್ದಾರೆ. ಯಾರು ಮಧ್ಯಮವರ್ಗದವರು ಯಾರಿದ್ದಾರೆ. ಶೆಡ್ಯೂಲ್ಡ್ ಕ್ಯಾಸ್ಟ್ ಜನ ಏನಿದ್ದಾರೆ ಮುಸಲ್ಮಾನ್ ಏನಿದ್ದಾರೆ ಅದರ ಬಗ್ಗೆ ಯಾವ ರೀತಿ ಯಾವ ಯೋಜನೆಗಳನ್ನು ಹಾಕಿಕೊಂಡು ಜಾರಿಗೆ ಕೊಡುತ್ತೇವೆ ಎಂಬ ಬಗ್ಗೆ ಪ್ರಸ್ತಾಪ ಮಾಡಲೇಬೇಕು. ಆದರೆ ಇದನ್ನು ಅವರು ಪ್ರಸ್ತಾಪ ಮಾಡಿಯೇ ಇಲ್ಲ ಹಾಗಾದರೆ ಹಿಂದೆ ಇದ್ದಂತಹ ಮಂತ್ರಿಮಂಡಲ ಹಾಗೆ ಮಾಡಿದೆಯೇ ಎಂಬುದಾಗಿ ಕೇಳಬಹುದು. ದಯಮಾಡಿ ನೋಡಿ, ಸಾಕಷ್ಟು ಕೆಲಸಗಳನ್ನು ಮಾಡಿದ್ದೇವೆ. ಹಿಂದೆ ಇದ್ದಂತಹ ರಾಜ್ಯಪಾಲರ ಭಾಷಣವನ್ನು ಯಾವ ರೀತಿಯಾಗಿ ತಯಾರು ಮಾಡಿ ತಮ್ಮ ಮುಂದೆ ಇಟ್ಟಿದ್ದೆವು ಎಂಬುದನ್ನು ದಯಮಾಡಿ ನೋಡಿ. ಈ ಸಾರಿಯ ರಾಜ್ಯಪಾಲರ ಭಾಷಣದಲ್ಲಿ ಅದು ಒಂದೂ ಕಾಣುತ್ತಿಲ್ಲ. ಏಕೆಂದರೆ ಬಹಳ ಅವಸರವಾಗಿ ತಯಾರು ಮಾಡಿರುವಂತಹ ಭಾಷಣ. ಆದರೆ ಯಾವ ಸರ್ಕಾರವೇ ಆಗಲಿ ಕಾನ್ಸ್ಟಿಟ್ಯೂಷನ್ ಡೈರೆಕ್ಟೀವ್ ಪ್ರಿನ್ಸಿಪಲ್ ಜಾರಿಗೆ ಕೊಡದಿದ್ದರೆ ನಾವು ಇನ್ನು ಯಾರ ಹತ್ತಿರ ಹೋಗಬೇಕು ಕೇಳುವುದಕ್ಕೆ ? ದಯಮಾಡಿ ಹೇಳಿ. ಇದರ ಬಗ್ಗೆ ಕಾರ್ಯರೂಪಕ್ಕೆ ತರದಿದ್ದರೆ ಮತ್ತೆ ಹೊರಗಡೆ ಚಳುವಳಿ ಮಾಡಬೇಕು. ಆ ರೀತಿ ಚಳುವಳಿ ಮಾಡುತ್ತೇವೆಂದು ಸರ್ಕಾರದಲ್ಲಿ ಅಧಿಕಾರದಲ್ಲಿರುವವರು ಸದೆ ಬಡಿಯುತ್ತಾರೆ. ಹಾಗಾದರೆ ಯಾವ ರೀತಿ ಈ ಜನರ ಕಲ್ಯಾಣವಾಗಬೇಕು. ಕಾರ್ಮಿಕರ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಮಿನಿಮಮ್ ವೇಜಸ್ ಬಗ್ಗೆ ಹೋರಾಟ ನಡೆಯುತ್ತಿದೆಯೇ ಹೊರತು,

ಅವರಿಗೆ ಫುಲ್‌ಲಿವಿಂಗ್ ಕೊಡಬೇಕು ಎನ್ನುವ ವಿಷಯವೇ ಇಲ್ಲ. ಅವರಿಗೆ ಅನುಕೂಲ ಮಾಡಿಕೊಡಬೇಕು ಎಂಬುದರ ಬಗ್ಗೆ ಇವತ್ತಿನವರೆಗೂ ಯಾವ ಸರ್ಕಾರವೂ ಮಾಡಲಿಲ್ಲ. ಈ ಬಗ್ಗೆ ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದೀರಿ ? ಪಾಪಾ ನೀವು ಅಧಿಕಾರಕ್ಕೆ ಬಂದು ಕೇವಲ ೧೩ ದಿವಸಗಳೊಳಗಾಗಿ ರಾಜ್ಯಪಾಲರ ಭಾಷಣವನ್ನು ತಯಾರು ಮಾಡಬೇಕಾಗಿತ್ತು ? ಆದ್ದರಿಂದ ಅವಸರ ಅವಸರವಾಗಿ ನಿಮ್ಮ ಅಧಿಕಾರಿಗಳು ಇದನ್ನು ತಯಾರು ಮಾಡಿದ್ದಾರೆ. ಅಧಿಕಾರಿಗಳು ಹೇಗೆ ಇರುತ್ತಾರೆಂಬುದು ನಿಮಗೆ ಗೊತ್ತಾ ಸ್ವಾಮಿ ? ಹಿಂದಿನ ವರ್ಷಗಳಲ್ಲಿ ನಾವು ಹೇಳಿದ್ದನ್ನು ಬರೆದಿದ್ದಾರೆ, ನಾನು ಯಾರ ಮೇಲೂ ತಪ್ಪನ್ನು ಹಾಕುವುದಕ್ಕೋಸ್ಕರ ಈ ಮಾತನ್ನು ಹೇಳುತ್ತಿಲ್ಲ. ಆಕಾಶ ವಿಶಾಲವಾಗಿದೆ, ಭೂಮಿ ಗುಂಡಾಗಿದೆ ಎಂಬಂತೆ ಆಗಬಾರದು. ರಾಜ್ಯ ಸರ್ಕಾರದ ಕಾರ್ಯಕ್ರಮ ಏನು, ನೀತಿ ನಿರೂಪಗಳೇನು ಎಂಬುದರ ಬಗ್ಗೆ ಏನನ್ನೂ ಇದರಲ್ಲಿ, ಪ್ರಸ್ತಾಪ ಮಾಡಿಲ್ಲ ನೀವು ಅಧಿಕಾರಕ್ಕೆ ಬಂದು ಕೇವಲ ೧೩ ದಿವಸಗಳಾಯಿತು, ನಿಮ್ಮ ಕೈಯ್ಯಲ್ಲಾದುದನ್ನು ಮಾಡಿದ್ದೀರಿ, ನಾವು ಅದರ ಬಗ್ಗೆ ಮಾತನಾಡಬೇಕಾಗಿದೆ ಅಸೆಂಬ್ಲಿ ಡಿಸಾಲ್ವ್ ಮಾಡುತ್ತಾರೆಂದು ನಾನು ಕೇಳಿದ್ದೇನೆ. ಮಾಡಿದರೆ ಒಳ್ಳೆಯದು. ಒಂದು ಪಕ್ಷ ಆ ರೀತಿ ಮಾಡಿದಿದ್ದರೆ ಸರಿಯಾಗಿ ರಾಜ್ಯಭಾರ ಮಾಡಿ ಅಂತ ಈಗಿನ ಸರ್ಕಾರದವರಿಗೆ ಹೇಳುತ್ತಿದ್ದೇನೆ. ಆ ರೀತಿ ರಾಜ್ಯಭಾರವನ್ನು ಮಾಡುವಾಗ ಡೈರೆಕ್ಟೀವ್ ಪ್ರಿನ್ಸಿಪಲ್ ಆಫ್ ದಿ ಕಾನ್‌ಸ್ಟಿಟ್ಯೂಷನ್ ಏನಿದೆ ಅದರಂತೆ, ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ, ಅದರ ನೀತಿ ನಿರೂಪಣೆಗಳೇನು ಅದನ್ನು ರಾಜ್ಯ ಸರ್ಕಾರ ಕಡ್ಡಾಯವಾಗಿ ಅನುಷ್ಠಾನಕ್ಕೆ ತರಬೇಕು. ಅದನ್ನು ಮಾಡುವುದಕ್ಕೆ ನಿಮ್ಮ ಗುರಿ ಏನು, ವಸ್ತು ರೂಪ ಏನು ? ಅದರ ಬಗ್ಗೆ ಮಾರ್ಗದರ್ಶನ ಕೊಡತಕ್ಕಂತಹ ಒಂದು ಮೇಲ್ಪಂಕ್ತಿ ಇದು ಆಗಿರಬೇಕು. ಇದನ್ನು ದಯಮಾಡಿ ತಪ್ಪು ಎಂಬುದಾಗಿ ತಿಳಿಯಬೇಡಿ. ಈ ಹಿಂದೆ ಮಾತನಾಡಿದವರ ಪೈಕಿ ಶ್ರೀಮಾನ್ ಎಚ್. ಟಿ. ಕೃಷ್ಣಪ್ಪನವರು ಒಳಚರಂಡಿ. ಸ್ಕೂಲು. ಸ್ಲಂ ಕ್ಲಿಯರೆನ್ಸ್ ತೆಂಗಿನ ಗರಿ ಒಣಗಿರುವುದು, ಹಸಿರಾಗಿರುವುದು ಇವೆಲ್ಲದರ ಬಗ್ಗೆ ಮಾತನಾಡಿದ್ದಾರೆ. ಆದರೆ ಇದೆಲ್ಲಾ ರಾಜ್ಯಪಾಲರ ಭಾಷಣದಲ್ಲಿ ಬರುವುದಿಲ್ಲ. ಅದನ್ನೆಲ್ಲಾ ಬಜೆಟಿನಲ್ಲಿ ಮಾತನಾಡಬೇಕು. ಈ ರಾಜ್ಯಪಾಲರ ಭಾಷಣದಲ್ಲಿ ಈ ಒಂದು ಸರ್ಕಾರದ ನೀತಿ ಏನು ? ಯೋಜನೆಗಳೇನು ? ಉದ್ದೇಶ ಏನು ? ಏನನ್ನು ಸಾಧನೆ ಮಾಡಿದೆ ? ಏನನ್ನು ಸಾಧನೆ ಮಾಡಬೇಕು ? ಎನ್ನತಕ್ಕಂತಹದ್ದು ಇದರಲ್ಲಿ ಅಡಕವಾಗಿರಬೇಕು. ರಾಜ್ಯಾಂಗದಲ್ಲಿ ಫಂಡಮೆಂಟಲ್ ರೈಟ್ಸ್ ಅಂತ ಇದೆ. ಆ ಪ್ರಕಾರ ಈಗಿನ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದಿದೆ. ಎಂಬುದು ಇದರಲ್ಲಿ ಪ್ರಸ್ತಾಪವಾಗಬೇಕಾಗಿತ್ತು. ಆದರೆ ಪೀಪಲ್ಸ್ ಎಜುಕೇಷನ್ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿದ್ದಾರೆ. ಬಾಕಿ ಇನ್ನುಳಿದವುಗಳ ಬಗ್ಗೆ ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ಎಂಬುದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ. ಶ್ರೀಮಾನ್ ಗುಂಡೂರಾವ್‌ರವರು ಹೇಳುತ್ತಿದ್ದರು, ರಾಜ್ಯಪಾಲರ ಭಾಷಣದಲ್ಲಿ ಏನಿದೆ. ಒಂದೇ ದಿವಸದಲ್ಲಿ ಮುಗಿಸಬಹುದೆಂದು, ಅದರಂತೆ ಇದರಲ್ಲಿ ಏನೂ ಇಲ್ಲ, ಮಾಡಬೇಕೆಂಬ ಸಂಪ್ರದಾಯದಂತೆ ಮಾಡಿದ್ದೀರಿ. ೧೨ ದಿವಸಗಳಲ್ಲಿ ಏನನ್ನು ಮಾಡುವುದಕ್ಕಾಗುತ್ತದೆ ? ದಯಮಾಡಿ ಈ ಕಡೆ ಗಮನ ಕೊಡಿ. ಇನ್ನು ಮುಂದಾದರೂ ಈ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡಿ. ಈ ದೇಶದಲ್ಲಿ ರಾಜ್ಯಗಳ ಪುನರ್ ವಿಂಗಡಣೆ ಮಾಡಬೇಕೆಂದು ಪಜಲಾಲಿ ಕಮಿಟಿ ಎಂದು ರಚನೆ ಮಾಡಿದರು ; ೧೯೫೬ ರಲ್ಲಿ ಅದು ಆಯಿತ್ತು, ಅದಾದಮೇಲೆ ಈ ಒಂದು ಗಡಿ ಸಮಸ್ಯೆ ಹಾಗೇ ಉಳಿದಿದೆ, ಅದರ ಬಗ್ಗೆ ಒಂದು ಚಕಾರವಿಲ್ಲ. ಆದರೆ ಮಾನ್ಯ ಗುಂಡುರಾಯರು, ಬೆಳಗಾಂನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಮಾರಂಭದಲ್ಲಿ ಮಾತನಾಡುತ್ತಾ ಕಾಸರಗೋಡು ನಮಗೆ ಬರಬೇಕು ಎಂದು ಹೇಳಿದ್ದಾರೆ. ಆದರೆ ಬರೀ ಕಾಸರಗೋಡಿನಲ್ಲಿ ಮಾತ್ರ ಕನ್ನಡಿಗರಿದ್ದಾರೆಯೋ ? ಮಡಕಶಿರಾ ಮತ್ತು ತಾಳವಾಡಿಯಲ್ಲಿ ಕನ್ನಡಿಗರಿಲ್ಲವೇ ? ಇನ್ನು ಪಜಲಾಲಿ ಕಮಿಟಿಯ ತೀರ್ಮಾನವನ್ನು ಒಪ್ಪಿಕೊಂಡು ರಾಜ್ಯ ಪುನರ್ ವಿಂಗಡಣೆ ಆದಮೇಲೆ ಕಾಸರಗೋಡು ನಮಗೆ ಬೇಕು ಎಂದು ಹೇಳುತ್ತಾರೆ, ಮಹಾರಾಷ್ಟ್ರ ಏಕೀಕರಣ ಸಮಿತಿಯವರು ನಿಪ್ಪಾಣಿ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಪ್ರತಿ ವರ್ಷವೂ ರಾಜ್ಯಪಾಲರ ಭಾಷಣದ ದಿವಸ ಕೇಸರಿ ಪೇಟ ಹಾಕಿಕೊಂಡು ಬಂದು ಕೂಗುತ್ತಾರೆ. ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರಿಗೆ ಕನ್ನಡ ಮಾತನಾಡಲಿಕ್ಕೆ ಬರುವುದಿಲ್ಲವೇ ?

ಶ್ರೀ ಜೆ. ಎಚ್. ಪಾಟೀಲ್.—ಬರುತ್ತದೆ, ಆದರೆ ಮಾತನಾಡಲಿಕ್ಕೆ ಹೋಗುವುದಿಲ್ಲ, ಅವರಿಗೆ ಕನ್ನಡ ಬರುತ್ತದೆಯೋ ಇಲ್ಲವೇ ಎಂದು ನಿಮಗೆ ಗೊತ್ತಾಗಬೇಕಾದರೆ, ಸಿಕ್ಕಾ ಪಟ್ಟೆ ಅವರನ್ನು ಬಯ್ಯಿರಿ, ಆಗ ಗೊತ್ತಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.— ನಮ್ಮ ಎಂ ಇ ಎಸ್ ಸದಸ್ಯರು ಯಾವಾಗಲ್ಲೂ ಪೇಟ ಕಟ್ಟಿಕೊಂಡು ಬಂದು ರಾಜ್ಯಪಾಲರ ಭಾಷಣದ ಸಮಯದಲ್ಲಿ ಛತ್ರಪತಿ ಶಿವಾಜಿ ಮಹಾರಾಜ್ ಕೀ ಜೈ ಎಂದು ಕೂಗಿ ಕೊಂಡು ಹೊರಟು ಹೋಗುತ್ತಾರೆ. ಅವರಿಗೆ ಏನಾದರೂ ಒಂದು ಕೊನೆ ಮಾಡಬೇಕು ಅಥವಾ ಅವರ ಸಮಸ್ಯೆಗೆ ಏನಾದರು ಒಂದು ಕೊನೆ ಮಾಡಬೇಕು. ಮಹಾರಾಷ್ಟ್ರ ಬಿಟ್ಟು ಕಾಸರಗೋಡಿಗೆ ಹೋಗಿ ಬಿಟ್ಟರು ನಮ್ಮ ಮುಖ್ಯ ಮಂತ್ರಿಗಳು. ಇನ್ನು ಮಹಾಜನ್ ಕಮಿಷನ್ ವರದಿ ನಮ್ಮ ಮುಂದೆ ಇದೆ, ಅದನ್ನು ಜಾರಿಗೆ ಕೊಡುತ್ತೀರೋ ಅಥವಾ ಅದನ್ನು ಹಾಗೆಯೇ ಇಡುತ್ತೀರೋ ? ಇದನ್ನು ಸ್ಪಷ್ಟವಾಗಿ ಹೇಳಬೇಕು. ಇದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಲೇ ಬೇಕಿತ್ತು. ಆಮೇಲೆ ಕನ್ನಡವನ್ನು ರಾಜ್ಯ ಭಾಷೆಯಾಗಿ ಎಲ್ಲಾ ಹಂತಗಳಲ್ಲೂ ತರುತ್ತೇವೆಂದು ಹೇಳುತ್ತೀರಿ ; ಆದರೆ ಇದರ ಪ್ರಶಂಸೆ ಮಾನ್ಯ ದೇವರಾಜ್ ಅರಸ್ ರವರಿಗೆ ಹೋಗಬೇಕು. ಇದನ್ನು ಹೇಳಿದರೆ ಮಾನ್ಯ ವೈ. ರಾಮಕೃಷ್ಣರವರು ನಿಮಗೆ ಸೇರುವುದಿಲ್ಲವೆ, ನಿಮಗೇನು ಇಲ್ಲವೋ ಎಂದು ಹೇಳುತ್ತಾರೆ. ಈ ಭಾಷಾ ಪ್ರದೇಶಗಳ ಏಕೀ ಕರಣ ಮಾಡುವ ಕಾರ್ಯದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ವಿಶಾಲ ಕರ್ನಾಟಕವಾಗ ಬೇಕೆಂದು ನಾನು ಕೂಡ ಅವರ ಜೊತೆಯಲ್ಲಿ ಹೋರಾಟ ಮಾಡಿದ್ದೇನೆ. ಆದರೆ ಅವರ ಕೈಯಲ್ಲೂ ಆಗಲಿಲ್ಲ, ಮಾನ್ಯ ಜತ್ತಿಯವರು ಆ ಕಾರ್ಯಕ್ಕೆ ಕೈ ಹಾಕಲಿಲ್ಲ. ಅವರು ಯಾವಾಗಲೂ ಹಿಡಿತಕ್ಕೆ ಅಥವಾ ಹೊಡೆತಕ್ಕೆ ಸಿಕ್ಕುವವರಲ್ಲ, ಆ ರೀತಿ ಏನಾದರೂ ಮಾಡುವುದಕ್ಕೆ ಹೋದರೆ ನನ್ನನ್ನು ಮುಖ್ಯ ಮಂತ್ರಿಯ ಸ್ಥಾನದಿಂದ ತೆಗೆದು ಹಾಕಿ ಯಾರು ಎನ್ನುವ ಭಯದಿಂದ ಆ ಕೆಲಸಕ್ಕೆ ಅವರು ಕೈ ಹಾಕಲಿಲ್ಲ. ಅವರು ಇಲ್ಲಿ ಇಲ್ಲದಿರುವುದರಿಂದ ಅವರ ಬಗ್ಗೆ ಟೀಕೆ ಮಾಡುವುದು ಸರಿಯಲ್ಲ. ಆದರೆ ಈ ಪವಿತ್ರವಾದ ಕಾರ್ಯ ವನ್ನು ಮಾನ್ಯ ಅರಸ್ ರವರು ಮಾಡಿದ್ದಾರೆ. ಸಾಮಾನ್ಯವಾಗಿ ಎಲ್ಲರೂ ಇದಕ್ಕೆ ವಿರೋಧ ಮಾಡಿದರೂ ಕೂಡ ಕರ್ನಾಟಕ ರಾಜ್ಯದಲ್ಲಿ ಎಲ್ಲರೂ ಒಪ್ಪುವಂತೆ ಮಾಡಿದರು. ಆದ್ದರಿಂದ ಇದರ ಪ್ರಶಂಸೆಗೆ ಅರ್ಹರ ಲ್ಲವೇ ? ಕನ್ನಡ ಭಾಷೆಯನ್ನು ಎಲ್ಲಾ ಹಂತದಲ್ಲೂ ಜಾರಿಗೆ ತನ್ನಿರಿ ಸಂತೋಷ. ಆದರೆ ನಮ್ಮ ರೆವಿನ್ಯೂ ಇಲಾಖೆಯಲ್ಲಿ ಇರುವ ಕೆಲವು ಅಧಿಕಾರಿಗಳಿಗೆ ಕನ್ನಡ ಬರುವುದಿಲ್ಲ, ಅದರಲ್ಲೂ ಐ ಎ ಎಸ್ ಮಾಡಿದವ ರಂತೂ ಕನ್ನಡ ಕಲಿಯಲಿಕ್ಕೆ ಮನಸ್ಸು ಮಾಡುವುದಿಲ್ಲ. ಅವರು ಕನ್ನಡ ಕಲಿಯುವುದಿಲ್ಲವೆಂದರೆ ಅವರಿಗೆ ಪ್ರೊಮೋಷನ್ ಕೊಡದೆ ನಿಲ್ಲಿಸಬೇಕು. ಕನ್ನಡವನ್ನು ಎಲ್ಲಾ ಹಂತದಲೂ ಜಾರಿಗೆ ತರಲಿಕ್ಕೆ, ಎಷ್ಟು ಅವಧಿ ಬೇಕು, ಯಾವಾಗ ಜಾರಿಗೆ ಕೊಡುತೀರಾ ಎನ್ನುವುದನ್ನು ಇದರಲ್ಲಿ ತಿಳಿಸಿಲ್ಲ. ಇನ್ನು ಕನ್ನಡದ ಮಣ್ಣಿನ ಮಕ್ಕಳಿಗೆ ಕೆಲಸ ಸಿಗಬೇಕೆಂದು ಮಾನ್ಯ ಗುಂಡುರಾವ್ ರವರು ಹೇಳಿದ್ದಾರೆ. ಅದಕ್ಕೆ ಅವರನ್ನು ಪ್ರಶಂಸಿಸಲೇಬೇಕು. ಆದರೆ ಈ ಬಗ್ಗೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದಾರೆಂದು ಹೇಳಿಲ್ಲ. ಯಾವ ಫ್ಯಾಕ್ಟರಿಯಲ್ಲೇ ಆಗಲಿ ಮೊದಲು ಕನ್ನಡಿಗರಿಗೆ ಪ್ರಾಶಸ್ತ್ಯ ಕೊಡಬೇಕು. ಇದನ್ನು ರಾಜ್ಯಪಾಲರ ಭಾಷಣ ದಲ್ಲಿ ಹೇಳಲಿಲ್ಲ. ಇನ್ನು ಒಂದು ಭಯಂಕರ ಸುದ್ದಿ ಇದೆ. ಅದು ಮಲೆನಾಡು ಪ್ರದೇಶದ ಬಗ್ಗೆ. ಚಿಕ್ಕ ಮಂಗಳೂರು, ಮಡಿಕೇರಿ ಹಾಸನ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮಲೆನಾಡು ಪ್ರದೇಶಕ್ಕೆ ಸೇರುತ್ತವೆ ನಮ್ಮ ಪಕ್ಕದ ರಾಜ್ಯಗಳಿಂದ ಜನರು ವಲಸೆ ಬಂದು ಅಲ್ಲಿನ ಕಾಡನ್ನು ಅಕ್ರಮಿಸಿ ಕೊಂಡಿದ್ದಾರೆ. ಇವರುಗಳಿಂದ ಸಂಪೂರ್ಣ ಕಾಡು ನಾಶವಾಗುವುದಲ್ಲದೆ ಈಗ ಅದೇ ಜನ ನಮಗೇ ಆ ಭೂಮಿಯನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ನಾನು ಅವರನ್ನು ಓಡಿಸಲಿಕ್ಕೆ ನಮ್ಮ ಅಧಿಕಾರಿ ಗಳಿಗೆ ನಿರ್ದೇಶನ ಕೊಟ್ಟಿದ್ದೆ. ಕೂರ್ಗಿನ ಅರ್ಧಭಾಗ ಕಾಡು ಈ ಜನರಿಂದ ಹಾಳಾಗುತ್ತಿದೆ, ಇನ್ನೂ ನೆರೆ ರಾಜ್ಯಗಳಿಂದ ಜನರು ಬರುತ್ತಾ ಇದ್ದಾರೆ. ಅದೇ ತಮಿಳುನಾಡು ಕೇರಳ ರಾಜ್ಯದವರು ನಮ್ಮ ಜನ ರಿಗೆ ಏನು ಸಹಾಯ ಮಾಡುತ್ತಿದ್ದಾರೆ ? ಹಿಂದೆ ೨೦–೩೦ ವರ್ಷಗಳಿಂದ ಇಲ್ಲಿಗೆ ಬಂದವರಿಗೆ ಸಹಾಯ ಮಾಡೋಣ. ಆದರೆ ಇಷ್ಟೊಂದು ಪ್ರಮಾಣದಲ್ಲಿ ಕಾಡು ಮಾಯವಾಗುತ್ತಿದ್ದರೂ, ಶಿರಾಡಿ ಭಾಗದಲ್ಲಿ ೧೦–೧೫ ಸಾವಿರ ಜನರು ಈಗಲೂ ಅಲ್ಲಿನ ಕಾಡನ್ನು ನಾಶಮಾಡುತ್ತಿದ್ದಾರೆ ಎನ್ ಆರ್ ಪುರ ಆ ಕಡೆಯಲ್ಲಿ ನಮ್ಮ ಅಧಿಕಾರಿಗಳೆ ಅವರಿಗೆ ಪ್ರೋತ್ಸಾಹ ಕೊಟ್ಟಿದ್ದಾರೆ. ಇದರ ಬಗ್ಗೆ ನೀವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವರಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆಂದು ನನಗೆ ಅನುಮಾನ ಬರುತ್ತದೆ. ಈ ಎಲ್ಲಾ ಕಡೆ ಕಾರ್ಯದರ್ಶಿಗಳು ಮತ್ತು ಇತರೆಯವರು ಅವರೇ ಇದ್ದಾರೆ, ಆದ್ದರಿಂದ ಮುಂದೆ ಪರಿಸ್ಥಿತಿ ನಮಗೆ ಪ್ರತಿಕೂಲವಾಗುವ ಸಂಭವವಿದೆ ಮುಂದೆ ನಮ ಕಾಡಿನ ಆಸ್ತಿ ಪಾಸ್ತಿ ಏನಾಯಿತು ಎಂದು ತಮನ್ನೇ ಕೇಳಬೇಕಾಗುತ್ತದೆ ?

೪. ೩೦. ಪಿ.ಎಂ.

ಶ್ರೀಮಾನ್ ಮೊಯಿಲಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಏನೆಂದರೆ ಕರ್ನಾಟಕ ರಾಜ್ಯದ ಆರ್ಥಿಕ ಸ್ಥಿತಿ ಬಹಳ ಹದಗೆಟ್ಟಿದೆ ಎಂದು, ಇದು ಬಡ್ಜೆಟ್ ಭಾಷಣದಲ್ಲಿ ಹೇಳತಕ್ಕ ಮಾತು. ಆದರೆ ಇವರು ಏನು ಯೋಜನೆಗಳನ್ನು ಇಟ್ಟುಕೊಂಡಿದ್ದಾರೆ, ರಾಜ್ಯಾಂಗದಲ್ಲಿ ನಿರೂಪಣೆಯಾಗಿರತಕ್ಕ ಯೋಜನೆಗಳು ಏನಿವೆ, ಮತ್ತು ಹಲವಾರು ನೀರಾವರಿ ಯೋಜನೆಗಳು ಏನಿವೆ ಅವೆಲ್ಲವನ್ನೂ ಕಾರ್ಯಗತ ಮಾಡುವುದಕ್ಕೆ ಹಣದ ವ್ಯವಸ್ಥೆಯನ್ನು ಜನತೆಗೆ ತೃಪ್ತಿಯಾಗುವ ರೀತಿ ಮಾಡುವ ವಿಷಯ ಬಡ್ಜೆಟ್ ಭಾಷಣದಲ್ಲಿ ನಿರೂಪಣೆ ಮಾಡಬೇಕಾದಂಥಾದ್ದು. ಹಣದ ವಿಚಾರ ರಾಜ್ಯಪಾಲರ ಭಾಷಣದಲ್ಲಿ ನಮೂದು ಮಾಡಬೇಕಾಗಿಲ್ಲ. ನೀವು ಯಾವ ರೀತಿ ಕೆಲಸ ಮಾಡುತ್ತೀರಿ ಎನ್ನುವ ಭರವಸೆ ನಮಗೆ ಬೇಕು. ದಯ ಮಾಡಿ ಅದನ್ನು ಹೇಳಿ ಅದನ್ನು ರಾಜ್ಯಪಾಲರ ಭಾಷಣದಲ್ಲಿ ನಮೂದು ಮಾಡಬೇಕಾಗಿತ್ತು.

ಶ್ರೀ ಎಂ. ವೀರಪ್ಪಮೊಯಿಲಿ.—ಹಿಂದಿನ ಸರ್ಕಾರದವರು ಏನು ಒಳ್ಳೆಯ ಕೆಲಸ ಮಾಡಿದ್ದಾರೆ ಅದನ್ನು ನೇರವಾಗಿ ತಾವು ಹೇಳಬಹುದು. ಮತ್ತು ಕೆಲವು ಭರವಸೆಗಳನ್ನೇನು ಕೊಟ್ಟಿದ್ದಾರೆ, ಮತ್ತೆ ಏನು ಮಾಡಿದ್ದಾರೆ ಎಂಬುದನ್ನು ಇದರಲ್ಲಿ ಹೇಳುವ ಬದಲು ಅವುಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಮುಂದೆ ಕಾರ್ಯಗತ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಬಡ್ಜೆಟ್ಟಿನಲ್ಲಿ ಕೆಲವರಿಗೆ ಒಂದು ತರಹ ಭ್ರಮೆ, ಬಡ್ಜೆಟ್ಟಿನಲ್ಲಿ ಹೇಳುವುದೆಲ್ಲಾ ನಮಗೆ ಗೊತ್ತಾಗುತ್ತದೆ. ಇದರಲ್ಲಿ ಏನೋ ಗುಟ್ಟು ಇರುತ್ತದೆ, ಅದು ಮೊದಲೇ ಗೊತ್ತಾದರೆ ಬೇರೆಯವರಿಗೆ ಲಾಭ ಆಗುತ್ತದೆ ಮತ್ತು ಆದರಿಂದ ಏನೋ ತೊಂದರೆಯಾಗುತ್ತದೆ ಎನ್ನುವ ಅಭಿಪ್ರಾಯ ಇರುತ್ತದೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಅಂಕಿಅಂಶಗಳನ್ನು ಕೊಡಬೇಕಾಗಿಲ್ಲ. ಬಡ್ಜೆಟ್ ಅಂದಾಜುಗಳು ಕಟ್ಟಾಗುತ್ತದೆ, ಇವೆಲ್ಲವನ್ನು ಈಗ ಕೊಡಬೇಕೆಂದು ನಾನು ಹೇಳುತ್ತಿಲ್ಲ. ಆರ್ಥಿಕ ಪರಿಸ್ಥಿತಿ ಸರಿಯಾಗಿದೆ, ಅಥವಾ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲ. ಅದರ ನಿರ್ವಹಣೆಯನ್ನು ಮಾಡುತ್ತೇವೆ ಅಥವಾ ನಿರ್ವಹಣೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಬಹುದಾಗಿತ್ತು. ರಾಜ್ಯ ಮಟ್ಟದ ಕೆಲವು ಸಮಸ್ಯೆಗಳನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡುತ್ತಾ ಹೇಳಿದ್ದಾರೆ. ಅದರ ಬಗ್ಗೆ ನಾಲ್ಕಾರು ಮಾತುಗಳನ್ನು ಹೇಳುತ್ತೇನೆ. ಶ್ರೀಮಾನ್ ಗುಂಡೂರಾವ್ ಅವರು ಮುಖ್ಯ ಮಂತ್ರಿಗಳಾದ ತಕ್ಷಣ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಅದು ಈ ರೀತಿ ಇದೆ " The three member State Cabinet headed by Sri R. Gundu Rao at his first meeting soon after the swearing in ceremony, ensured supply of essential articles, reduction in prices of kerosene, onions and sugar and fair distrubution to the people. ಎಂದು ಇದನ್ನು ನೋಡಿದ ತಕ್ಷಣ ನನಗೆ ಬಹಳ ಆಹ್ಲಾದವಾಯಿತು. ಆನಂದವಾಯಿತು. ಚುನಾವಣೆ ಆದತಕ್ಷಣ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಗುಂಡೂರಾವ್ ಅವರು ಏಂತಹ ಕೊಡುಗೆಯನ್ನು ಜನತೆಗೆ ಕೊಟ್ಟಿದ್ದಾರೆ ಎಂದು ನನಗೆ ಬಹಳ ತೃಪ್ತಿಯಾಯಿತು. ಅವರು ಆ ರೀತಿ ಹೇಳಿಕೆ ಕೊಟ್ಟು ಎಷ್ಟು ದಿವಸಗಳು ಆಯಿತು ಎರಡು ತಿಂಗಳು ಆಯಿತು. ಈಗ ಕೆರೋಸಿನ್ ಇಲ್ಲದಂತಾಗಿದೆ. ಮೊದಲು ಸಕ್ಕರೆ ೫ ರೂಪಾಯಿಗಳಿಗೆ ಒಂದು ಕೆ.ಜಿ. ಸಿಕ್ಕುತ್ತಿತ್ತು. ಇವೊತ್ತು ಏನಾಗಿದೆ ಇದರ ಬಗ್ಗೆ ಶ್ರೀಮಾನ್ ಲಕ್ಷ್ಮೀಸಾಗರ್ ಅವರು ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿದ್ದಾರೆ. ೧೦ ರೂಪಾಯಿಗಳು ಇದ್ದರೆ ಇರಲಿ, ಪರವಾಯಿಲ್ಲ ಎಂದು ಶ್ರೀ ಗುಂಡೂರಾಯರು ಹೇಳಿದ್ದಾರೆ. ಸಾರ್ವಜನಿಕರಿಗೆ ಅವಶ್ಯಕ ವಸ್ತುಗಳನ್ನು ಬಹಳ ಸುಲಲಿತವಾಗಿ ಸರಬರಾಜು ಮಾಡುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇವರು ಮೊದಲನೇ ದಿವಸದಿಂದ ಏನೇನು ಕೆಲಸ ಮಾಡಿದ್ದಾರೆ. ಈ ಬೆಲೆಗಳ ಏರಿಕೆಯನ್ನು ಹತೋಟಿಗೆ ತಂದಿದ್ದಾರೆಯೇ ಜನಗಳು ಆಗ ನಮಗೆ ಓಟು ಕೊಡಲಿಲ್ಲ. ನಿಮಗೆ ಜನಗಳು ಓಟು ಕೊಟ್ಟರು. ನೀವು ಅಧಿಕಾರಕ್ಕೆ ಬಂದಿದ್ದೀರಿ, ಈಗ ಬೆಲೆಗಳನ್ನು ಜಾಸ್ತಿ ಮಾಡಿಕೊಂಡು ಹೋಗಿದ್ದೀರಿ ಇದು ಒಳ್ಳೆಯ ಕೆಲಸ. ಬೆಲೆಗಳು ಏರಿದರೂ ಕೂಡ ಗುಲ್ಬರ್ಗಾದಲ್ಲಿ ಜನ ನಿಮಗೆ ಓಟು ಕೊಟ್ಟಿದ್ದಾರೆ. ೭೦ ಸಾವಿರಕ್ಕೆ ಮೇಲ್ಪಟ್ಟು ಜನ ನಿಮಗೆ ಎಂದರೆ ಕಾಂಗ್ರೆಸ್ ಐ ಪಕ್ಷಕ್ಕೆ ವೋಟು ಕೊಟ್ಟಿದ್ದಾರೆ.

ಮೈಖೇಲ್ ಬಿ. ಫರ್ನಾಂಡಿಸ್.—ಅದರ ಅರ್ಥ ಬೆಲೆ ಏರಿಕೆ ಆಗಿದೆ ಎಂಬುದನ್ನು ಜನಗಳು ಒಪ್ಪಿಕೊಂಡಿದ್ದಾರೆಂದು ಆಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಇಲ್ಲಿ ಯಾವ ಇಷ್ಯೂ ಬಂದಿದೆ ಎಂಬುದು ಎಲ್ಲರಿಗೂ ಸ್ಪಷ್ಟವಾಗಿದೆ. ಅವರು ಇನ್ನೂ ಹಿಂದಿನ ಗುಂಗಿನಲ್ಲೇ ಇದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ನನಗೆ ಯಾವ ಗುಂಗು ಇಲ್ಲ. ಸಾರ್ವತ್ರಿಕ ಚುನಾವಣೆ ಮುಗಿದು ಗುಲ್ಬರ್ಗಾ ಚುನಾವಣೆ ನಡೆಯುವ ವೇಳೆಗೆ ಒಂದು ತಿಂಗಳಾಗಿತ್ತು. ಈ ಒಂದು ತಿಂಗಳ ಅವಧಿಯಲ್ಲಿ ಅಷ್ಟೊಂದು ಬೆಲೆ ಏರಿದರೂ ಕೂಡ ಜನಗಳು ನಮ್ಮ ಪಕ್ಷಕ್ಕೇ ವೋಟು ಕೊಟ್ಟಿದ್ದಾರೆ ಎಂದು ಶ್ರೀಮಾನ್ ಗುಂಡೂರಾವ್ ಅವರು ಹೇಳಿದ್ದಾರೆ. ಜೀವನಾವಶ್ಯಕ ವಸ್ತುಗಳ ಬೆಲೆ ಏರುತ್ತಿದೆ. ಸಕ್ಕರೆ ಒಂದು ಕೆ.ಜಿ.ಗೆ ೧೦–೧೫ ರೂಪಾಯಿಗಳಾಗಿದೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ, ಜನಗಳು ನಮ್ಮ ಹತ್ತಿರ ಇದ್ದಾರೆ. ಬೆಲೆ ಎಲ್ಲಿಯವರೆಗೆ ಏರುತ್ತದೆ ಅಲ್ಲಿಯವರೆಗೂ ಏರಿಸಿ, ನಾವು ಚೆನ್ನಾಗಿ ಕೆಲಸ ಮಾಡುತ್ತೇವೆ, ನಮ್ಮ ಹತ್ತಿರ ಜನ ಇರುತ್ತಾರೆ. ಎಂದು ಹೇಳುತ್ತಾರೆ. ನಮ್ಮ ಜನಗಳನ್ನು ದಡ್ಡ ಜನ ಎಂದು ತಾವು ತಿಳಿದುಕೊಂಡಿದ್ದೀರಿ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಸಾಕಷ್ಟು ಕೆಲಸ ಮಾಡಿದ್ದೇವೆ ನಿರ್ಭಯವಾಗಿ ಜನರ ಸೇವೆ ಮಾಡಬೇಕು ಎಂದು ಬಡಜನಗಳಿಗೆ ಸೈಟು ಕೊಟ್ಟಿದ್ದೇವೆ. ಮನೆ ಕಟ್ಟಿಸಿಕೊಟ್ಟಿದ್ದೇವೆ. ಹರಿಜನರು ತಮ್ಮ ತಲೆಯ ಮೇಲೆ ಮಲ ಹೊರುವ ಕೆಲಸವನ್ನು ಈ ದೇಶದಲ್ಲಿ ಮಾಡಬಾರದು. ಅವರನ್ನೂ ಮನುಷ್ಯರು ಎಂದು ಪರಿಗಣಿಸಬೇಕು ಎಂದು ನಾನು ಮೊಟ್ಟಮೊದಲು ಮಂತ್ರಿಯಾದ ವರ್ಷವೇ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ ಹರಿಜನರು ತಲೆಯ ಮೇಲೆ ಮಲ ಹೊರುತ್ತಿದ್ದ ಒಂದು ಅಮಾನುಷ ಪದ್ಧತಿಯನ್ನು ನಿಲ್ಲಿಸಲಾಯಿತು ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮನ್ನು ಜಾರಿಗೆ ತಂದೆವು. ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳಿಗೆ ಕೂಲಿ ಸಿಕ್ಕಲಿ, ಬಡಜನಗಳಿಗೆ ಅನುಕೂಲವಾಗಲಿ ಎಂದು ಆ ಒಂದು ಯೋಜನೆಯನ್ನು ಜಾರಿಗೆ ತಂದೆವು. ಆದ್ದರಿಂದ ಹಿಂದೆ ಜನ ನಮ್ಮ ಮಾತು ಕೇಳಿದರು. ಆದರೆ ಈ ಸಾರಿ ಜನಗಳು ಶ್ರೀಮತಿ ಇಂದಿರಾಗಾಂಧಿಯವರಿಗೆ ವೋಟು ಕೊಡೋಣ ಎಂದು ಅವರಿಗೆ ವೋಟು ಕೊಟ್ಟಿದ್ದಾರೆ. ಜನಗಳು ಶ್ರೀಮತಿ ಇಂದಿರಾಗಾಂಧಿಯವರಿಗೆ ವೋಟು ಕೊಟ್ಟರು. ಶ್ರೀಮತಿ ಇಂದಿರಾಗಾಂಧಿಯವರ ಫೋಟೋದ ಪಕ್ಕದಲ್ಲಿ ಆ ಅಭ್ಯರ್ಥಿಗಳು ಅವರ ಫೋಟೋವನ್ನು ಹಾಕಿಕೊಳ್ಳಬೇಡಿ ಎಂದು ಹೇಳಿದ್ದರೂ ಕೂಡ ಬೆಂಗಳೂರಿನಲ್ಲಿ ಶ್ರೀಮಾನ್ ಶರ್ಮಾಅವರ ತಮ್ಮ ಫೋಟೋವನ್ನು ಶ್ರೀಮತಿ ಇಂದಿರಾಗಾಂಧಿಯವರ ಫೋಟೋದ ಪಕ್ಕದಲ್ಲಿ ಹಾಕಿಕೊಂಡರು ಅದಕ್ಕಾಗಿ ಅವರು ಚುನಾವಣೆಯಲ್ಲಿ ಸೋತರು. ಇದೇ ಬೆಂಗಳೂರಿನಲ್ಲಿ ಶ್ರೀಮಾನ್ ಜಾಫರ್‌ಷರೀಫ್ ಅವರು ಏನು ಮಾಡಿದ್ದರೆಂದರೆ ಚುನಾವಣೆಯಲ್ಲಿ ಇಂದಿರಾಗಾಂಧಿಯವರ ಫೋಟೋವನ್ನು ಹಾಕಿ ವೋಟ್ ಫಾರ್ ಇಂದಿರಾಗಾಂಧಿ ಎಂದರು. ಜನ ಇಂದಿರಾಗಾಂಧಿಯವರಿಗೆ ವೋಟು ಕೊಟ್ಟರು ಶ್ರೀಮಾನ್ ಜಾಫರ್ ಷರೀಫ್ ಅವರು ಚುನಾವಣೆಯಲ್ಲಿ ಗೆದ್ದು ಬಂದರು.

ಶ್ರೀ ಎಸ್, ಆರ್. ಬೊಮ್ಮಾಯಿ.—ರಾಷ್ಟ್ರದಲ್ಲಿ ಲೋಕಸಭೆಯ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದ ಅಭ್ಯರ್ಥಿಗಳು ಯಾರೂ ಎಂದರೆ ಶ್ರೀಮತಿ ಇಂದಿರಾಗಾಂಧಿಯವರು ಒಬ್ಬರೇ ಒಬ್ಬರು ಕ್ಯಾಂಡಿಡೇಟ್.

ಶ್ರೀ ಬಿ. ಬಸವಲಿಂಗಪ್ಪ.—ಆದ್ದರಿಂದ ಜನಗಳು ವೋಟ್ ಫಾರ್ ಇಂದಿರಾಗಾಂದಿ ಎಂದು ಹೇಳಿ ಎಲ್ಲರೂ ಶ್ರೀಮತಿ ಇಂದಿರಾಗಾಂಧಿಯವರಿಗೆ ವೋಟು ಹಾಕಿದರು. ಶ್ರೀಮಾನ್ ಎಂ.ವಿ. ಕೃಷ್ಣಪ್ಪನವರು ಮೊನ್ನೆತಾನೆ ನಮ್ಮಪಾರ್ಟಿಯನ್ನು ಬಿಟ್ಟು ಕಾಂಗ್ರೆಸ್ ‘ಐ’ ಗೆ ಸೇರಿದ್ದಾರೆ. ಪಾಪ ಅವರು ಮೊನ್ನೆ ನಡೆದ ಚುನಾವಣೆಯಲ್ಲಿ ಡಿಪಾಜಿಟ್ ಕಳೆದುಕೊಂಡಿದ್ದಾರೆ. ಅವರ ವಿರುದ್ಧ ನಿಂತು ಚುನಾವಣೆಯಲ್ಲಿ ಗೆದ್ದು ಬಂದಂತಹ ವ್ಯಕ್ತಿ ಯಾರಿಗೂ ಗೊತ್ತಿಲ್ಲದೆ ಇರುವಂತಹ ವ್ಯಕ್ತಿ. ಅವರ ಹೆಸರಿಗೆ ಯಾರೂ ವೋಟು ಕೊಟ್ಟಿಲ್ಲ. ವೋಟ್ ಫಾರ್ ಇಂದಿರಾಗಾಂಧಿ ಎಂದು ಹೇಳಿ ಎಲ್ಲಾ ಇಂದಿರಾಗಾಂಧಿಗೆ ವೋಟು ಹಾಕಿದರು, ಅವರು ಗೆದ್ದು ಬಂದರು. ಈ ರೀತಿ ಒಟ್ಟು ಲೋಕಸಭೆಗೆ ಕಾಂಗ್ರೆಸ್ ‘ಐ’ ಪಕ್ಷದಿಂದ ಗೆದ್ದು ಬಂದಿರತಕ್ಕ ೩೫೧ ಜನ ಅಭ್ಯರ್ಥಿಗಳೂ ಸಹ ವೋಟ್ ಫಾರ್ ಇಂದಿರಾಗಾಂಧಿ ಎಂದು ಅವರ ಹೆಸರಿನಲ್ಲಿ ಗೆದ್ದು ಬಂದಿದ್ದಾರೆ. ಹೀಗೆ ಎಲ್ಲರೂ ಕೂಡ ವೋಟ್ ಫಾರ್ ಇಂದಿರಾಗಾಂಧಿ ಎನ್ನುವಂಥ ಮತ್ತು ಅವರ ಒಂದು ಆಶೀರ್ವಾದದಿಂದ ಗೆದ್ದು ಬಂದವರು. ವೈಯುಕ್ತಿಕ ಬಲದಿಂದ ಬಂದರು ಅಲ್ಲಿ. ಇಂದಿರಾಗಾಂಧಿಯವರ ಫೋಟೋಬಿಟ್ಟು ತಮ್ಮ ಫೋಟೋ ಹಾಕಿಕೊಂಡು ಗೆದ್ದುಬಂದರು ಎಷ್ಟುಜನ ಪಾರ್ಲಿಮೆಂಟ್ ಸದಸ್ಯರಿದ್ದಾರೆನ್ನುವುದನ್ನು ನಾವು ಪ್ರಶ್ನೆ ಮಾಡಬೇಕಾಗಿದೆ. ಈ ರೀತಿ ಪ್ರಶ್ನೆಮಾಡಿ

ದಾಗ ೩೫೪ ಜನರಲ್ಲಿ ನಾನು ಹೇಳುವುದಾದರೆ, ಒಬ್ಬರೇ ಒಬ್ಬರು ಇದ್ದಾರೆ. ಅವರು ಇಂದಿರಾಗಾಂಧಿಯವರು.

ಶ್ರೀ ಶಿವಯೋಗಿ ಪಾಟೀಲ್.—ತಾವೂ ಅವರ ಹೆಸರಿನಲ್ಲಿ ಆರಿಸಿಬಂದವರಲ್ಲವೇ?

ಶ್ರೀ. ಬಿ, ಬಸವಲಿಂಗಪ್ಪ.—ಕೂತುಕೊಳ್ಳಿ, ತಾವಿನ್ನೂ ಹೊಸದಾಗಿ ಬಂದಿದ್ದೀರಿ, ನಿಮಗೆ ಇನ್ನೂ ಇದು ಗೊತ್ತಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರೇನೋ ಹೊಸ ಸದಸ್ಯರು. ತಾವು ಅನೇಕ ವರ್ಷಗಳಿಂದ ಹೇಗೆ ಆರಿಸಿ ಬಂದಿದ್ದೀರಿ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಅವರಿಗೆ ಆಸಕ್ತಿ ಅಷ್ಟೇ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಹಳ್ಳಿಕಡೆ ಒಂದು ಗಾದೆ ಮಾತು ಹೇಳುತ್ತಾರೆ, ಏನೆಂದರೆ, ಆರು ಹೆತ್ತವಳ ಮುಂದೆ ಮೂರು ಹೆತ್ತವಳು ಬಹಳ ಗೋಳಾಡಿದಳು ಎಂದು, ಆ ರೀತಿ ಇವರು ಹೇಳುವುದು. ನಿಮಗಿನ್ನೂ ಇದು ಗೊತ್ತಾಗುವುದಿಲ್ಲ. ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್ (ಐ) ಗೆ ಸೇರಿದರು ೩೫೪ ಜನ ಸದಸ್ಯರಿದ್ದಾರೆ. ಇವರೆಲ್ಲರೂ ಸಹ ವೋಟ್ ಫಾರ್ ಇಂದಿರಾಗಾಂಧಿ, ಅಂದರೆ, ಅವರ ಹೆಸರಿನಲ್ಲಿ ಬಂದವರು ಎಂದು ಅರ್ಥ, 354 membres are there on the nominal rolls of the Parliament.

ಶ್ರೀ ವೈ. ರಾಮಕೃಷ್ಣ.—ಇದು ನಿಮ್ಮ ವೈಯಕ್ತಿಕ ಅಭಿಪ್ರಾಯ.

ಶ್ರೀ ಎಂ, ವೀರಪ್ಪ ಮೊಯಿಲಿ,—Poor arthmatic.

ಶ್ರೀ ಬಿ. ಬಸವಲಿಂಗಪ್ಪ,.—You become a student of mathematics for a minute. Vote for Indira Gandhi candidates are 354. ಇನ್ನು ಇತರರು ೧೫೪ ಜನ ಉಳಿದರು, ೧೬ ಜನ ಡಿ ಎಂ.ಕೆ. ಸದಸ್ಯರನ್ನು ಸೇರಿಸಿದರೆ, ೩೭೦ ಜನ ಸದಸ್ಯರಾಗುತ್ತಾರೆ ನನ್ನ ದೃಷ್ಟಿಯಲ್ಲಿ ಪಾರ್ಲಿಮೆಂಟ್ ಸದಸ್ಯರು ೧೫೫+ ೧—೧೫೬ ಜನ ಮಾತ್ರ. ಇದಕ್ಕೆ ತಾವೇನೂ ಆಶ್ಚರ್ಯ ಪಡಬೇಕಾಗಿಲ್ಲ. ಮಾನ್ಯ ರಾಮಕೃಷ್ಣ ಅವರು ಜನತಾ ಪಾರ್ಟಿಯಿಂದ ಅಲ್ಲಿಗೆ ಈಗ ಹೋಗಿದ್ದಾರೆ, ಅವರಿಗೆ ಈ ಲೆಕ್ಕ ಗೊತ್ತಿಲ್ಲ.

ಶ್ರೀ ವೈ. ರಾಮಕೃಷ್ಣ.—ನೀವೂ ಸಹ ಇಲ್ಲಿಂದ ಹೋಗಿಯೇ ಈ ಲೆಕ್ಕವನ್ನು ಹೇಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಲೆಕ್ಕವನ್ನು ನಾವೆಲ್ಲಾ ಕಲಿತಿದ್ದೇವೆ. ಬೇರೆಯವರು ಕಲಿಯಲಿಕ್ಕೆ ಪ್ರಯತ್ನ ಮಾಡಿ ಸತ್ತುಹೋದರು. ಮಾನ್ಯ ದೇವರಾಜ ಅರಸ್ ಫೋಟೋವನ್ನು ಕೂಡ ಹಾಕಿಕೊಂಡು ಕೆಲವರು ಪ್ರಯತ್ನ ನಡೆಸಿದರು. ಮಾನ್ಯ ಜಗಜೀವನ್‌ರಾಮ್ ಅವರ ಫೋಟೋ ಕೂಡ ಹಾಕಿಕೊಂಡು ಪ್ರಯತ್ನ ಮಾಡಿದರು, ಆದರೆ ಇವರ ಯಾವ ಲೆಕ್ಕಗಳೂ ಫಲಕಾರಿಯಾಗಲಿಲ್ಲ. ಆದ್ದರಿಂದ ಈ ಲೆಕ್ಕ ಇಲ್ಲಿಗೆ ನಿಲ್ಲುವುದಿಲ್ಲ, ಮುಂದುವರಿಯುತ್ತದೆ. ಇದಕ್ಕೆ ಫುಲ್ ಸ್ಟಾಪ್ ಹಾಕಬೇಡಿ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಅಭಿಪ್ರಾಯಕ್ಕೂ ನನ್ನ ಅಭಿಪ್ರಾಯಕ್ಕೂ ವ್ಯತ್ಯಾಸವಿಲ್ಲ. ಮೊನ್ನೆ ನಾನು ದೇವೇಗೌಡರಿಗೆ ನೀವು ಗಂಡಸರಲ್ಲ ಎಂದು ಹೇಳಿದೆ, ಅವರು ನೀವು ಗಂಡಸರೋ ಎಂದು ಎಂದು ಹೇಳಿದರು, ನಾನೂ ಅಲ್ಲ ಎಂದು ಹೇಳಿದೆ. ಅಂದರೆ ಶ್ರೀಮಾನ್ ದೇವರಾಜ ಅರಸ್ ಅವರೂ ಸಹ ಗಂಡಸರಲ್ಲ.

ಶ್ರೀ ಜೆ. ಎಚ್. ಪಾಟೀಲ್.—ತಾವು ಹೇಳುವ ಮಾತನ್ನು ಇಲ್ಲಿ ಹೇಳಿದಿರಿ, ಸರಿ ಹೋಯಿತು, ಮನೆಯಲ್ಲಿ ಏನಾದರೂ ಹೀಗೆ ಹೇಳಿಬಿಟ್ಟೀರಿ?

ಶ್ರೀ ಕೆ. ಎಚ್. ಶ್ರೀನಿವಾಸ್,—ಪತ್ರಿಕೆಗಳವರಿಗೆ ಈ ವಿಷಯವನ್ನು ಈಗಲೇಹೇಳಿಬಿಡಿ.

ಶ್ರೀ ಬಿ. ಬಸವಲಿಂಗಪ್ಪ.—ಇದನ್ನೆಲ್ಲಾ ನಾನು ಏಕೆ ಹೇಳುವುದಕ್ಕೆ ಬಂದೆ ಎಂದರೆ, ಶ್ರೀಮತಿ ಇಂದಿರಾಗಾಂಧಿಯವರ ಫೋಟೋ ಇದ್ದರೆ ಸಾಕು ವೋಟು ಸಿಕ್ಕುತ್ತದೆ. ಅಂದಮೇಲೆ ಜನಗಳನ್ನು ನಿರ್ಲಕ್ಷ್ಯ ಮನೋಭಾವನೆಯಿಂದ ನೋಡಬೇಡಿ ಎನ್ನುವುದನ್ನು ಹೇಳುವುದಕ್ಕೆ ಇದನ್ನೆಲ್ಲಾ ನಾನು ಹೇಳಬೇಕಾಯಿತು, ನಾವೂ ಕೂಡ ಬಡಜನರಿಗೋಸ್ಕರ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ, ಜನ ಇವತ್ತಲ್ಲ ನಾಳೆ, ನಾವು ಮಾಡಿದ್ದೂ ಸರಿ ಎಂದು ತಿಳಿದುಕೊಂಡು ನಮ್ಮ ಮಾತನ್ನು ಕೇಳಿಯೇ ಕೇಳುತ್ತಾರೆನ್ನುವ ನಂಬಿಕೆ ನನಗೆ ಇದೆ, ನಮ್ಮ ಜನರಿಗೆ ಇಂಥ ಒಂದು ಪರಿಜ್ಞಾನ ಉಂಟಾಗುತ್ತದೆಂದು

ನಾನು ತಿಳಿದಿದ್ದೇನೆ. ಮತ್ತೆ ರಾಜ್ಯಪಾಲರ ಭಾಷಣದಲ್ಲಿ ಒಂದೆರಡು ಸ್ತುತ್ಯಾರ್ಹವಾದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಅವುಗಳೆಂದರೆ, ರೈಲ್ವೆ ಮಾರ್ಗಗಳನ್ನು ನಿರ್ಮಾಣ ಮಾಡತಕ್ಕದ್ದು ವಿಜಯ ನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಲಿಕ್ಕೆ ಪ್ರಯತ್ನ ಮಾಡತಕ್ಕದ್ದು. ಇದಕ್ಕೆ ನಾನು ಸರ್ಕಾರದವರಿಗೆ ಖಂಡಿತವಾಗಿಯೂ ಅಭಿನಂದನೆಯನ್ನು ಸಲ್ಲಿಸುತ್ತೇವೆ ಯಾವಾಗ ಅಂದರೆ, ಇದೆಲ್ಲಾ ಸಾಧನೆಯಾದಾಗ ಕಳೆದ ಹತ್ತು ವರ್ಷಗಳಿಂದಲೂ ನಾವು ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಮಾಡಬೇಕು ಎಂದು ಇಲ್ಲಿಯೂ ಹೇಳಿದ್ದೇವೆ, ಹೊರಗಡೆಯೂ ಹೇಳಿದ್ದೇವೆ. ಕೇಂದ್ರ ಸರ್ಕಾರದವರು ಇಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆ ಲುಕ್ಸಾನು ಆಗುತ್ತದೆ ಆದ್ದರಿಂದ ಮಾಡಬಾರದು ಎಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದವರು ಇದರಿಂದ ಲಾಭ ನಷ್ಟ ಆಗುತ್ತದೆ ಎನ್ನುವುದನ್ನು ಯೋಚನೆ ಮಾಡದೆ, ಜನಗಳಿಗೆ ಕೆಲಸ ದೊರೆಯತಕ್ಕದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ಇದಕ್ಕೆ ಆದ್ಯತೆ ಕೊಡಬೇಕು.

There should be projects which will provide employment potential. We are worried about employment of people. Give them food, give them minimum necessities for their livelyhood etc., all that is constitutional obligation. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಅವರು ಕೆಲಸ ಮಾಡಬೇಕು ಮತ್ತು ಇದಕ್ಕೆ ಮಂಜೂರಾತಿ ತರಬೇಕು ಎಂದು ನಾನು ಹೇಳುತ್ತಿದ್ದೇನೆ. ಮಾನ್ಯ ಗುಂಡೂರಾಯರು ಕೇಂದ್ರ ಸರ್ಕಾರದವರ ಹತ್ತಿರ ನೇರವಾಗಿ ಹೋಗಿ ಮಾತನಾಡಿ ಕೆಲಸ ಮಾಡಿದಾಗ ಇದು ಸಾಧ್ಯವಾಗುತ್ತದೆ, ಅವರ ಕೈಯಲ್ಲಿ ಆಗುವುದಿಲ್ಲ ಎಂದು ನಾನು ಹೇಳುತ್ತಿಲ್ಲ.

ಶ್ರೀ ಎಂ ವೀರಪ್ಪ ಮೊಯಿಲಿ.— That is one compliment.

ಶ್ರೀ ಬಿ. ಬಸವಲಿಂಗಪ್ಪ.— ಇದನ್ನು ಅವರು ಮಾಡಿದ ಮೇಲೆ ಅವರಿಗೆ ಶಹಭಾಸ್‌ಗಿರಿಯನ್ನು ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಕರ್ನಾಟಕ ರಾಜ್ಯವನ್ನು ಪ್ರಗತಿದಾಯಕವಾಗಿ ಮಾಡುವುದಕ್ಕೆ ನಮ್ಮ ವಿರೋಧ ಪಕ್ಷದ ನಾಯಕರ ಸಹಕಾರವು ಅಗತ್ಯ.

ಶ್ರೀ ಎಸ್. ಆರ್. ಬೊಮ್ಮಾಯಿ.— ೧೯೭೧ರಲ್ಲಿ ಮಾನ್ಯ ದೇವರಾಜ ಅರಸ್ ಅವರೂ ಸಹ ಇದೇ ಮಾತನ್ನು ಹೇಳಿದರು. ಅವರೂ ಸಹ ಕೇಂದ್ರ ಸರ್ಕಾರಕ್ಕೆ ಇಷ್ಟೇ ಹತ್ತಿರದಲ್ಲಿದ್ದರು. ಅವರನ್ನು ಕರೆದು ಕೊಂಡು ಬಂದು ವಿಜಯನಗರದ ಉಕ್ಕಿನ ಕಾರ್ಖಾನೆಗೆ ಅಸ್ತಿಭಾರ ಹಾಕಿಸಿದರು. ಈ ವಿಷಯ ೧೯೭೧ನೇ ಇಸವಿಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಲಾಗಿದೆ. ಆದ್ದರಿಂದ ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ ಮಾನ್ಯ ಗುಂಡೂರಾಯರು ಈ ಕೆಲಸ ಮಾಡಿದ ಮೇಲೆ ಅವರಿಗೆ ಶಹಭಾಸ್‌ಗಿರಿ ಕೊಡುತ್ತೇನೆಂದು ಅವರು ಹೇಳಿರುವುದನ್ನು ನಾನು ಒಪ್ಪುತ್ತೇನೆ.

ಶ್ರೀ ಬಿ ಬಸವಲಿಂಗಪ್ಪ.— ಯಾವುದೋ ಒಂದು ಊರಿಗೆ ಹೋಗಬೇಕು ಎಂದು ಹೇಳಿ ನಂತರ ಆ ಊರಿಗೆ ಹತ್ತಿರದ ದಾರಿ ಸಿಕ್ಕಲಿಲ್ಲ ಎಂದು ಹೇಳುವುದು ಸರಿಯಲ್ಲ. ನನಗೆ ತಿಳಿದ ಮಟ್ಟಿಗೆ ಇದೂ ಸಹ ನಿಮ್ಮ ಕೈಯಲ್ಲಿ ಆಗುವುದಿಲ್ಲ.

ಆಮೇಲೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ರಾಜ್ಯಾಂಗದಲ್ಲಿಯೇ ಇದು ಅಡಕವಾಗಿದೆ. ಅವುತ್ತಿನಿಂದ ಇವತ್ತಿನವರೆಗೆ ಇದರ ಬಗ್ಗೆ ಹೇಳಿದ್ದೇ ಹೇಳಿದ್ದು, ರಾಜ್ಯಪಾಲರ ಭಾಷಣದಲ್ಲಿ ಸಹ ಪ್ರಸ್ತಾಪ ಮಾಡಿದ್ದಾರೆ. ಆದರೆ ಇದನ್ನು ಜಾರಿಗೆ ಕೊಡುವಾಗ ಶ್ರೀಮಾನ್ ದೇವರಾಜ ಅರಸ್ ಅವರಾಗಲೀ, ಅಥವಾ ಹಿಂದಿನ ಸರ್ಕಾರಗಳಾಗಲೀ, ಅಷ್ಟು ಆಸಕ್ತಿ ವಹಿಸಲಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನೀವು ಶಕ್ತಿವಂತರು ಎಂದು ಹೇಳುವಾಗ ಈ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತನ್ನಿ. ಯಾರು ಯಾರು ಬಡವರು ಇದ್ದಾರೆ,ಗುಡಿಸಲುಗಳಲ್ಲಿ ಜೀವನ ಮಾಡುತ್ತಿದ್ದಾರೆ ಅವರಿಗೆ ಮನೆಗಳನ್ನು ಕಟ್ಟಿಕೊಟ್ಟು, ಕಡ್ಡಾಯ ಶಿಕ್ಷಣವನ್ನು ಕೊಟ್ಟು, ಸರಿಯಾದ ಪೌಷ್ಟಿಕ ಆಹಾರವನ್ನು ಒದಗಿಸಿ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ ಕೇವಲ ನಾಲ್ಕು ಪಂಕ್ತಿಗಳನ್ನು ಬರೆದಿದ್ದಾರೆ. ಹಿಂದಿನ ಸರ್ಕಾರ ಮಾಡಿದ್ದನ್ನೆಲ್ಲಾ ಮುಂದುವರಿಸಿಕೊಂಡು ಹೋಗುತ್ತೇವೆಂದು ಹೇಳಿದ್ದಾರೆ. ಅಂದರೆ ನಿಮ್ಮ ವರ್ಗದವರ ಸಮಸ್ಯೆ

ಗಳನ್ನು ಮುಂದುವರಿಸಿಕೊಂಡು ಹೋಗುವುದು ಎಂದು ತಿಳಿಯೋಣವೇ ? ನಮ್ಮ ರಾಜ್ಯದಲ್ಲಿ ಅನೇಕ ಯೂನಿವರ್ಸಿಟಿಗಳು ಇವೆ, ಅವರುಗಳು ರಿಸರ್ವೇಷನ್ ಪದ್ಧತಿಯನ್ನು ಜಾರಿಗೆ ಕೊಡುತ್ತಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯ ಇದೆ, ಮೈಸೂರು ವಿಶ್ವವಿದ್ಯಾನಿಲಯ ಇದೆ, ಮತ್ತೆ ವ್ಯವಸಾಯ ವಿಶ್ವವಿದ್ಯಾನಿಲಯಕ್ಕೆ ಹಿಂದೆ ನಮ್ಮ ರಂಗನಾಥ್ ಅವರೇ ಮಂತ್ರಿಗಳಾಗಿದ್ದರು, ಅಲ್ಲಿ ನೋಡಿದರೆ ಹರಿಜನರಿಗೆ ಬಡ್ತಿಯನ್ನು ಕೊಡುವುದಿಲ್ಲ. ಹೀಗೆ ಯಾವ ಇಲಾಖೆಗಳಲ್ಲಿಯೂ ಹರಿಜನ ಮತ್ತು ಗಿರಿಜನರಿಗೆ ಬಡ್ತಿ ಕೊಡುತ್ತಿಲ್ಲ ತಾವೇ ಶಕ್ತಿವಂತರೆಂದು ಹೇಳಿಕೊಳ್ಳುತ್ತೀರಿ, ಆದಕಾರಣ ದಯಮಾಡಿ ತಾವು ಇದರ ಕಡೆಗೆ ಗಮನ ಕೊಡಿ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಇವರು ಪ್ರಗತಿ ಹೊಂದಲು ತಾವು ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡು, ಅದನ್ನು ಕಾರ್ಯಗತ ಮಾಡಲು ಪ್ರಯತ್ನ ಮಾಡಿ. ಈ ನಿಮ್ನವರ್ಗದವರ ಸಮಸ್ಯೆಗಳು. ಗುಡ್ಡಗಾಡಿನ ಜನರ ಸಮಸ್ಯೆಗಳು ಒಂದೆರಡು ಅಲ್ಲ, ನೂರಾರು ಸಮಸ್ಯೆಗಳಿವೆ. ತಾವೂ ಸಹ ಹಳ್ಳಿಗಳಿಗೆ ಹೋಗಿ ನೋಡಿದ್ದೀರಿ. ಆದ್ದರಿಂದ ಅವರ ಸಮಸ್ಯೆಗಳನ್ನು ಹೋಗಲಾಡಿಸಲು ಏನೇನು ಯೋಜನೆಗಳನ್ನು ಹಾಕಿಕೊಂಡಿದ್ದೀರಿ, ಅದಕ್ಕೆ ಎಷ್ಟೆಷ್ಟು ಹಣ ಖರ್ಚು ಮಾಡುತ್ತೀರಿ ಎಂಬ ಬಗ್ಗೆ ಇದರಲ್ಲಿ ಏನನ್ನೂ ಹೇಳಿಲ್ಲ. ಇದು ನಿಮಗೆ ಸಲ್ಲುವ ಮಾತೇ ಎಂದು ಕೇಳುತ್ತೇನೆ. ಶೇಕಡಾ ೯೦ರಷ್ಟು ಜನರು ನಿಮಗೆ ಓಟು ಕೊಟ್ಟಿದ್ದಾರೆ. ಆದರೆ ಬುದ್ಧಿವಂತರು ನಿಮಗೆ ಓಟು ಕೊಟ್ಟಿಲ್ಲ. ಈಗ ಬುದ್ಧಿವಂತರೆಲ್ಲಾ ನಮ್ಮ ಕಡೆಗೆ ಬಂದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಈ ಮೊದಲು ತಾವು ಪ್ರಜಾಪ್ರಭುತ್ವದ ಬಗ್ಗೆ ವ್ಯಾಖ್ಯಾನ ಮಾಡಿದಾಗಲೇ ಬುದ್ಧಿವಂತರು ನಿಮ್ಮ ಕಡೆ ಇದ್ದಾರೆಂದು ನಾನು ಆಲೋಚನೆ ಮಾಡಿದ್ದೆ. ಈಗ ಅದನ್ನು ತಾವೇ ಒಪ್ಪಿಕೊಂಡಿರಿ. 'haves' are not with us'.

ಶ್ರೀ ಎಸ್. ಆರ್. ಬೊಮ್ಮಾಯಿ.— Haves and have-nots ಎಂದು ಹೇಳುವುದು ಬೇರೆ. ಮಾನ್ಯ ಬಸವಲಿಂಗಪ್ಪನವರು ಹೇಳಿದ್ದು Those who have reasoning and understanding power and those who have no reasoning and understanding power, ಇದು ಬೇರೆ.

ಶ್ರೀ ಬಿ. ಬಸವಲಿಂಗಪ್ಪ.— ಈಗ ಬಡವರಲ್ಲಿಯೂ ಬುದ್ಧಿವಂತರು ಬಹಳ ಮಂದಿ ಇದ್ದಾರೆ. ಈ ಗುಡ್ಡಗಾಡು ಜನರು ಮತ್ತು ನಿಮ್ನವರ್ಗದ ಜನರು ಏನಿದ್ದಾರೆ, ಇವರೆಲ್ಲರೂ ಮುಗ್ಧಭಾವನೆಯಿಂದ ಸಾಲಾಗಿ ನಿಂತುಕೊಂಡು ತಮಗೆ ಏನು ಓಟು ಕೊಟ್ಟಿದ್ದಾರೆ, ಅವರ ಅಭಿವೃದ್ಧಿ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳುತ್ತಿರುವುದು, ಮೊನ್ನೆ ತಾನೇ ಈ ಸಭೆಯಲ್ಲಿ ರಾಜ್ಯಾಂಗ ತಿದ್ದುಪಡಿ ಮಸೂದೆ ಬಂದಾಗ ಅದಕ್ಕೆ ಎಲ್ಲ ಮಾನ್ಯ ಸದಸ್ಯರು ತಮ್ಮ ಒಕ್ಕೊರಲಿನಿಂದ ಒಪ್ಪಿಗೆ ಕೊಟ್ಟರು. ಆ ಸಮಯದಲ್ಲಿ ಮಾನ್ಯ ಸದಸ್ಯರು ನಿಮ್ನವರ್ಗದವರ ಏಳಿಗೆಗಾಗಿ ಯೋಜನೆಗಳನ್ನು ಹಾಕಿಕೊಳ್ಳಬೇಕು ಮತ್ತು ಅದನ್ನು ಕಾರ್ಯಗತ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಆದರೆ ತಾವು ಇದರ ಬಗ್ಗೆ ಇಲ್ಲಿ ಏನನ್ನೂ ಪ್ರಸ್ತಾಪ ಮಾಡಿಲ್ಲ. ತಾವು ಇವರಿಂದ ಓಟುಗಳನ್ನು ತೆಗೆದುಕೊಳ್ಳಿ, ಆದರೆ ಏನನ್ನೂ ಮಾಡಬೇಡಿ. ಮಾಡುತ್ತೇವೆ, ಮಾಡುತ್ತೇವೆ ಎಂದು ತಾವು ಇವರಿಗೆ ಆಶೀರ್ವಾದ ಮಾಡಿಕೊಂಡೇ ಇರಿ ಒಂದು ದಿವಸ ಇವರೆಲ್ಲರೂ ನಿಮಗೆ ಕೆಲಸ ಕೊಡುತ್ತಾರೆ. ಯಾವ ರೀತಿ ಕೊಡುತ್ತಾರೆಂದರೆ, ಈಗ ನಮಗೆ ಯಾವ ರೀತಿ ಕೊಟ್ಟರೋ ಅದೇ ರೀತಿ ನಿಮಗೂ ಕೊಡುತ್ತಾರೆ, ಹಿಂದುಳಿದವರ ಬಗ್ಗೆ ನಿಮಗೆ ಏತಕ್ಕೆ ಇಷ್ಟೊಂದು ತಾತ್ಸಾರ ?

ಶ್ರೀ ಎ. ಲಕ್ಷ್ಮೀಸಾಗರ್.—ಜನರು ಇವರಿಗೂ ಕೈಕೊಡುತ್ತಾರೆಂಬ ನಂಬಿಕೆ ನಿಮಗಿದೆಯೋ ?

ಶ್ರೀ ಬಿ. ಬಸವಲಿಂಗಪ್ಪ.— ತಾವು ನನ್ನನ್ನು ಏತಕ್ಕೆ ಕೆಣಕುತ್ತೀರಿ ? ನಮ್ಮಲ್ಲಿ ಶೇಕಡಾ ೯೦ರಷ್ಟು ಜನರು ಪುರಾಣ ಕಥೆಗಳನ್ನು ಓದಿಕೊಂಡು ಇಲ್ಲವೇ ಕೇಳಿಕೊಂಡು. ಅದರಲ್ಲಿ ಹೇಳಿರುವುದನ್ನೆಲ್ಲಾ ನಿಜವೆಂದು ನಂಬಿಕೊಂಡಿಲ್ಲವೇ ? ಈ ದಡ್ಡ ಜನರು ಬುದ್ಧಿವಂತರಾದರೆ, ಪ್ರಜ್ಞಾವಂತರಾದರೆ ಈ ದೇಶದಲ್ಲಿ ಕೆಲವೇ ಜನ ಬುದ್ಧಿವಂತರು ಏನು ಅಧಿಕಾರ ನಡೆಸುತ್ತಿದ್ದಾರೆ. ಅವರು ಅಧಿಕಾರದಲ್ಲಿ ಮುಂದುವರೆಯಲು ಬಿಡುವುದಿಲ್ಲ. ನಮ್ಮಲ್ಲಿ ಶೇಕಡಾ ೮೦ರಷ್ಟು ಜನರು ಏನು ಬಡವರಿದ್ದಾರೆ, ನಿರ್ಗತಿಕರಿದ್ದಾರೆ, ಅನಕ್ಷರಸ್ಥರಿದ್ದಾರೆ ಆಸ್ತಿಹೀನರಿದ್ದಾರೆ, ಒಂದು ಹೊತ್ತು ಊಟಕ್ಕೆ ಇದ್ದರೆ ಇನ್ನೊಂದು ಹೊತ್ತಿಗೆ ಊಟ ಇಲ್ಲದವರು ಏನಿದ್ದಾರೆ, ಮೈ ಮುಚ್ಚಲು ಬೇಕಾದಂತ ಬಟ್ಟೆ ಇಲ್ಲದವರು ಏನಿದ್ದಾರೆ. ಇಂತಹ ಜನರು ನೇರವಾಗಿ ದಾಸ್ಯ ಭಾವನೆಯಿಂದ ಕೆಲವೇ ಜನ ಬುದ್ಧಿವಂತ ಜನರೇನಿದ್ದಾರೆ, ಅವರನ್ನು ಹಿಂಬಾಲಿಸಿದ್ದಾರೆ. ಅವರನ್ನು

ಅಧಿಕಾರದಲ್ಲಿಟ್ಟು ಬಹಳ ಸಂತೋಷಪಡುತ್ತಿದ್ದಾರೆ. ನಲಿದಾಡುತ್ತಿದ್ದಾರೆ. ಅವರನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಕುಣಿದಾಡಿದ್ದಾರೆ. ಇವರಿಗೇನಾದರೂ ಪ್ರಜ್ಞೆ ಇದ್ದಿದ್ದರೆ, ವಿಚಾರ ಮಾಡತಕ್ಕಂಥ ಭಾವನೆ ಇದ್ದಿದ್ದರೆ ಯಾವತ್ತೋ ಅವರು ಹೊತ ಪಲ್ಲಕ್ಕಿಯನ್ನು ಚರಂಡಿಗೆ ಎಸೆಯುತ್ತಿದ್ದರು. ಈ ಕೆಲಸವನ್ನು ದೆಹಲಿಯ ನಾಯಕತ್ವದಿಂದಲೇ ಮೊದಲು ಪ್ರಾರಂಭ ಮಾಡುತ್ತಿದ್ದರು ನನಗೆ ಅಧಿಕಾರ ಸಿಗಬಹುದು ಅಥವಾ ಸಿಗದಿರಬಹುದು ಅದು ಬೇರೆ ವಿಚಾರ, ಆದರೆ ಈಗ ಅಧಿಕಾರದಲ್ಲಿರುವವರು ಬಡ ಜನರ ಮುಖಂಡರಾಗಿರುವವರು ಈ ಜನರನ್ನು ಪ್ರಜ್ಞಾವಂತರನ್ನಾಗಿ ಮಾಡಬೇಕು, ಅವರಿಗೆ ಒಳ್ಳೆಯ ಮಾರ್ಗದರ್ಶನವನ್ನು ನೀಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಈ ಹಿಂದುಳಿದವರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಒಂದು ಚಕಾರ ಶಬ್ದವೂ ಇಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇವರ ವಿಚಾರದಲ್ಲಿ ಏನೇನು ಮಾಡಬೇಕೆಂದಿದ್ದಾರೆಂಬ ಬಗ್ಗೆ ಇಲ್ಲಿ ಏನನ್ನೂ ಹೇಳಿಲ್ಲ. ಈ ಹಿಂದಿನ ಸರ್ಕಾರ ಅವರ ಅಭಿವೃದ್ಧಿಗಾಗಿ ಅನೇಕ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿತ್ತು. ಅದನ್ನೆಲ್ಲಾ ಇವರು ಮುಂದುವರೆಸಿಕೊಂಡು ಬರುತ್ತೇವೆಂದು ಹೇಳಿದ್ದಾರೆಯೇ ಹೊರತು ಮುಂದೆ ಏನು ಮಾಡಬೇಕೆಂದಿದ್ದಾರೆಂಬ ಬಗ್ಗೆ ಇಲ್ಲಿ ಒಂದು ವಾಕ್ಯವನ್ನೂ ಸಹ ಹೇಳಿಲ್ಲ. ಇದಕ್ಕೆ ಕಾರಣವೇನು ? ಹಾವನೂರ್ ಕಮಿಷನ್ ವರದಿಯನ್ನು ನಾವು ಜಾರಿಗೆ ಕೊಟ್ಟಮೇಲೆ ಟೀಕೆ ಟಿಪ್ಪಣಿಗಳು ಬೇಕಾದಷ್ಟು ಬಂದವು. ಈ ವರದಿ ಮೇಲೆ ಶ್ರೀಮಾನ್ ಖಂಡ್ರೆ ಅವರು ಬಹಳವಾಗಿ ಹೇಳುತ್ತಿದ್ದರು. ಜಾತಿ ಮತ್ತು ವರ್ಗದ ಮೇಲೆ ಅವರು ವ್ಯಾಖ್ಯಾನ ಮಾಡುತ್ತಿದ್ದರು. ಅವರ ವಾದ ಕೇಳಿ ನನಗೆ ವ್ಯಥೆಯಾಯಿತು. ಅವರು ಇದರ ಬಗ್ಗೆ ಸರಿಯಾಗಿ ಅರ್ಥ ಮಾಡಿಕೊಳ್ಳದೆ ಈ ವರದಿಯ ಹಾಳೆಗಳನ್ನು ಹರಿಯುತ್ತೇನೆಂದು ಅವರು ಹೇಳಿದಾಗ ನನಗೆ ನಿಜಕ್ಕೂ ಪಶ್ಚಾತ್ತಾಪವಾಯಿತು. ನಮ್ಮ ಹಿಂದೂ ಸಮಾಜದಲ್ಲಿ ಹಲವಾರು ಜಾತಿಗಳಿವೆ. ಈ ಜಾತಿಗಳ ಜನರು ತಮಗೆ ಹೊಂದಿಕೊಂಡು ಬಂದಂಥ ಕಸುಬುಗಳನ್ನು ಮೊದಲಿನಿಂದಲೂ ಮುಂದುವರಿಸಿಕೊಂಡು ಬಂದಿದ್ದಾರೆ. ಒಂದು ಜಾತಿಯವರು ಮಾಡುತ್ತಿದ್ದ ಕಸುಬನ್ನು ಇನ್ನೊಂದು ಜಾತಿಯವರು ಮಾಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ, ನಮ್ಮ ಹಿಂದೂ ಸಮಾಜದಲ್ಲಿ ಯಾವ ಯಾವ ಜಾತಿಗಳಿದ್ದವೋ, ಆ ಜಾತಿಗಳೆಲ್ಲಾ ವರ್ಗಗಳಾಗಿ ಪರಿಣಮಿಸಿತು. ಈ ದೃಷ್ಟಿಯಿಂದ ನಾವು ನೋಡುವುದಾದರೆ. ಈ ಜಾತಿಗಳಿಗೂ ಮತ್ತು ವರ್ಗಗಳಿಗೂ ಯಾವುದೇ ರೀತಿಯ ವ್ಯತ್ಯಾಸಗಳಿಲ್ಲ, ರಷ್ಯಾ, ಅಮೆರಿಕಾ ಹಾಗೂ ಚೈನಾ ದೇಶಗಳಲ್ಲಿರತಕ್ಕಂಥ ಸಾಹಿತ್ಯವನ್ನು ಓದಿದವರು ಅಲ್ಲಿರುವ ರೀತಿಯಲ್ಲಿಯೇ ನಮ್ಮ ದೇಶದ ಸಮಾಜದಲ್ಲಿಯೂ ವರ್ಗಗಳು ಇರಬಾರದು. ನಮ್ಮ ಸಮಾಜ ವರ್ಗರಹಿತವಾಗಿರಬೇಕು, ಅದಕ್ಕಾಗಿ ಹೋರಾಟ ಮಾಡಬೇಕೆಂದು ಹೇಳುತ್ತಾರೆ. ಈ ರೀತಿ ವಾದ ಮಾಡುವವರಿಗೆ ನಮ್ಮ ಹಿಂದೂ ಸಮಾಜದ ಬಗ್ಗೆ ಸಾಕಷ್ಟು ಅರಿವು ಇಲ್ಲವೆಂದು ಕಾಣುತ್ತದೆ. ಏಕೆಂದರೆ, ಬಸವೇಶ್ವರರ ಕಾಲದಲ್ಲಿಯೂ ನಮ್ಮ ದೇಶದಲ್ಲಿ ಹಲವಾರು ಜಾತಿಗಳಿದ್ದವು. ಆಗ ಅವರು ಪ್ರತಿಯೊಂದು ಜಾತಿಗೂ ಮಾನ್ಯತೆಕೊಟ್ಟು ಎಲ್ಲರನ್ನೂ ಸರಿಸಮಾನರೆಂದು ಪರಿಗಣಿಸಿದ್ದರು. ಆ ಸಮಯದಲ್ಲಿಯೂ ಸಹ ಯಾವ ಜಾತಿಯವರನ್ನು ಕನಿಷ್ಟವಾಗಿ ಕಾಣಲಾಗುತ್ತಿತ್ತೋ ಅಂತಹವರ ಕಾಲಿಗೆ ಬಿದ್ದು ನಮಸ್ಕಾರ ಮಾಡಿ, ಅವರೂ ಸಹ ಬೇರೆಯವರಂತೆ ಸರಿಸಮಾನರೆಂದು ಬಸವಣ್ಣನವರು ಪರಿಗಣಿಸಿದರು. ಬೇರೆ ಜನರಿಗೆ ಅವರು ಮೇಲ್ಪಂಕ್ತಿ ಹಾಕಿಕೊಟ್ಟರು. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ರಷ್ಯಾದೇಶದ ಕಾರ್ಲಮಾರ್ಕ್ಸ್ ತರಹ ಬಸವಣ್ಣನವರು ಈ ದೇಶದಲ್ಲಿ ಸೇವೆ ಮಾಡಿದರು. ಕನ್ನಡಿಗರಾದಂಥ ಬಸವಣ್ಣನವರು ಈ ಮೊದಲೇ ಬೇರೆಯವರಿಗೆ ಏನು ಮೇಲ್ಪಂಕ್ತಿ ಹಾಕಿಕೊಟ್ಟರೋ, ಅದನ್ನೇ ನೀವು ಮುಂದುವರಿಸಿಕೊಂಡು ಬನ್ನಿ. ಈ ಜಾತಿಗಳನ್ನು ಮೊದಲು ನಿರ್ಮೂಲ ಮಾಡುವುದಕ್ಕೆ ಪ್ರಯತ್ನ ಮಾಡಿ. ಆಗ ನಿಮಗೆ ಒಂದು ಗುರಿ ಸಿಗುತ್ತದೆ. ಇಲ್ಲದಿದ್ದರೆ. ನನ್ನ ಜಾತಿ ನಿನ್ನ ಜಾತಿ ಅನ್ನತಕ್ಕಂಥ ವ್ಯತ್ಯಾಸಗಳಿಂದ ಒಳ್ಳೆಯ ಒಂದು ಸಮಾಜವನ್ನು ಕಟ್ಟುವುದಕ್ಕೆ ಯಾರಿಂದಲೂ ಸಾಧ್ಯವಾಗುವುದಿಲ್ಲ. ಹಲವಾರು ಹೈಕೋರ್ಟುಗಳು ಮತ್ತು ಸುಪ್ರೀಂ ಕೋರ್ಟನವರು ಕೊಟ್ಟಂತಹ ತೀರ್ಪುಗಳನ್ನು ಆಧಾರವಾಗಿಟ್ಟುಕೊಂಡು ಹಾವನೂರ್ ಕಮಿಷನ್ ಅವರು ಒಂದು ವರದಿಯನ್ನು ತಯಾರು ಮಾಡಿದ್ದಾರೆ.

೫-೦೦ ಪಿ. ಎಂ.

ಇದನ್ನು ಕೆಲವರು ತಪ್ಪಾಗಿ ತಿಳಿದುಕೊಂಡು ವರದಿಯನ್ನೇ ಟೀಕೆ ಮಾಡುವುದು ಸರಿಯಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಚುನಾವಣೆ ಕಾಲದಲ್ಲಿ ಈ ವರದಿಯಿಂದ ನಮ್ಮ ಜಾತಿಗೆ ಅನ್ಯಾಯವಾಗಿದೆ, ಶ್ರೀಮಾನ್ ದೇವರಾಜ ಅರಸ್ ಅವರು ಕೆಲವು ಜಾತಿಗಳಿಗೆ ಮನ್ನಣೆ ಕೊಡದೆ ಇದ್ದುದರಿಂದ ದೇವರಾಜ ಅರಸ್ ಅವರ ಸರ್ಕಾರದ ವಿರುದ್ಧವಾಗಿ ಕೆಲಸ ಮಾಡುತ್ತೇವೆ ಎನ್ನುವಂಥಾದ್ದು ಒಂದು ಕಡೆ.

ಈ ವರದಿಯನ್ನು ನಾವೆಲ್ಲಾ ಓದಿದ್ದೇವೆ, ಕೇಳಿದ್ದೇವೆ. ಅವರು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ ; ಆದರೆ ಈ ಬಗ್ಗೆ ಅವರ ವರ್ತನೆ ಸರಿಯಲ್ಲ. ಬೇರೆ ಜಾತಿಯನ್ನು ತನ್ನ ಜಾತಿ ಎಂದು ಹೇಳಿಬಿಟ್ಟು, ಮತ್ತೆ ಸಮಾಜದಲ್ಲಿ ದೊಡ್ಡದು, ಸಣ್ಣದು ಎಂದು ತಿಳಿದುಕೊಂಡು ಹೋರಾಟ ಮಾಡುವುದು ಸರಿಯಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಅಂಥಾ ಜಾತಿ. ಇಂಥಾ ಜಾತಿ ಎಂದು ಹೇಳಿ ಜಾತಿ ಜಾತಿಗಳ ನಡುವೆ ವೈಮನಸ್ಯ ಉಂಟುಮಾಡುವ ಒಂದು ಪ್ರಯತ್ನ ಏನಿದೆ ಇದಕ್ಕೆ ಯಾರೂ ಮನ್ನಣೆ ಕೊಡಬಾರದು ;

ಇನ್ನು ಭೂ ಸುಧಾರಣೆ ಬಗ್ಗೆ ನಾನು ಹಲವಾರು ತಿದ್ದುಪಡಿಗಳನ್ನು ತಂದು ಅದನ್ನು ಯಶಸ್ವಿಯಾಗಿ ಜಾರಿಗೆ ಕೊಡಬೇಕು ಎಂದು ನಿಷ್ಠೆಯಿಂದ ಪ್ರಯತ್ನ ಮಾಡಿದ್ದೆ. ಮೊನ್ನೆ ಒಂದು ಸಣ್ಣ ತಿದ್ದುಪಡಿಯನ್ನು ತಂದಿರಿ, ಇನ್ನೂ ಹಲವಾರು ತಿದ್ದುಪಡಿಗಳಿವೆ, ಅವೆಲ್ಲವನ್ನೂ ದಯಮಾಡಿ ಸದನದ ಮುಂದೆ ತರಬೇಕು ಎಂದು ಕೇಳಿಕೊಳ್ಳುತ್ತೇನೆ. ಅದರಲ್ಲಿ ಯಾರು ಗೇಣಿದಾರರು ಇದ್ದಾರೆ ಅಂದರೆ ಆ ಸಾಹುಕಾರ ಗೇಣಿದಾರರು ಯಾರಿದ್ದಾರೆ, ಅವರಿಗೆ ಜಾಸ್ತಿ ಜಮೀನು ಇರಬಾರದು ಎಂದು ತಿದ್ದುಪಡಿಯಲ್ಲಿ ಸೂಚನೆ ಮಾಡಿದ್ದೇನೆ. ೪೦ ಎಕರೆ ಜಮೀನು ಇರತಕ್ಕವನಿಗೆ ಇನ್ನೊಂದು ೧೦ ಎಕರೆ ಕೊಡಬಹುದು ಎಂದು ಈಗಿರತಕ್ಕಂಥ ಕಾನೂನಿನಲ್ಲಿದೆ. ಇದರಿಂದ ಕೆಲವರನ್ನು ಮತ್ತೆ ಭೂ ಮಾಲಿಕರನ್ನಾಗಿ ಮಾಡಿದಂತೆ ಆಗುತ್ತದೆ. ಆದಕಾರಣ ಇದರ ಕಡೆ ಗಮನ ಕೊಟ್ಟು, ಆ ಎಲ್ಲಾ ತಿದ್ದುಪಡಿಗಳನ್ನು ಸಭೆಯ ಮುಂದೆ ತೆಗೆದುಕೊಂಡು ಬನ್ನಿ. ಇನ್ನೊಂದು ವಿಷಯ ಏನೆಂದರೆ, ಡಿಕ್ಲರೇಷನ್ ಮಾಡುವಾಗ ಭೂ ಮಾಲೀಕರು ಸುಳ್ಳು ಡಿಕ್ಲರೇಷನ್ ಮಾಡಿದ್ದಾರೆ, ತಪ್ಪು ಡಿಕ್ಲರೇಷನ್ ಮಾಡಿದ್ದಾರೆ. ಆದ್ದರಿಂದ ಇದೆಲ್ಲವನ್ನೂ ಕಿತ್ತುಹಾಕಿ ಪುನಃ ಡಿಕ್ಲರೇಷನ್ ಹೊಸದಾಗಿ ಕೊಡಬೇಕು ಎಂದು ಆದೇಶ ಕೊಡಿ. ದಯಮಾಡಿ ಇದನ್ನು ಕಾರ್ಯಗತ ಮಾಡಿ ; ಮಾಡದೇ ಹೋದರೆ ಭೂ ಮಾಲೀಕರು ಹಾಗೇ ಇರುತ್ತಾರೆ. ಉದಾಹರಣೆಗೆ ಹೇಳುವುದಾದರೆ ರಾಯಚೂರಿನಲ್ಲಿ ಒಬ್ಬ ದೊಡ್ಡ ಭೂ ಮಾಲೀಕರಿದ್ದಾರೆ. ಅವರ ಹೆಸರಿನಲ್ಲಿ, ಗಂಡನ ಹೆಸರಿನಲ್ಲಿ, ಮಕ್ಕಳ ಹೆಸರಿನಲ್ಲಿ, ಸೊಸೆಯಂದಿರ ಹೆಸರಿನಲ್ಲಿ, ಆಳುಗಳ ಹೆಸರಿನಲ್ಲಿ ಸಾವಿರಾರು ಎಕರೆ ಜಮೀನನ್ನು ಇಟ್ಟುಕೊಂಡಿದ್ದಾರೆ. ನಾನು ಅದನ್ನು ಸರಿ ಮಾಡಲಿಕ್ಕೆ ಪ್ರಯತ್ನ ಮಾಡಿದೆ. ಆಗ ಅವರು ನನ್ನ ವಿರುದ್ಧವಾಗಿ ಅಲ್ಲಿ ಇಲ್ಲಿ ಮಾತನಾಡಿದ್ದು ಉಂಟು. ಅವರೆಲ್ಲರೂ ನಿಮ್ಮ ಪಾರ್ಟಿಗೆ ಬಂದು ಸೇರುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ವಾಮಿ, ನಾನು ಮಧ್ಯೆ ಪ್ರವೇಶ ಮಾಡಬಾರದು ಎಂದು ಇದ್ದೆ. ಆದರೆ ಅವರು, ಜನರಲ್ಲಾಗಿ ಹೇಳುವುದು ಬಿಟ್ಟು ಸಭೆಯಲ್ಲಿ ಇಲ್ಲದೇ ಇರತಕ್ಕಂಥ ವ್ಯಕ್ತಿಗಳ ಬಗ್ಗೆ ಪ್ರಸ್ತಾಪ ಮಾಡಿ, ಅವರು ನಮ್ಮ ಪಾರ್ಟಿಗೆ ಬಂದು ಸೇರಿರಬಹುದೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ ಮೊನ್ನೆಯ ತನಕ ಮಾನ್ಯ ಸದಸ್ಯರು ರೆವಿನ್ಯೂ ಸಚಿವರಾಗಿದ್ದರು. ಭೂ ಸುಧಾರಣಾ ಮಸೂದೆಯನ್ನು ಜಾರಿಗೆ ತರತಕ್ಕಂಥ ಕಾಲದಲ್ಲಿ ಒಂದು ಕಡೆ ಪ್ರಬಲವಾದಂಥ ಜಮೀನುದಾರರು ಗಂಡನ ಹೆಸರಿನಲ್ಲಿ, ಮಕ್ಕಳ ಹೆಸರಿನಲ್ಲಿ ಸಾವಿರಾರು ಎಕರೆ ಜಮೀನು ಇಟ್ಟುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇವರ ಬಗ್ಗೆ ಮಾಜಿ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆ. ಈ ಪ್ರಬಲವಾದಂಥ ಶಕ್ತಿಗಳನ್ನು ನೋಡಿ ಹೆದರಿ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲವೋ, ಅಥವಾ ಯಾವುದಾದರೂ ಬೇರೆ ರಾಜಕೀಯ ಕಾರಣದಿಂದ ಕ್ರಮ ತೆಗೆದುಕೊಳ್ಳಲಿಲ್ಲವೋ ಮತ್ತು ಅವರ ಹೆಸರನ್ನು ಇಲ್ಲಿ ಹೇಳಲೂ ಕೂಡ ಏಕೆ ಅನುಮಾನ ಪಡುತ್ತಿದ್ದಾರೊ ಗೊತ್ತಿಲ್ಲ. ಮಾನ್ಯ ಸದಸ್ಯರು ಆಪಾದನೆ ಮಾಡುವಾಗ ಅದಕ್ಕೆ ಆಧಾರ ಇದ್ದು ಮಾಡಿದರೆ ಸರಿಯಾದ ವಿಚಾರಣೆ ಮಾಡಬಹುದು. ಮತ್ತೆ ಮುಖ್ಯ ಮಂತ್ರಿಗಳು ಹಾವನೂರ್ ವರದಿ ಓದಿದ್ದಾರೋ ಇಲ್ಲವೋ ಎಂದು ಹೇಳಿದರು. ನಮ್ಮ ಪಕ್ಷದ ನಾಯಕರು ಜವಾಬ್ದಾರಿ ಸ್ಥಾನದಲ್ಲಿರತಕ್ಕವರು, ತಾವೂ ಓದದೆ ಕಾರ್ಯಕ್ರಮ ಮಾಡಿದ್ದೀರಾ ? ಅಷ್ಟು ಸರಳವಾಗಿ ಒಂದು ಗಂಭೀರವಾದಂಥ ಅಧಿಕಾರ ಸ್ಥಾನದಲ್ಲಿರುವಂಥ, ಜವಾಬ್ದಾರಿ ಸ್ಥಾನದಲ್ಲಿರುವಂಥ ವ್ಯಕ್ತಿಗಳ ಬಗ್ಗೆ ಬಹಳ ಸದರವಾಗಿ ಮಾತನಾಡುವುದು ಅವರಿಗೆ ತಕ್ಕುದಲ್ಲ ಎಂದು ನಾನು ಈ ಸಭೆಯ ಮುಂದೆ ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವೀರಪ್ಪ ಮೊಯ್ಲಿಯವರು ಹೇಳಿದ್ದು ಬಹಳ ಸಂತೋಷ. ಭೂ ಸುಧಾರಣೆಯ ಕಾನೂನಿನ ಪ್ರಕಾರ ಕೆಲವರು ಸೆಕ್ಷನ್ ೬೬ರ ಕೆಳಗೆ ಡಿಕ್ಲರೇಷನ್ 'ಕೊಟ್ಟಿದ್ದಾರೆ. ಕೆಲವರು ಸಾಹುಕಾರರು ೧೫ ಸಾವಿರ ಎಕರೆ ಜಮೀನು ಇಟ್ಟುಕೊಂಡಿದ್ದಾರೆ ; ಬೇರೆಯವರ ಹೆಸರಿನಲ್ಲಿ ಜಮೀನು ಇಟ್ಟಿದ್ದಾರೆ, ಅದೆಲ್ಲವನ್ನೂ ಉಳಿಸಿಕೊಂಡು ಬಂದಿತ್ತಾರೆ. ಅದನ್ನೆಲ್ಲಾ ವಜಾ ಮಾಡಿ ಎಂದು ಹುಕುಂ ಮಾಡಿದ್ದೇನೆ. ಪ್ರಭಾವಕ್ಕೆ ಒಳಗಾಗಿ ನಾನು ಮಾಡಿದ ಕೆಲಸ ಏನಾದರು ಇದ್ದರೆ ಅದನ್ನು ಸ್ಥಗಿತಗೊಳಿಸಿರಿ ಸ್ವಾಮಿ. ಅವರು ರಾಯಚೂರಿನಲ್ಲಿರಲಿ ಅಥವಾ ಬಿಜಾಪುರದಲ್ಲಿರಲಿ. ಈ ಡಿಸ್ಟ್ರಿಬ್ಯೂಷನ್

ಆಫ್ ಸರ್‌ಪ್ಲಸ್ ಲ್ಯಾಂಡನ್ನು ಯಾರ್‍ಯಾರು ಪ್ರಭಾವಶಾಲಿಗಳಿರುತ್ತಾರೆ ಅವರಿಗೆ ಕೊಡತಕ್ಕ ಕೆಲಸ ಏನಿದೆ ಅದನ್ನು ರದ್ದು ಮಾಡಿ ನಿರ್ಗತಿಕರಿಗೆ ಕೊಡಬೇಕು ಎಂದು ಮಾಡಿದ್ದೆ, ಅದನ್ನು ತಾವು ಮುಂದುವರಿಸಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಟ್ರಿಬ್ಯುನಲ್ಸ್‌ಗೆ ಸದಸ್ಯರನ್ನು ನೇಮಕ ಮಾಡತಕ್ಕಂಥಾದ್ದರ ಬಗ್ಗೆ ಕೆಲವು ನಾವು ಇಲ್ಲಿ ಉಳಿಯಬೇಕಲ್ಲ, ಅದಕ್ಕೆ ಟ್ರಿಬ್ಯುನಲ್ಸ್‌ಗೆ ಯಾರು ಯಾರನ್ನು ಮೆಂಬರ್ಸ್ ಎಂದು ನೇಮಕ ಮಾಡಬೇಕೋ ಅವರನ್ನು ಮಾಡಿದ್ದು ಉಂಟು ಈ ಸಭೆಯಲ್ಲಿ ಮಾನ್ಯ ಬೊಮ್ಮಾಯಿಯವರು ಮತ್ತು ಇತರ ಸ್ನೇಹಿತರೆಲ್ಲಾ ಇಂತಹ ಕೆಲವು ಸದಸ್ಯರು ಲಂಚ ತೆಗೆದುಕೊಳ್ಳುತ್ತಾರೆ, ಅವ್ಯವಹಾರಕ್ಕೆ ಕೈ ಹಾಕಿದ್ದಾರೆ ಎಂದು ಆಪಾದನೆ ಮಾಡಿದ್ದರು. ನಾನು ಸಮರ್ಥನೆ ಮಾಡಿಕೊಳ್ಳಬೇಕು ಎಂದು ಇಲ್ಲ ಎಂದು ಹೇಳಿದ್ದು ಉಂಟು ಸ್ವಾಮಿ.

ಶ್ರೀ ಎ. ಲಕ್ಷ್ಮೀಸಾಗರ್.—ಈಗಲಾದರೂ ನಿಜ ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಸಮರ್ಥನೆ ಮಾಡಿಕೊಳ್ಳುವುದಕ್ಕೋಸ್ಕರ ಇಲ್ಲ ಎಂದು ಹೇಳಿದ್ದುಂಟು ಈಗ ಅವರನ್ನೇ ಮತ್ತೆ ಹಾಕಿದರೆ ಪುನಃ ಅವರು ಅದೇ ಕೆಲಸ ಮಾಡಬಹುದು. ಆದ್ದರಿಂದ ನಿರ್ದಾಕ್ಷಿಣ್ಯವಾಗಿ ಯಾರ್‍ಯಾರು ಸತ್ಯವಂತರು ಇದ್ದಾರೋ ಇಲ್ಲವೋ ಗೊತ್ತಿಲ್ಲ, ತಾವು ಹುಡುಕಾಡಿ. ಈಗ ನಿಮ್ಮ ಕೈಗೆ ಸಿಕ್ಕಿರುವವರು ಯಾರಿದ್ದಾರೆ ಅವರು ಯುವಕರಿದ್ದಾರೆ, ಜಿಂದಾಬಾದ್, ಜಿಂದಾಬಾದ್ ಎಂದು ಹೇಳತಕ್ಕವರ ಪೈಕಿ ಸತ್ಯವಂತರು ಯಾರಿದ್ದಾರೆ ಎಂದು ಪರೀಕ್ಷೆ ಮಾಡಿ ಹಾಕಲಿಕ್ಕೆ ಪ್ರಯತ್ನ ಮಾಡಿ. ಈ ಜಮೀನು ಮಂಜೂರಾತಿಯ ಬಗ್ಗೆ ಮಾನ್ಯ ಬಂಗಾರಪ್ಪನವರು ಒಳ್ಳೆಯ ನಿಲುವನ್ನು ತೆಗೆದುಕೊಂಡಿದ್ದಾರೆ ಅದಕ್ಕಾಗಿ ನಾನು ಅವರನ್ನು ಅಭಿನಂದನೆ ಮಾಡಬೇಕು. ನಾನು ರೆವಿನ್ಯೂ ಮಂತ್ರಿಯಾಗಿದ್ದಾಗ ಏನೊಂದು ಕೆಲಸ ಕಾರ್ಯಗಳನ್ನು ಮಾಡಬೇಕು ಎಂದು ಮಾಡಿದ್ದೆ, ಆ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ, ಅದನ್ನು ತೀವ್ರಗತಿಯಿಂದ ಸಾಧನೆ ಮಾಡಬೇಕು ಎಂದು ಪ್ರಯತ್ನ ಮಾಡಿದ್ದಾರೆ, ಆದ್ದರಿಂದ ಅವರನ್ನು ಈ ಸದನದಲ್ಲಿ ಅಭಿನಂದನೆ ಮಾಡಬೇಕು.

ಇನ್ನು ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗಿನ ಇಂಡಸ್ಟ್ರಿಯಲ್ ಪಾಲಿಸಿ ಏನಿದೆ, ಅದರಲ್ಲಿ ನಾವು ತಪ್ಪು ಮಾಡಿದ್ದೇವೆ. ಹಿಂದೇನೂ ಕೂಡ ತಪ್ಪು ಮಾಡಿದ್ದಾರೆ. ಡಿಸ್ಪೆರ್ಸಲ್ ಆಫ್ ಇಂಡಸ್ಟ್ರೀಸ್ ಎಂದು ಹೇಳಿ ೧೫–೨೦ ವರ್ಷಗಳಿಂದ ಕೇಂದ್ರ ಸರ್ಕಾರದವರು ನಿರ್ಣಯ ತೆಗೆದುಕೊಂಡು ಬಿಟ್ಟು ಕೆಲಸ ಮಾಡುತ್ತಿದ್ದರು. ಈ ಬಗ್ಗೆ ನಿರ್ಣಯ ತೆಗೆದುಕೊಂಡು ಆದೇಶ ಕೊಟ್ಟರು. ತಾಲ್ಲೂಕು ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದರೆ ನಿರ್ಗತಿಕರಿಗೆ ಕೆಲಸ ಸಿಗುತ್ತದೆ, ಅವರ ಆರ್ಥಿಕ ಪರಿಸ್ಥಿತಿ ಸುಧಾರಣೆಗೊಳ್ಳುತ್ತದೆ. ಈ ಕಡೆ ನಾವು ಗಮನ ಕೊಡಲಿಲ್ಲ. ಆದ್ದರಿಂದ ಈ ಇಂಡಸ್ಟ್ರಿಯಲ್ ಪಾಲಿಸಿಯನ್ನು ಬದಲಾವಣೆ ಮಾಡಿ, ಈ ಕಾರ್ಖಾನೆಗಳನ್ನು ತಾಲ್ಲೂಕು ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ ದೊಡ್ಡ ದೊಡ್ಡ ಊರುಗಳಲ್ಲಿ ಸ್ಥಾಪನೆ ಮಾಡತಕ್ಕಂಥ ಒಂದು ಸಾಧನೆಯನ್ನು ತಾವು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಮತ್ತೆ ಕೊನೆಯದಾಗಿ ಆಕ್ಟ್ರಾಯ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರ್ ಆಗಿದ್ದಾಗ ಇದನ್ನು ತೆಗೆಯಲೇಬೇಕು ಅಂತ ಒತ್ತಾಯ ಬಂತು, ಯಾರು ಯಾರು ಒತ್ತಾಯ ತಂದರು ಎಂದರೆ, ಟ್ರಾನ್ಸ್‌ಪೋರ್ಟ್ ಆಪರೇಟರ್ಸ್ ಯಾರಿದ್ದಾರೋ ಅವರು ಮಾತ್ರ ಒತ್ತಾಯ ತಂದಿದ್ದರು. ಮತ್ತೆ ಯಾರು ಬಡವರಿದ್ದಾರೆ. ಯಾರು ಮುನಿಸಿಪಾಲಿಟಿಗಳವರಿದ್ದಾರೆ ಅವರು ಯಾರೂ, ಇದಕ್ಕೆ ಸಂಬಂಧಪಟ್ಟವರ್‍ಯಾರು ಒತ್ತಾಯ ತರಲಿಲ್ಲ ಆದರೆ ಈ ಟ್ರಾನ್ಸ್‌ಪೋರ್ಟ್ ಆಪರೇಟರ್ಸ್ ಯಾರಿದ್ದಾರೆ ಅವರು ನಮಗೆ ತೊಂದರೆಯಾಗುತ್ತಿದೆಂದು ಹೇಳಿದ್ದಕ್ಕೆ ನಾವು ತೆಗೆದೆವು. ಇದರಿಂದ ೨೫ ಕೋಟಿ ರೂಪಾಯಿಗಳಷ್ಟು ಲುಕ್ಸಾನು ಆಗುತ್ತದೆಂದು ನಾವು ತೆಗೆಯುವುದಕ್ಕೆ ಆಗುವುದಿಲ್ಲ ಎನ್ನುವ ನಿಲುವನ್ನು ಹೋದ ವರ್ಷ ತೆಗೆದುಕೊಂಡಿದ್ದೆವು. ಆದರೆ ಇದನ್ನು ನನ್ನ ಮನಸ್ಸಿಗೆ ವಿರುದ್ಧವಾಗಿ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾಗಿ ಬಂದಿತ್ತು. ಒಪ್ಪಿದ್ದೆ ಅಷ್ಟೆ. ಇದಾದ ನಂತರ ಮೊನ್ನೆ ಎಲ್ಲಾ ನಾವು ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ಎಲ್ಲಾ ಮುನಿಸಿಪಾಲಿಟಿಯವರು ಸಹ ಒಕ್ಕೊರಲಿನಿಂದ ಕೇಳುತ್ತಿದ್ದಾರೆ. ಏನೆಂದರೆ ಈ ಆಕ್ಟ್ರಾಯ್ ಇರಲಿ ಎಂದು ; ಆ ಮುನಿಸಿಪಾಲಿಟಿಗಳಿಗೆ ಬೇರೆ ಆಸ್ತಿಪಾಸ್ತಿಗಳೇನು ಇಲ್ಲದೇ ಇರುವುದರಿಂದ ಅವುಗಳ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಆದಾಯವಿಲ್ಲದೇ ಇರುವುದರಿಂದ ಮಾಡಬೇಕಾದಂಥ ಕೆಲಸ ಕಾರ್ಯಗಳು ಸಹ

ಹಾಗೆಯೇ ನಿಂತು ಹೋಗಿವೆ. ಕೆರೆ ಕಾಲುವೆಗಳನ್ನು ಮಾಡಿಸುವುದು ರಸ್ತೆ ರಿಪೇರಿ, ಗುಂಡಿಗಳನ್ನು ಮುಚ್ಚಿಸುವ ಕೆಲಸ ಹೀಗೆ ಏನು ಇದ್ದಾವೆ ಆ ಕೆಲಸಗಳನ್ನೆಲ್ಲಾ ಮಾಡಿಸುವುದಕ್ಕೆ ಆಗಿಲ್ಲ, ಸರ್ಕಾರ ಕೊಡ ತಕ್ಕಂಥ ಹಣ ಸಹ ಕೈಗೆ ಸರಿಯಾಗಿ ಸಿಗುತ್ತಿಲ್ಲ. ಇದರಿಂದ ಅಲ್ಲರುವ ಸಿಬ್ಬಂದಿಗಳಿಗೂ ಸಹ ಸರಿಯಾಗಿ ಸಂಬಳ ಕೊಡುವುದಕ್ಕೆ ಆಗುತ್ತಿಲ್ಲ. ಇದರಿಂದಾಗಿ ಮುನಿಸಿಪಾಲಿಟಿಗಳ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಆಕ್ಟ್ರಾಯ್ ತೆಗೆದು ಹಾಕುವುದರಿಂದ ಅದರಿಂದ ೨೫ ಕೋಟಿ ರೂಪಾಯಿಗಳಷ್ಟು ಏನು ನಷ್ಟವಾಗುತ್ತದೆ, ಅದನ್ನು ಸರ್ಕಾರದವರೇ ಭರಿಸತಕ್ಕ ನಿರ್ಧಾರವನ್ನು ಏನು ತೆಗೆದುಕೊಂಡಿದ್ದವು ಅದು ಸರಿಯಲ್ಲವೆಂದು ನಾನು ಹೇಳುತ್ತಿದ್ದೇನೆ. ಆದುದರಿಂದ ದಯಮಾಡಿ ಈ ಬಡ್ಜೆಟ್ಟಿನಲ್ಲಿಯಾದರೂ ಇದನ್ನು ಪುನರ್ ಪರಿಶೀಲನೆ ಮಾಡಿ ಪುನಃ ಆಕ್ಟ್ರಾಯ್ ಹಾಕುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ದಿವಾಕರ್ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಏನು ಭಾಷಣ ಮಾಡಿದ್ದಾರೆ, ಆ ಭಾಷಣಕ್ಕೆ ಹಾಗೂ ಅವರ ಕಾರ್ಯಕ್ರಮಗಳಿಗಾಗಿ ನಾನು ಅವರನ್ನು ವಂದಿಸುತ್ತಾ ನನ್ನ ಎರಡು ಮಾತುಗಳನ್ನು ಹೇಳಬಯಸುತ್ತೇನೆ.

ಕಳೆದ ೨೮ ತಿಂಗಳುಗಳಲ್ಲಿ ಜನತಾ ಪಕ್ಷದ ಸರ್ಕಾರ ಈ ದೇಶದಲ್ಲಿ ಇತ್ತು. ಅನಂತರ ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರ ನಮ್ಮ ದೇಶಕ್ಕೆ ಬಂದಿದೆ. ನನ್ನ ದೃಷ್ಟಿಯಲ್ಲಿ ಹೇಳಬೇಕೆಂದರೆ, ಕ್ಷಾಮಗಳು ಬಂದ ನಂತರ ಮಳೆ ಬಂದರೆ, ಒಳ್ಳೆಯ ಬೆಳೆಯಾದರೆ ದೇಶದ ಜನಕ್ಕೆ ಎಷ್ಟು ಸಂತೋಷವಾಗುತ್ತದೆಯೋ ಅಷ್ಟು ಸಂತೋಷ ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದ ಸರ್ಕಾರ ಈ ದೇಶಕ್ಕೆ ಬಂದುದರಿಂದ ಈ ದೇಶದ ಜನತೆಗೆ ಅಷ್ಟು ಸಂತೋಷವಾಗಿದೆ. ಈ ದೇಶದ ಎಲ್ಲಾ ಜನಕ್ಕೂ ಸಂತೋಷವಾಗಿದೆ. ಶ್ರೀಮಾನ್ ದೇವೇಗೌಡರವರು ನಿನ್ನೆಯ ದಿವಸ ಟೀಕೆ ಮಾಡುತ್ತಾ ವ್ಯಂಗ್ಯವಾಗಿ ಹೇಳಿದರು. ಗುಲ್ಬರ್ಗ ಚುನಾವಣೆಗೆ ಹೋದಾಗ ರೇಟುಗಳೆಲ್ಲಾ ಜಾಸ್ತಿಯಾಗುತ್ತಿದೆಯಲ್ಲಾ, ಯಾರಿಗೆ ಓಟು ಕೊಡುತ್ತೀರಿ ಅಂತ ಜನರನ್ನು ಅವರು ಕೇಳಿದಾಗ ರೇಟ್ ಜಾಸ್ತಿಯಾಗಲಿ ಪರವಾಗಿಲ್ಲ ನಾವು ಶ್ರೀಮತಿ ಇಂದಿರಾಗಾಂಧಿಯವರಿಗೇ ಓಟು ಕೊಡುತ್ತೇವೆಂದು ಅಲ್ಲಿಯ ಜನಗಳು ಹೇಳಿದರು ಎಂದು ಹೇಳಿದರು. ನಿಜ, ಅದರ ಅರ್ಥವೇನೆಂದರೆ ಈ ದೇಶದ ಜನತೆಗೆ ಅಥವಾ ದೇಶದ ಸಾಮಾನ್ಯ ಜನ ರಾಜಕೀಯವಾಗಿ ಬಹಳ ಬುದ್ಧಿವಂತರಾಗಿದ್ದಾರೆ. ಸತ್ಯವನ್ನು ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿದ್ದಾರೆ. ಎಂಥಾ ಜನರ ಕೈಯಲ್ಲಿ ದೇಶವನ್ನು ಕೊಟ್ಟರೆ ದೇಶವನ್ನು ಬಹಳ ದಿವಸಗಳ ಕಾಲ ಈ ದೇಶವನ್ನು ಉಳಿಸುವುದಕ್ಕೆ, ಈ ದೇಶದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ಸಾಮಾನ್ಯ ಜನತೆ ಇವತ್ತು ಅರಿತಿದ್ದಾರೆ. ಅರ್ಧ ರೊಟ್ಟಿ ತಿಂದಿದ್ದಾದರೂ ನಾವು ಶ್ರೀಮತಿ ಇಂದಿರಾಗಾಂಧಿಯವರನ್ನು ಉಳಿಸಿಕೊಳ್ಳುತ್ತೇವೆಂದು ನಮ್ಮ ಜನಗಳು ಹೇಳುತ್ತಿದ್ದಾರೆ. ಜನತೆಗೆ ಇವತ್ತು ಅಲ್ಪಸ್ವಲ್ಪ ರೇಟ್ ಜಾಸ್ತಿಯಾದರೂ ಪರವಾಗಿಲ್ಲ, ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವವೇ ಈ ದೇಶಕ್ಕೆ, ತೀರಾ ಅತ್ಯಗತ್ಯ ಅಂತ ತೀರ್ಮಾನ ಮಾಡಿದ್ದಾರೆ. ಇವತ್ತು ದೇಶದ ಜನತೆ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಅಧಿಕಾರವನ್ನು ಕೊಟ್ಟಿರುವುದರಿಂದ ಖಂಡಿತವಾಗಿಯೂ ಒಳ್ಳೆಯದಾಗುತ್ತದೆ. ಅವರು ಅಧಿಕಾರಕ್ಕೆ ಬಂದು ೨ ತಿಂಗಳಾದರೂ ಏನೂ ಮಾಡಿಲ್ಲ ಅಂತ ಟೀಕೆ ಮಾಡಬಹುದು. ಸಕ್ಕರೆ ಬೆಲೆ, ಸೀಮೆಎಣ್ಣೆ ಬೆಲೆ ಜಾಸ್ತಿಯಾಗಿದೆ ನಿಜ. ಇದಕ್ಕೆಲ್ಲಾ ಕಾರಣ ಯಾರು ? ೩ ವರ್ಷಗಳ ಕಾಲ ಅಧಿಕಾರದಲ್ಲಿದ್ದು ಶ್ರೀಮತಿ ಇಂದಿರಾಗಾಂಧಿಯವರನ್ನು ಹೊರಗಡೆ ಇಟ್ಟಂತಹ ಜನ ನೀವು ಮಾಡಿದಂಥ, ನಿಮ್ಮಲ್ಲಿರುವಂಥಾ ಕಪ್ಪು ಚುಕ್ಕೆಯನ್ನು ಬೇರೆಯವರ ಮೇಲೆ ಹೊರಿಸುವುದಕ್ಕೆ ಖಂಡಿತವಾಗಿಯೂ ಪ್ರಯತ್ನ ಮಾಡಬೇಡಿ. ಶ್ರೀಮತಿ ಇಂದಿರಾಗಾಂಧಿಯವರ ೩೦ ವರ್ಷಗಳ ಕಾಲದ ಆಡಳಿತದಲ್ಲಿ ರಿಜರ್ವ್ ಬ್ಯಾಂಕ್‌ನಲ್ಲಿ ೧೬೦೦ ಕೋಟಿ ಬಂಡವಾಳ ಏನಿತ್ತು, ಆ ಹಣವೆಲ್ಲಾ ಖಾಲಿಯಾಗಿ ಹೋಗಿದೆ, ದೇಶದ ಬೊಕ್ಕಸವೆಲ್ಲಾ ಖಾಲಿಯಾಗಿದೆ, ಇಷ್ಟೆಲ್ಲಾ ಖಾಲಿಯಾದ ಮೇಲೆ.........

SRI M. SRINIVAS.—He is misquoting it. Even the Reserve Bank of India has given clear statement about the Gold Reserves.

† ಶ್ರೀ ಕಡಿದಾಳ್ ದಿವಾಕರ್.—ಸಾಮಾನ್ಯ ಜನತೆ ಇದನ್ನೆಲ್ಲಾ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಆದುದರಿಂದ ಇದರಲ್ಲಿ ಯಾರು ಮಿಸ್ ಗೈಡ್ ಮಾಡುತ್ತಿದ್ದಾರೆಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಂಡೇ ಜನತೆ ಓಟ್ ಕೊಟ್ಟಿರುವುದು. ನೀವು ಇಲ್ಲಿ ಹೇಳಿದಂಥ ಮಾತುಗಳಿಗೆ ಉತ್ತರವಾಗಿ ಹೇಳುತ್ತಿದ್ದೇನೆ. ಜನತಾಪಕ್ಷ ಅಧಿಕಾರದಲ್ಲಿದ್ದಾಗ ಕೆ.ಜಿ.ಗೆ ಎರಡುಕಾಲು ರೂಪಾಯಿ ಇದ್ದ ಸಕ್ಕರೆ

ಬೆಲೆಯನ್ನು ೧೦ ರೂಪಾಯಿಗಳವರೆಗೆ ಏರಿಸಿದ್ದೀರಿ. ಈ ರೀತಿ ಬೆಲೆ ಏರುವುದಕ್ಕೆ ಕಾರಣ ನೀವು ಕಬ್ಬು ಬೆಳೆಯುವಂಥಾ ರೈತರಿಗೆ ನ್ಯಾಯವಾದ ಬೆಲೆಯನ್ನು ನಿಗದಿ ಮಾಡದೇ ಇದ್ದುದೇ ಇಷ್ಟೆಲ್ಲಾ ಏರುವುದಕ್ಕೆ ಕಾರಣವಾಗಿದೆ. ಅದನ್ನು ಮಾಡದೇ ಇದ್ದ ನೀವು ಇವತ್ತಿನ ದಿವಸ ಸುಮ್ಮನೇ ಬೆಲೆಗಳು ಎಲ್ಲಾ ಏರಿಬಿಟ್ಟಿವೆ ಅಂತ ಸುಮ್ಮನೇ ನಮ್ಮ ಸರ್ಕಾರದ ಮೇಲೆ ಬೊಂಬಡ ಬಾರಿಸುತ್ತಿದ್ದೀರಿ. ನ್ಯಾಯವಾದ ಬೆಲೆಯನ್ನು ರೈತರಿಗೆ ಕೊಟ್ಟಿದ್ದೇ ಆಗಿದ್ದರೆ ಜನ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಿದ್ದರು, ಮತ್ತು ಈ ವರ್ಷ ೧೦ ರೂಪಾಯಿಗೆ ಸಕ್ಕರೆ ಬೆಲೆ ಹೋಗುತ್ತಿರಲಿಲ್ಲ, ೪ ರೂಪಾಯಿಗಳಿಗೇ ಇರುತ್ತಿತ್ತು. ಕಳೆದ ವರ್ಷ ಕೂಡ ಬ್ಲಾಕ್ ಮಾರ್ಕೆಟ್‌ನಲ್ಲಿ ಸಕ್ಕರೆ ಬೆಲೆ ಕೆ.ಜಿ.ಗೆ ೩-೪ ರೂಪಾಯಿಗಳವರೆಗೆ ಇತ್ತು. ಅದು ಈ ವರ್ಷ ೪-೫ ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಇದು ಒಂದು ನಿಮ್ಮ ತಪ್ಪು ನೀತಿಯಿಂದ ಆಗಿರತಕ್ಕಂಥದ್ದು. ಇದನ್ನು ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರವಾಗಲೀ, ಶ್ರೀ ಗುಂಡೂರಾಯರ ಸರ್ಕಾರವಾಗಲೀ ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ ಸರಿಪಡಿಸುವುದಕ್ಕೆ ಆಗುವುದಿಲ್ಲ, ಅದು ಸಾಧ್ಯವೂ ಇಲ್ಲ. ಆದರೆ ಸೂಕ್ತವಾದ ಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಸಾಧ್ಯವಾದಷ್ಟು ಇಳಿಸುವುದಕ್ಕೆ ನಮ್ಮ ಸರ್ಕಾರ ಇದರ ಕಡೆಗೆ ಕ್ರಮವನ್ನು ತೆಗೆದುಕೊಳ್ಳುತ್ತಿದೆ. ಇದನ್ನು ಸಹ ಮಾನ್ಯ ಸದಸ್ಯರುಗಳು ಗಮನಿಸಬೇಕು. ಇನ್ನು ಸೀಮೆಎಣ್ಣೆ ವಿಚಾರ ಹೇಳಬೇಕೆಂದರೆ. ಇದು ಪ್ರಪಂಚದಲ್ಲಿಯೇ ಕೊರತೆ ಇದೆ. ಇದು ಕೇವಲ ನಮ್ಮ ದೇಶ ಒಂದಕ್ಕೆ ಬಂದಿರುವ ಕೊರತೆಯಲ್ಲ. ಬೊಂಬೈ ಹೈವೆಯಲ್ಲಿ ೧ ಲಕ್ಷ ಬ್ಯಾರೆಲ್ ಉತ್ಪತ್ತಿಯಾಗುತ್ತಿದ್ದುದನ್ನು ೨ ಲಕ್ಷ ಬ್ಯಾರೆಲ್‌ವರೆಗೆ ಉತ್ಪತ್ತಿ ಮಾಡುವುದರ ಕಡೆಗೆ ನಮ್ಮ ಶ್ರೀಮತಿ ಇಂದಿರಾಗಾಂಧಿಯವರು ವ್ಯವಸ್ಥೆ ಮಾಡಿದ್ದಾರೆ. ಇದನ್ನು ಕೇವಲ ೨೪ ಗಂಟೆಯೊಳಗೆ ಎಲ್ಲವನ್ನು ಸರಿಪಡಿಸುವುದಕ್ಕೆ ಖಂಡಿತವಾಗಿಯೂ ಯಾರಿಂದಲೂ ಸಾಧ್ಯವಿಲ್ಲ, ಅದಕ್ಕೆ ನಾವು ಸಾಧ್ಯವಾದರೆ ಹೊರದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆಲ್ಲಾ ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ಯಾವುದೋ ಒಂದೇ ದೃಷ್ಟಿಯನ್ನಿಟ್ಟುಕೊಂಡು ಟೀಕೆ ಮಾಡಲೇಬೇಕು ಎನ್ನುವ ದೃಷ್ಟಿಯನ್ನಿಟ್ಟುಕೊಂಡು ಟೀಕೆ ಮಾಡಿದರೆ ಆಗ ನಾವು ಮಾಡಿದ್ದೆಲ್ಲವು ತಪ್ಪಾಗಿಯೇ ಕಾಣುತ್ತದೆ. ನೀವು ಹಿಂದೆ ಏನು ಎಲ್ಲಾ ಅವ್ಯವಸ್ಥೆ ಮಾಡಿದ್ದೀರಿ ಅದನ್ನು ೨ ತಿಂಗಳಲ್ಲಿ ಸರಿ ಮಾಡಿಲ್ಲ ಅಂಥ ಹೇಳಿದರೆ ಹೇಗೆ ? ಅಡನ್ನು ಸರಿಯಾಗಿ ದುರಸ್ಥಿ ಮಾಡಬೇಕಾದರೆ ಇನ್ನು ಒಂದೆರಡು ತಿಂಗಳ ಕಾಲ ಬೇಕಾಗುತ್ತದೆ. ಇನ್ನು ೪-೫ ತಿಂಗಳು ಕಾಲ ಆದಮೇಲೆ ಹೇಳಿ, ಆಗ ನಿಮಗೇ ಗೊತ್ತಾಗುತ್ತದೆ. ಬಹುಶಃ ಇವತ್ತು ನಮ್ಮ ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರ ಬಂದಿರುವುದರಿಂದ ಇದೆಲ್ಲಾ ಸರಿಹೋಗಿಯೇ ಹೋಗುತ್ತದೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಸಕ್ಕರೆ ಬೆಲೆ ಏರಿಕೆ ಬಗ್ಗೆ ಹೇಳಿದಂಥ ಜನ ಈರುಳ್ಳಿ ಬೆಲೆ ಏರಿ ಪುನಃ ಇಳಿದುದರ ಬಗ್ಗೆ ಪ್ರಸ್ತಾಪವೇ ಮಾಡುತ್ತಿಲ್ಲ. ಇವತ್ತು ಈರುಳ್ಳಿ ಬೆಲೆ ಬಹಳ ಇಳಿದು ಹೋಗಿರುವುದರಿಂದ ಅದಕೆ ಸರಿಯಾದ ಬೆಲೆ ಸಿಗುವವರೆಗೂ ನಾವು ಈರುಳ್ಳಿಯನ್ನೇ ಕೀಳುವುದಿಲ್ಲವೆಂದು ರೈತರು ಕೂತಿದ್ದಾರೆ. ಇವತ್ತಿನ ದಿವಸ ಏನಾಗುತ್ತಿದೆ ಎಂದರೆ ಯಾವುದಾದರೂ ಒಂದು ಬೆಳೆಗೆ ಜಾಸ್ತಿ ರೇಟ್ ಸಿಕ್ಕಿಬಿಟ್ಟಿತ್ತು ಎಂದರೆ ಎಲ್ಲರೂ ಅದನ್ನೇ ಬೆಳೆಯುವುದಕ್ಕೆ ಹೋಗುತ್ತಾರೆ. ಕಡಿಮೆಯಾಯಿತೆಂದರೆ ಯಾರು ಬೆಳೆಯುವುದಿಲ್ಲ. ಇದನ್ನು ಸರ್ಕಾರದವರು ಮೊದಲು ತಪ್ಪಿಸಬೇಕು. ಇವತ್ತು ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಮಸೂದೆ ಅಂತ ಏನಿದೆ, ಅದರ ಬಗ್ಗೆ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ನಮ್ಮ ದೇಶದಲ್ಲಿರುವಂಥ ಜಮೀನುಗಳಲ್ಲಿ ಇಂತಿಷ್ಟು ಜನರು ಇಂತಿಂಥಾ ಬೆಳೆಯನ್ನೇ ಬೆಳೆಯಬೇಕೆಂದು ನಿಗದಿಪಡಿಸಬೇಕು. ಹಾಗೆ ಮಾಡದೇ ಇದ್ದರೆ ಈ ರೀತಿ ರೇಟುಗಳು ಏರಿಳಿತವಾಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಯಾವ ಯಾವ ರೈತರು ಯಾವ ಯಾವ ಕಾಲದಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು ಎನ್ನುವ ನಿರ್ದೇಶನವನ್ನು ಅಧಿಕಾರಿಗಳು ರೈತರಿಗೆ ಕೊಡುವ ಹಾಗೆ ಸರ್ಕಾರ ನೋಡಿಕೊಳ್ಳಬೇಕು. ಮತ್ತು ಅದಕ್ಕೆ ಮೊದಲೇ ಸಿಗದಿಯಾದ ಬೆಲೆಯನ್ನು ಅನೌನ್ಸ್‌ಮೆಂಟ್ ಮಾಡದಿದ್ದರೆ ಪರಿಸ್ಥಿತಿ ಸುಧಾರಿಸುವುದು ಕಷ್ಟ.

ಮಾನ್ಯ ಪಂಪಾವತಿಯವರು ಅಕ್ಕಿ, ರಾಗಿ, ಜೋಳದ ಬೆಲೆ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದರು. ಆದರೆ ರೈತರು ಏನಾದರೂ ಆಹಾರ ಧಾನ್ಯಗಳನ್ನು ಮಾರಾಟಕ್ಕಾಗಿಯೇ ಬೆಳೆಯುತ್ತಿದ್ದರೆ ಅವರ ತಲೆಯಲ್ಲಿ ಬುದ್ಧಿ ಇಲ್ಲವೆಂದು ಹೇಳಬೇಕು. ಏಕೆಂದರೆ, ಅವರು ಎಷ್ಟು ಹಣವನ್ನು ಖರ್ಚು ಮಾಡಿ ಭತ್ತವನ್ನು ಬೆಳೆದಿರುತ್ತಾರೋ ಅದಕ್ಕೆ ಮಾರುಕಟ್ಟೆಯಲ್ಲಿ ಸಿಗುವ ಬೆಲೆಯನ್ನು ಹೋಲಿಕೆ ಮಾಡಿನೋಡಿದರೆ ಬಹಳ ನಷ್ಟ ಕಾಣುತ್ತದೆ. ಈ ಸಂದರ್ಭದಲ್ಲಿ, ನಾವು ಬಳಕೆದಾರರ

ದೃಷ್ಟಿಯನ್ನಿಟ್ಟುಕೊಂಡು ಮಾತನಾಡುವುದಕ್ಕಾಗುವುದಿಲ್ಲ. ರೈತರ ದೃಷ್ಟಿಯನ್ನಿಟ್ಟುಕೊಂಡು ಮಾತನಾಡಿದರೆ ರೈತರಿಗೆ ಧಾರಣೆ ಸಿಗತಕ್ಕದ್ದು ತೀರಾ ಕಡಿಮೆ. ಕೊನೇ ಪಕ್ಷ ಭತ್ತದ ಬೆಲೆ ಕ್ವಿಂಟಾಲ್ ಒಂದಕ್ಕೆ ೧೫೦ ರೂಪಾಯಿಗಳಾದರೂ ಇದ್ದರೆ ರೈತರು ಭತ್ತವನ್ನು ಮಾರಾಟಕ್ಕಾಗಿ ಬೆಳೆಯಬಹುದು. ಅದಕ್ಕಿಂತ ಕಡಿಮೆಯಾದರೆ ಆಹಾರ ಪದಾರ್ಥಗಳನ್ನು ಬೆಳೆಯುವುದು ಕಷ್ಟವಾಗುತ್ತದೆ ಮತ್ತು ಬೆಳೆಯುವುದೂ ಕಡಿಮೆ ಆಗುತ್ತದೆ. ಕೊನೆಗೆ ಆಹಾರದ ಅಭಾವ ಪರಿಸ್ಥಿತಿ ಉಂಟಾಗಿ ಆಹಾರ ಧಾನ್ಯಗಳನ್ನು ಹೊರದೇಶಗಳಿಂದ ತರಿಸಿಕೊಳ್ಳಬೇಕಾದ ಸಂಭವ ಬರಬಹುದು. ಆದ್ದರಿಂದ, ಅದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಒಟ್ಟಿನಲ್ಲಿ, ರೈತರು ಆಹಾರ ಪದಾರ್ಥಗಳನ್ನು ಬೆಳೆಯದೆ ಇರುವುದಕ್ಕೆ ಅವಕಾಶ ಕೊಡದೆ ಈಗಿರತಕ್ಕ ಬೆಂಬಲ ಬೆಲೆಯನ್ನು ಜಾಸ್ತಿ ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಇನ್ನು ನಾನು ಮೊದಲೇ ಹೇಳಿದಂತೆ ಯಾವ ಯಾವ ಭಾಗಗಳಲ್ಲಿ, ಯಾರು ಯಾರು, ಯಾವ ಯಾವ ಕಾಲದಲ್ಲಿ, ಯಾವ ಯಾವ ಬೆಳೆಗಳನ್ನು ಬೆಳೆಯಬೇಕೆಂದು ಸರ್ಕಾರ ತೀರ್ಮಾನ ಮಾಡುವವರೆಗೆ ಬೆಲೆಗಳ ಏರಿಳಿತವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ಸರ್ಕಾರ ಇದರ ಬಗೆ ತೀವ್ರ ಗಮನ ಕೊಡಬೇಕೆಂದು ಹೇಳಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣ ಚಿಕ್ಕದಾಗಿದ್ದರೂ ಬಹಳ ಉತ್ತಮವಾಗಿದೆ. ಇದರಲ್ಲಿ ಅದನ್ನು ಹೇಳಿಲ್ಲ, ಇದನ್ನು ಹೇಳಿಲ್ಲವೆಂದು ಕೆಲವರು ಹೇಳಬಹುದು. ಆದರೆ ಮಾನ್ಯ ದೇವರಾಜ ಅರಸುರವರ ಸರ್ಕಾರದಲ್ಲಿ ಏನು ನಡೆದುಕೊಂಡು ಬಂದಿತ್ತೋ ಅದೇ ಈಗಲೂ ನಡೆಯುತ್ತಿದೆ. ಇವತ್ತಿನ ದಿವಸ ಅದು ಆಗಿಲ್ಲ, ಇದು ಆಗಿಲ್ಲವೆಂದು ಹೇಳಬಹುದು. ಆದರೆ ಇವರಿಗೂ ಸ್ವಲ್ಪ ಕಾಲಾವಕಾಶವನ್ನು ಕೊಟ್ಟು ನೋಡಬೇಕಾಗುತ್ತದೆಂದು ಹೇಳುತ್ತೇನೆ. ಆಡಳಿತದಲ್ಲಿ ಯಾರೂ ಕಡಿಮೆ ಇರುವುದಕ್ಕೆ ಸಾಧ್ಯವಿಲ್ಲ. ಅವರಿಗಿಂತ ಇವರು ಚೆನ್ನಾಗಿ ಕೆಲಸ ಮಾಡಿದ್ದಾರೆಯೋ ಇಲ್ಲವೇ ಎಂಬುದನ್ನು ಇನ್ನು ೬ ತಿಂಗಳಲ್ಲಿ ನೋಡಿಹೇಳಬಹುದು. ಒಟ್ಟಿನಲ್ಲಿ, ವಿರೋಧ ಪಕ್ಷದವರು ಕಾಲಾವಕಾಶ ಕೊಡುವ ಸೌಜನ್ಯ ತೋರಿಸಬೇಕು. ಈ ದೇಶದ ಬಡಜನರಿಗೆ ಉತ್ತಮವಾದ ಕಾರ್ಯಕ್ರಮಗಳನ್ನು ರೂಪಿಸಿಕೊಡುವುದಾಗಿ ಶ್ರೀಮತಿ ಇಂದಿರಾಗಾಂಧಿಯವರು ಹೇಳಿದ್ದಾರೆ. ಅವರು ಎಲ್ಲರಿಗೂ ಬೇಕೇ ಬೇಕು. ಅವರು ಜನರಿಗೆ ಅನುಕೂಲವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಟ್ಟರೆ ತಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ.

ಇನ್ನು ಮಾನ್ಯ ಬಸವಲಿಂಗಪ್ಪನವರು ಹೇಳಿದರು, ನೀವೆಲ್ಲಾ ಪಕ್ಷಾಂತರಿಗಳಾಗಿದ್ದೀರಿ ಎಂದು. ಪಕ್ಷಾಂತರಿಗಳ ಬಗ್ಗೆ ಮಾತನಾಡುವುದಕ್ಕೆ ಈ ದೇಶದಲ್ಲಿ ನಿಜಕ್ಕೂ ಯಾರಿಗೂ ಹಕ್ಕಿಲ್ಲ. ಏಕೆಂದರೆ, ಈ ದೇಶದಲ್ಲಿರುವ ರಾಜಕಾರಣಿಗಳು ಒಂದಲ್ಲ ಒಂದು ರೀತಿಯಲ್ಲಿ ಪಕ್ಷಾಂತರಿಗಳು. ಜನತಾ ಪಕ್ಷ ಸೇರಿರಬಹುದು, ಕಾಂಗ್ರೆಸ್ (ಐ) ಸೇರಿರಬಹುದು, ಕಾಂಗ್ರೆಸ್ (ಯು) ಸೇರಿರಬಹುದು. ಒಟ್ಟಿನಲ್ಲಿ ಎಲ್ಲರೂ ಪಕ್ಷಾಂತರಿಗಳೇ ಆದ್ದರಿಂದ ಬರೀ ತತ್ವಗಳ ಬಗ್ಗೆ, ಪಕ್ಷಗಳ ಬಗ್ಗೆ ಮಾತನಾಡುವುದು ಯಾರಿಗೂ ಒಳ್ಳೆಯದಲ್ಲ. ಮಾನ್ಯ ಬಸವಲಿಂಗಪ್ಪನವರು ನಮ್ಮಗಳ ಬಗ್ಗೆ ಟೀಕೆ ಮಾಡಿದರೆ ತಪ್ಪಾಗುತ್ತದೆ. ಏಕೆಂದರೆ ಅವರು, ನೀವುಗಳೆಲ್ಲ ನಮ್ಮ ಜೊತೆಯಲ್ಲೇ ಇರಬೇಕೆಂದು ಕರೆದು ಹೇಳುತ್ತಿದ್ದರು. ಆಗ ನಾವು ಇವತ್ತು ನಿಜಕ್ಕೂ ಶ್ರೀಮತಿ ಇಂದಿರಾಗಾಂಧಿಯವರ ಜೊತೆ ಇರುವುದು ಮೇಲು, ನಿಮ್ಮ ಜೊತೆ ಇರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಈ ಕಡೆಯೇ ಉಳಿಯಬೇಕಾಯಿತು. ನಾವು ಕಾಂಗ್ರೆಸ್ (ಐ) ಪಕ್ಷದಿಂದ ಗೆದ್ದು ಬಂದಿದ್ದೇವೆ, ಅದರ ಬಗ್ಗೆ ಏನೇನು ಅನುಮಾನವಿಲ್ಲ. ಇನ್ನು ಕುಡಿಯುವ ನೀರಿನ ಬಗ್ಗೆ ಬಹಳಷ್ಟು ಕ್ರಮ ತೆಗೆದುಕೊಂಡಿದ್ದೇವೆ. ಎಲ್ಲ ಭಾಗಗಳಲ್ಲಿಯೂ ತೆರೆದ ಮತ್ತು ಕೊಳವೆ ಭಾವಿಗಳನ್ನು ತೆಗೆಸಿದ್ದೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಮಲೆನಾಡು ಪ್ರದೇಶಗಳಲ್ಲಿ ಕೊಳವೆ ಭಾವಿಗಳಿಂದ ಉಪಯೋಗವಾಗುತ್ತಿಲ್ಲ. ಅಲ್ಲಿ ತೆಗೆದಂತಹ ಕೊಳವೆ ಬಾವಿಗಳಲ್ಲಿ ೩ ತಿಂಗಳು ಕೂಡ ಸರಿಯಾಗಿ ನೀರು ಬರುವುದಿಲ್ಲ. ಅವುಗಳಿಗೆ ಕಡಿಮೆ ಬೆಲೆಯ ಪೈಪುಗಳನ್ನು ಹಾಕಿರುತ್ತಾರೆ. ಅರ್ಧ ಭಾಗದವರೆಗೆ ಪೈಪು ಇಳಿಸಿದಾಗ ಅವು ಜಾಮ್ ಆಗಿ ನೀರು ಎತ್ತುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ತಾವು ಮಲೆನಾಡು ಭಾಗಕ್ಕೆ ಹೋದರೆ ಅಲ್ಲಿನ ಜನರು ಕೊಳವೆ ಬಾವಿಗಳ ಬಗ್ಗೆ ಕಂಪ್ಲೈಂಟ್ ಮಾಡುವುದು ಗೊತ್ತಾಗುತ್ತದೆ. ಸರ್ಕಾರಕ್ಕೆ ಇದರಿಂದ ಸುಮಾರು ೧೫-೨೦ ಸಾವಿರ ರೂಪಾಯಿ ನಷ್ಟವಾಗುತ್ತದೆ. ಆದ್ದರಿಂದ, ಮಲೆನಾಡು ಪ್ರದೇಶಗಳಲ್ಲಿ ಇನ್ನು ಮುಂದಾದರೂ ಕೊಳವೆ ಬಾವಿಗಳನ್ನು ತೆಗೆಸದೆ ತೆರೆದ ಬಾವಿಗಳನ್ನು ತೋಡಿಸಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈ ಸಾಲಿನ ಬಜೆಟ್ಟಿನಲ್ಲಿ ದಯವಿಟ್ಟು ಈ ಒಂದು ವ್ಯವಸ್ಥೆಯನ್ನು ಮಾಡಬೇಕು. ಇನ್ನು ನಮ್ಮ ಭಾಗದ ಜನಗಳ ದೊಡ್ಡ ಸಮಸ್ಯೆ ಎಂದರೆ ಕಟ್ಟಿಗೆಯ ಸಮಸ್ಯೆ. ನಗರ ಪ್ರದೇಶಗಳಲ್ಲಿರುವವರಿಗೆ ಸಕ್ಕರೆ, ಸೀಮೆಎಣ್ಣೆಯ ಸಮಸ್ಯೆ ಇರಬಹುದು. ಆದರೆ ಹಳ್ಳಿಗಳಲ್ಲಿರತಕ್ಕ ಜನರಿಗೆ ಮಳೆಗಾಲದಲ್ಲಿ ಕಟ್ಟಿಗೆ ಅಭಾವ ವಿಪರೀತ

ಮಾಗುತ್ತದೆ. ಆ ಬಗ್ಗೆ ಅಲ್ಲಿನ ಜನರು ನನಗೆ ೩-೪ ಪತ್ರಗಳನ್ನು ಬರೆದಿದ್ದಾರೆ. ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಅರಣ್ಯದಲ್ಲಿ ಕಟ್ಟಿಗೆ ಕಡಿಯುವುದಕ್ಕೆ ಸಹ ಬಿಡುತ್ತಿಲ್ಲ. ಮೊದಲು ರೈತರಿಗೆ ಕಾಡಿನಲ್ಲಿ ಕಟ್ಟಿಗೆ ಕಡಿಯಲು ಅನುಮತಿ ಕೊಡುತ್ತಿದ್ದರು. ಆದರೆ ಈಗ ಅನುಮತಿ ಕೊಡುತ್ತಿಲ್ಲ. ಇನ್ನೇನು ಮಳೆಗಾಲ ಸಮೀಪಿಸುತ್ತಿರುವುದರಿಂದ ಅಷ್ಟರೊಳಗೆ ಕಟ್ಟಿಗೆ ಕಡಿಯುವುದಕ್ಕೆ ಮಾನ್ಯ ಮಂತ್ರಿಗಳು ಅನುಮತಿ ಕೊಡುವ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದು ಬಹಳ ಜಟಿಲವಾದ ಸಮಸ್ಯೆಯಾದ್ದರಿಂದ ಇದಕ್ಕೆ ಏನಾದರೂ ಸೂಕ್ತ ಪರಿಹಾರ ಮಾರ್ಗವನ್ನು ಕಂಡುಹಿಡಿಯಬೇಕೆಂದು ಹೇಳುತ್ತೇನೆ. ಕಟ್ಟಿಗೆ ಅಂಗಡಿಗಳನ್ನು ಮಲೆನಾಡು ಭಾಗಗಳಲ್ಲಿ ತೆಗೆದು ಜನರಿಗೆ ಕಟ್ಟಿಗೆ ಒದಗಿಸತಕ್ಕ ತೀರ್ಮಾನ ಮಾಡಿದರೆ ಇನ್ನೂ ಒಳ್ಳೆಯದು. ನೀರಿನಲ್ಲಿರುವ ಮೀನಿಗೆ ನೀರು ಕುಡಿಯುವುದು ಬೇಡವೆಂದು ಹೇಳುವುದಕ್ಕೆ ಹೇಗೆ ಸಾಧ್ಯವಿಲ್ಲವೋ ಹಾಗೆ ಕಾಡಿನಲ್ಲಿರುವ ಜನರಿಗೆ ಕಟ್ಟಿಗೆ ಕಡಿಯುವುದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಹಿಂದೆ ಬ್ರಿಟಿಷರ ಕಾಲದಲ್ಲಿ ವಿಶೇಷ ಅವಕಾಶಗಳಿದ್ದವು. ಆದರೆ ಈಗ ಆ ರೀತಿ ಅವಕಾಶ ಮಾಡಿಕೊಡದಿದ್ದರೆ ಪರೋಕ್ಷವಾಗಿ ಕಳ್ಳತನ ಮಾಡು ಎಂದು ಸರ್ಕಾರವೇ ಜನರಿಗೆ ಪ್ರಚೋದನೆ ಕೊಟ್ಟಂತಾಗುತ್ತದೆ. ಆದ್ದರಿಂದ, ಅದಕ್ಕೆ ಬದಲಾಗಿ ಕಟ್ಟಿಗೆ ಕಡಿಯಲು ಅನುಮತಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಹಿಂದೆ ಕೊಟ್ಟಿದ್ದಂತಹ ಅನುಮತಿ ಪುಸ್ತಕಗಳನ್ನು ಈಗ ವಾಪಸ್ಸು ತೆಗೆದುಕೊಂಡಿದ್ದಾರೆ. ಅದೇ ವ್ಯವಸ್ಥೆಯನ್ನಾದರೂ ಪುನಃ ಜಾರಿ ಮಾಡದಿದ್ದರೆ ನಮ್ಮಂತಹ ಶಾಸಕರಿಗೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಈಗ್ಗೆ ೧೫ ದಿವಸಗಳ ಹಿಂದೆ ಊರಿಗೆ ಹೋದಾಗ ಕಟ್ಟಿಗೆ ಕಡಿಯಲು ಅನುಮತಿ ಕೊಡಿ ಎಂದು ಅಲ್ಲಿನ ಜನರು ಅಧಿಕಾರಿಗಳನ್ನು ಘೇರಾವೋ ಮಾಡುತ್ತಿದ್ದರು. ಇವತ್ತು ಮತ್ತೆ ನಾವು ಹೋದರೆ ಕಟ್ಟಿಗೆ ಕಡಿಯಲು ಅವಕಾಶ ಮಾಡಿಕೊಡುತ್ತೀರೋ ಇಲ್ಲವೋ ಎಂದು ನಮ್ಮನ್ನು ಘೇರಾವೋ ಮಾಡುತ್ತಾರೆ. ಇನ್ನು ಇವತ್ತಿನ ದಿವಸ ವಿದ್ಯುಚ್ಛಕ್ತಿ ಉತ್ಪಾದನೆ ಜಾಸ್ತಿಯಾಗುತ್ತಿದೆಯಾದರೂ ಅದು ನಮಗೆ ಸಾಕಾಗುತ್ತಿಲ್ಲ. ಕಾಳಿ, ಚಕ್ರ, ವರಾಹಿ ಯೋಜನೆಗಳು ಪೂರ್ಣವಾಗುವ ಹಂತದಲ್ಲಿವೆ. ಆ ಎಲ್ಲ ಯೋಜನೆಗಳಾದ ಮೇಲೂ ಕೂಡ ವಿದ್ಯುಚ್ಛಕ್ತಿಯ ಕೊರತೆ ಬೀಳುತ್ತದೆ. ಅದಕ್ಕೋಸ್ಕರ ರಾಯಚೂರಿನಲ್ಲಿ ಥರ್ಮಲ್ ಯೂನಿಟ್ ಹಾಕುವ ವ್ಯವಸ್ಥೆಯನ್ನು ಮಾಡಿದ್ದಾರೆ, ಅದು ಹೆಮ್ಮೆ ಪಡತಕ್ಕ ವಿಚಾರವಾಗಿದೆ. ಅಂಥ ವ್ಯವಸ್ಥೆಗಳನ್ನು ಬೇಕೆ ಕಡೆಯೂ ಮಾಡಲು ಸರ್ಕಾರ ಗಮನ ಹರಿಸಿದರೆ ಒಳ್ಳೆಯದು. ಹಿಂದಿನ ಸರ್ಕಾರ ಇದ್ದಾಗಲೂ ಸಹ ಅಂದರೆ ಕಳೆದ ಎರಡು ವರ್ಷಗಳಿಂದ ಇದೇ ಮಾತನ್ನು ಹೇಳುತ್ತಿದ್ದೆ. ಜೊತೆಗೆ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ಜಾಗ ಸ್ವಾಧೀನ ಮಾಡಿಕೊಂಡ ಮೇಲೆ ಅಲ್ಲಿನ ಜನರಿಗೆ ಪುನರ್ ವ್ಯವಸ್ಥೆ ಮಾಡಿಲ್ಲವೆಂದು ಹೇಳುವಾಗ ಮಾನ್ಯ ಶ್ರೀನಿವಾಸ್‌ರವರು ಗೇಲಿ ಮಾಡುತ್ತಿದ್ದರು. ಅಲ್ಲಿಗೆ ಜನತಾ ಪಕ್ಷದ ನಾಯಕರು ಲೋಕಸಭಾ ಚುನಾವಣೆಗೆ ಮುಂಚೆ ಬಂದಾಗ ಬಹಳಷ್ಟು ಜನ ನಾಟಕ ಮಾಡುತ್ತಿದ್ದರು. ಅಲ್ಲಿನ ರೈತರನ್ನು ಉದ್ದೇಶಿಸಿ ಮಾನ್ಯ ಎ.ಕೆ ಸುಬ್ಬಯ್ಯನವರಂಥವರು ಹೋಗಿ ಮಾತನಾಡಿದರು. ಅದರಿಂದ ಬಹಳಷ್ಟು ಜನರಿಗೆ ಪ್ರಚೋದನೆ ದೊರೆಯಿತು.

೫.೩೦. ಪಿ.ಎಂ.

ಆಗ ಜನರು ಬಹಳ ಗಲಾಟೆ ಎಬ್ಬಿಸಿದ್ದರು. ಲೋಕಸಭಾ ಚುನಾವಣೆಗಿಂತ ೧೫ ದಿವಸ ಮುಂಚೆ ಈ ತರಹ ಸ್ಟಂಟ್ ಮಾಡಿ ಜನರನ್ನು ಮರುಳು ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದು ಈಗ ಗೊತ್ತಾಗಿದೆ. ಜನ ನಿಮ್ಮನ್ನು (ಜನತಾಪಕ್ಷವನ್ನು) ಇಡೀ ದೇಶದಲ್ಲೇ ಜನ ಅರ್ಥ ಮಾಡಿಕೊಂಡು ತಿರಸ್ಕಾರ ಮಾಡಿದ್ದಾರೆ ಆದ್ದರಿಂದ ದಯವಿಟ್ಟು ಈಗಲಾದರೂ ಬುದ್ಧಿ ಕಲಿತುಕೊಳ್ಳಿ. ನಮ್ಮ ಭಾಗದಲ್ಲಿ ವಿದ್ಯುಚ ಕ್ತಿ ಯೋಜನೆಯಿಂದ ತೊಂದರೆಗೊಳಗಾಗಿರುವ ಜನರಿಗೆ ಬಹಳ ವೇಗದಲ್ಲಿ ಪುನರ್‌ವಸತಿ ಕಾರ್ಯಕ್ರಮವನ್ನು ಮಾಡದಿದ್ದರೆ ನಾಳೆ ವಿಧಾನಸೌಧದ ಮುಂದೆ ಬಂದು ಧರಣಿ ಕೂಡಬೇಕಾಗುತ್ತದೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಚಕ್ರಾ ಮತ್ತು ಸಾವೆಹೊಕ್ಕಲು ಪ್ರದೇಶದಲ್ಲಿ ನೀರೆಲ್ಲಾ ಪೂರ್ತಿಯಾಗಿ ಬಂದು ರೈತರ ಜಮೀನು ಮನೆ ಮುಳುಗಡೆಯಾಗಿದೆ. ಅಲ್ಲಿನ ಜನಗಳು ಗುಡ್ಡದ ಮೇಲೆ, ಮರದ ಕೆಳಗೆ ವಾಸ ಮಾಡುತ್ತಿದ್ದಾರೆ. ಮಳೆ ಪ್ರಾರಂಭವಾಗಿಲ್ಲದಿರುವುದರಿಂದ ಅವರು ಅಲ್ಲಿ ವಾಸಮಾಡುವುದಕ್ಕಾದರೂ ಅವಕಾಶವಿದೆ. ಮಳೆ ಏನಾದರೂ ಪ್ರಾರಂಭವಾದರೆ ಅಲ್ಲಿಯೂ ಅವರು ವಾಸ ಮಾಡುವುದು ಕಷ್ಟವಾಗುತ್ತದೆ. ಹಿಂದೆ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಹೈಪವರ್ ಕಮಿಟಿ ಇತ್ತು. ಈಗ ಅದಿಲ್ಲ. ಅದನ್ನು ರೀಕಾನ್‌ಸ್ಟಿಟ್ಯೂಟ್ ಮಾಡಿ ರೈತರಿಗೆ ಪುನರ್ ವಸತಿ ಕೆಲಸವನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಷಯದಲ್ಲಿ ಸರ್ಕಾರ ಆದಷ್ಟು

ತೀವ್ರವಾಗಿ ಕೆಲಸ ಮಾಡದಿದ್ದರೆ ನಾನೂ ಆ ಜನರ ಜೊತೆ ಬಂದು ಧರಣಿ ಕೂಡಬೇಕಾಗುತ್ತದೆ. ಆದ್ದರಿಂದ ಕೂಡಲೇ ಸರ್ಕಾರದವರು ಚಕಾ್ರ, ಸಾವೆಹೊಕ್ಕಲು ಮತ್ತು ವರಾಹಿ ಪ್ರದೇಶದ ಜನರಿಗೆ ಪುನರ್‌ವಸತಿ ಕೆಲಸವನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದಕ್ಕೆ ಸರ್ಕಾರ ಎಷ್ಟು ಪ್ರಾಧಾನ್ಯತೆ ಕೊಡುತ್ತದೋ ಅಷ್ಟೇ ಪ್ರಾಧಾನ್ಯತೆಯನ್ನು ಆ ಪ್ರದೇಶದ ಜನರಿಗಾಗುವ ಹಾನಿಯನ್ನು ತಪ್ಪಿಸುವ ಬಗ್ಗೆಯೂ ಕೊಡಬೇಕು. ವಿದ್ಯುಚ್ಛಕ್ತಿಯನ್ನು ಜಾಸ್ತಿ ಉತ್ಪಾದನೆ ಮಾಡುವುದು ಸಂತೋಷದ ವಿಚಾರ. ಆದರೆ ಅದೇ ಸಂದರ್ಭದಲ್ಲಿ ಇದರಿಂದ ಯಾವ ಪ್ರದೇಶಕ್ಕೆ ತೊಂದರೆಯಾಗುತ್ತದೋ, ಆ ಭಾಗಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು, ಅಂದರೆ ಎಲ್ಲೆಲ್ಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಮಾಡುತ್ತಾರೋ ಆ ತಾಲ್ಲೂಕಿನಲ್ಲಿ ಎಲ್ಲರ ಮನೆಗೆ ವಿದ್ಯುಚ್ಛಕ್ತಿಯನ್ನು ಕೊಡುವ ವ್ಯವಸ್ಥೆ ಮಾಡಬೇಕು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಸಾಮಾನ್ಯ ಜನತೆಗೆ ಬಡಜನತೆಗೆ, ಹಿಂದುಳಿದ ವರ್ಗದವರಿಗೆ ಕಲ್ಯಾಣವಾಗುವಂಥ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡು ಕಾರ್ಯಪ್ರವೃತ್ತರಾಗಿರುವುದು ಹೆಮ್ಮೆಪಡುವಂಥ ವಿಷಯವಾಗಿದ್ದರೂ ಸರ್ಕಾರ ಕೊಟ್ಟಂಥ ಸವಲತ್ತುಗಳು ಆ ಜನರಿಗೆ ಸರಿಯಾಗಿ ತಲುಪುವಂತೆ ವ್ಯವಸ್ಥೆ ಮಾಡುವುದೂ ಸರ್ಕಾರದ ಕರ್ತವ್ಯ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಒಂದು ಮಾತನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ, ಏನೆಂದರೆ, ಇವತ್ತಿನ ದಿವಸ ಮಟ್ಕಾ ಜೂಜಿನ ಹಾವಳಿ ದೇಶದಲ್ಲಿ ಜಾಸ್ತಿಯಾಗುತ್ತಿದೆ. ನಮ್ಮ ರಾಜ್ಯದಲ್ಲಂತೂ ಇದು ವಿಪರೀತವಾಗಿದೆ. ಮನುಷ್ಯನಿಗೆ ಕ್ಯಾನ್ಸರ್ ಹಿಡಿದರೆ ಎಷ್ಟು ಕಷ್ಟವೋ ಅಷ್ಟೇ ಕಷ್ಟ ಈ ಮಟ್ಕಾ ಜೂಜಿನಿಂದ ಆಗುತ್ತದೆ. ಎಷ್ಟೇ ಒಳ್ಳೆಯ ಕಾರ್ಯಕ್ರಮವನ್ನು ಸರ್ಕಾರ ಹಾಕಿ ಜನರಿಗೆ ಸವಲತ್ತುಗಳನ್ನು ಕೊಟ್ಟರೂ ಈ ಮಟ್ಕಾ ಹಾವಳಿಯಿಂದ ಜನ ಸರಿಯಾಗಿ ಬದುಕುವುದೇ ಕಷ್ಟವಾಗಿದೆ. ಕಾರ್ಮಿಕರಿಗೆ ಎಷ್ಟೇ ಸಂಬಳ ಜಾಸ್ತಿ ಮಾಡಲಿ, ಅವರಿಗೆ ಏನೇ ಅನುಕೂಲತೆಗಳನ್ನು ಮಾಡಿಕೊಡಲಿ ಅದನ್ನೆಲ್ಲಾ ಅವರು ಈ ಜೂಜಿನಲ್ಲಿ ಕಳೆದುಕೊಂಡು ಹಾಳಾಗುತ್ತಿದ್ದಾರೆ. ಉದಾಹರಣೆಗೆ ನನ್ನ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ಅಲ್ಲಿ ನನ್ನ ತಾಲ್ಲೂಕು ಒಂದರಲ್ಲೇ ಒಂದು ಲಕ್ಷ ರೂಪಾಯಿ ಓ.ಸಿ. ಕಲೆಕ್ಟ್ ಆಗುತ್ತದೆ. ರಾಜ್ಯದಲ್ಲಿ ಒಟ್ಟು ಒಂದು ವರ್ಷಕ್ಕೆ ೪೦೦ ಕೋಟಿ ರೂಪಾಯಿ ಕಲೆಕ್ಟ್ ಆಗುತ್ತಿದೆ. ನಮ್ಮ ರಾಜ್ಯ ಸರ್ಕಾರದ ಬಂಡವಾಳ ೮೫೦ ಕೋಟಿ ರೂಪಾಯಿ ಆದರೆ ಈ ಓ.ಸಿ. ಸಾಮ್ರಾಜ್ಯದ ಉತ್ಪತ್ತಿ ೪೦೦ ಕೋಟಿ ರೂಪಾಯಿ ಆಗಿದೆ. ಅಲ್ಲಿ ಎಸ್.ಪಿ.ಯಿಂದ ಹಿಡಿದು ಎಲ್ಲರೂ ಇದರಲ್ಲಿ ಶಾಮೀಲಾಗಿದ್ದಾರೆ. ಇದರಿಂದ ಒಬ್ಬೊಬ್ಬ ಸಬ್‌ಇನ್‌ಸ್ಪೆಕ್ಟರ್‌ಗಳಿಗೆ ೫ ಸಾವಿರ ರೂಪಾಯಿ, ಒಬ್ಬ ಡಿ.ವೈ.ಎಸ್.ಪಿ. ಮತ್ತು ಎಸ್.ಪಿ.ಗೆ ೧೦ ಸಾವಿರ ರೂಪಾಯಿ ತಿಂಗಳಿಗೆ ಆದಾಯ ಇದೆ ಕೆಲವು ಕಡೆಗಳಲ್ಲಿ ೪೦ರಿಂದ ೫೦ ಸಾವಿರ ರೂಪಾಯಿವರೆಗೂ ಎಸ್.ಪಿ.ಗಳು ಸಂಪಾದನೆ ಮಾಡುತ್ತಿದ್ದಾರೆ. ಆದ್ದರಿಂದ ಈ ಮಟ್ಕಾ ಹಾವಳಿಯನ್ನು ತಪ್ಪಿಸಲು ಸರ್ಕಾರ ಗಮನ ಕೊಡದೇ ಇದ್ದರೆ ಜನತೆ ಸಂಪೂರ್ಣವಾಗಿ ಹಾಳಾಗಿ ಹೋಗುತ್ತಾರೆಂಬ ಮಾತನ್ನು ಹೇಳಬಯಸುತ್ತಿದ್ದೇನೆ. ಮಟ್ಕಾ ಬಗ್ಗೆ ಶಾಲೆಗೆ ಹೋಗುವ ಹುಡುಗರಿಗೂ ಕೂಡ ಆಸಕ್ತಿ ಹೆಚ್ಚಾಗಿದೆ. ಅವರೂ ಕೂಡ ಓ.ಸಿ. ರಿಸಲ್ಟ್ ನೋಡಿಕೊಂಡು ಶಾಲೆಗೆ ಹೋಗುತ್ತಿದ್ದಾರೆ. ಇದನ್ನೆಲ್ಲಾ ಸರ್ಕಾರ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡದೇ ಇದ್ದರೆ ಸಮಾಜಕ್ಕೆ ಅನುಕೂಲವಾಗುವಂಥ ಇಷ್ಟೆಲ್ಲಾ ಕಾರ್ಯಕ್ರಮ ಹಾಕಿಕೊಂಡರೂ ಅದು ವ್ಯರ್ಥ ಎಂದು ನನ್ನ ಅಭಿಪ್ರಾಯ. ಆದ್ದರಿಂದ ಸರ್ಕಾರ ಆದಷ್ಟು ಬೇಗ ಇದರ ಕಡೆಗೆ ಗಮನಕೊಟ್ಟು ಓ.ಸಿ. ವ್ಯವಸ್ಥೆಯನ್ನು ನಿಲ್ಲಿಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕನ್ನಡವನ್ನು ಕಡ್ಡಾಯವಾಗಿ ಆಡಳಿತ ಭಾಷೆಯನ್ನಾಗಿ ಮಾಡಿರುವ ವಿಚಾರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಶ್ರೀಮಾನ್ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದಾಗ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತಂದರು. ಇದಕ್ಕಾಗಿ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತಾ ಇನ್ನು ಮುಂದೆ ಎಲ್ಲಾ ಮಂತ್ರಿಗಳೂ ದಯವಿಟ್ಟು ಕನ್ನಡದಲ್ಲೇ ವ್ಯವಹಾರ ನಡೆಸಬೇಕು ಎಂದು ಕೇಳಿಕೊಳ್ಳುತ್ತೇನೆ. ನಾವು ಅನೇಕ ಬಾರಿ ಕನ್ನಡದಲ್ಲೇ ಪ್ರಶ್ನೆಗಳನ್ನು ಕೇಳಿದರೆ ಅಥವಾ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟರೆ ನಮಗೆ ಮಾನ್ಯ ಮಂತ್ರಿಗಳು ಇಂಗ್ಲೀಷಿನಲ್ಲಿ ಉತ್ತರ ಕೊಡುವ ಸಂಪ್ರದಾಯವನ್ನು ನೋಡುತ್ತಿದ್ದೇವೆ. ಹೊಸದಾಗಿ ಮಂತ್ರಿಯಾಗಿರತಕ್ಕ ಮಾನ್ಯ ಶ್ರೀಮತಿ ರೇಣುಕಾ ರಾಜೇಂದ್ರನ್ ಅವರು ಮೊನ್ನೆ ಕನ್ನಡದಲ್ಲೇ ಉತ್ತರ ನೀಡಿ ಒಳ್ಳೆಯ ಸಂಪ್ರದಾಯವನ್ನು ಹಾಕಿ ಕೊಟ್ಟಿದ್ದಾರೆ. ನಾನು ಇತ್ತೀಚಿಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಕಾಗದವನ್ನು ಬರೆದಿದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕನ್ನಡದಲ್ಲೇ ಉತ್ತರವನ್ನು ಕಳಿಸಿದ್ದಾರೆ. ಇದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು.

ಮಾನ್ಯ ದೇವರಾಜಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿದರೂ ಕೂಡ ನಾವೇನಾದರೂ ಅವರಿಗೆ ಪತ್ರ ಬರೆದರೆ ಕನ್ನಡದಲ್ಲಿ ಉತ್ತರ ಕಳಿಸದೇ ಇಂಗ್ಲೀಷಿನಲ್ಲಿ ಕಳುಹಿಸುತ್ತಿದ್ದರು. ಆದರೆ ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿಗಳಾದ ಮೇಲೆ ಕನ್ನಡದಲ್ಲಿ ಉತ್ತರವನ್ನು ಬರೆಯುವ ಸಂಪ್ರದಾಯವನ್ನು ಇಟ್ಟುಕೊಂಡಿದ್ದಾರೆ. ಇದನ್ನು ನೋಡಿ ನನಗೆ ಹೆಮ್ಮೆಯಾಯಿತು. ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ಬಂದಿದೆ ಎಂಬ ಅಭಿಮಾನ ಬಂತು. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿಗಳಾಗಿ ಕೇವಲ ಎರಡು ತಿಂಗಳಲ್ಲಿ ಏನೂ ಹೆಚ್ಚಿನ ಕೆಲಸ ಮಾಡುವುದಕ್ಕೆ ಆಗದಿದ್ದರೂ ಕೂಡ ಇನ್ನು ಮುಂದೆ ಮಹತ್ತರವಾದ ಕೆಲಸವನ್ನು ಮಾಡುವ ಭರವಸೆಯನ್ನು ಕೊಟ್ಟಿದ್ದಾರೆ ಮಣ್ಣಿನ ಮಕ್ಕಳಿಗೇ ಈ ರಾಜ್ಯದಲ್ಲಿ ಕೆಲಸ ಕೊಡುತ್ತೇವೆ ಕನ್ನಡ ಜನಗಳಿಗೆ ಸರ್ಕಾರಿ ಕೆಲಸ ಕೊಡುತ್ತೇವೆ ಎಂದು ಹೇಳಿದ್ದಾರೆ, ಇದು ಸ್ತುತ್ಯಾರ್ಹವಾದುದು ಇಂಥ ಮಹತ್ಕಾರ್ಯವನ್ನು ಅವರು ಮಾಡಬೇಕೆಂದಿರುವುದು ಹೆಮ್ಮೆ ಪಡುವಂಥ ವಿಚಾರ. ಬಿ.ಇ.ಎಲ್. ಫ್ಯಾಕ್ಟರಿಯಲ್ಲಿ ಶೇಕಡ ೭೦ರಷ್ಟು ತಮಿಳುನಾಡಿನವರು, ಹೆಚ್.ಎ.ಎಲ್.ನಲ್ಲಿ ಶೇಕಡ ೭೦ರಷ್ಟು ಮಲೆಯಾಳಿಗಳು ಕೆಲಸ ಮಾಡುತ್ತಿದ್ದಾರೆ. ಕನ್ನಡ ನಾಡಿನಲ್ಲಿ ಅನೇಕ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ವಿವಿಧ ಭಾಷೆಗಳನ್ನು ಮಾತನಾಡುವವರದ್ದೇ ಏಕಸ್ವಾಮ್ಯವಾಗಿ ಬಿಟ್ಟಿದೆ. ಅಲ್ಲಿ ಯಾರಾದರೂ ಒಂದು ಸಣ್ಣ ಕೆಲಸಕ್ಕೂ ಕೂಡ ಕೇರಳದಿಂದ ಮತ್ತು ತಮಿಳುನಾಡಿನಿಂದ ಅಲ್ಲಿನ ಅಧಿಕಾರಿಗಳು ಕರೆಸಿಕೊಳ್ಳುವ ವ್ಯವಸ್ಥೆಯನ್ನಿಟ್ಟುಕೊಂಡಿದ್ದಾರೆ. ಆದ್ದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ತೀವ್ರ ಗಮನ ಹರಿಸಿ ಇನ್ನು ಮೇಲಾದರೂ ರಾಜ್ಯದಲ್ಲಿ ೧೦೦ಕ್ಕೆ ೮೦ರಷ್ಟು ಕೆಲಸವನ್ನು ಕನ್ನಡ ನಾಡಿನವರಿಗೇ ಕೊಡುವಂಥ ವ್ಯವಸ್ಥೆ ಮಾಡಬೇಕು. ಉದ್ಯೋಗ ವಿನಿಮಯ ಕಛೇರಿಯಲ್ಲಿ ರಿಜಿಸ್ಟರ್ ಮಾಡಿಸಿದವರೆಲ್ಲಾ ಕನ್ನಡದವರಲ್ಲ. ಆದಕಾರಣ ಕೊನೇ ಪಕ್ಷ ೨೦–೨೫ ವರ್ಷಗಳಿಂದ ಕನ್ನಡ ನಾಡಿನಲ್ಲಿ ವಾಸ ಮಾಡುತ್ತಿದ್ದರೆ ಮಾತ್ರ.........

ಶ್ರೀ ಪಿ. ರಾಂದೇವ್.—ಸ್ಟೀಫನ್ ಅವರನ್ನು ಚುನಾವಣೆಯಲ್ಲಿ ಗೆಲ್ಲಿಸಿದ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಕಡಿದಾಳ್ ದಿವಾಕರ್.—ಅದು ರಾಷ್ಟ್ರದ ಪ್ರಶ್ನೆ. ರಾಜಕೀಯಕ್ಕೂ ಇದಕ್ಕೂ ಸಂಬಂಧವಿಲ್ಲ ಇವೆರಡಕ್ಕೂ ಬಹಳ ವ್ಯತ್ಯಾಸ ಉಂಟು.

ಶ್ರೀ ಕೆ.ಹೆಚ್. ಶ್ರೀನಿವಾಸ್.--ಈ ರಾಜ್ಯದಲ್ಲಿ ಒಬ್ಬರು ಮಲೆಯಾಳಿ ಮಂತ್ರಿಗಳಿದ್ದಾರೆ.

ಶ್ರೀ ಕಡಿದಾಳ್ ದಿವಾಕರ್:—ಮಾನ್ಯ ಮುಖ್ಯಮಂತ್ರಿಗಳು ಕನ್ನಡಿಗರಿಗೇ ಕೆಲಸ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಶೀಘ್ರವಾಗಿ ಕಾರ್ಯರೂಪಕ್ಕೆ ತರಲಿ ಎಂದು ಹೇಳಬಯಸುತ್ತೇನೆ. ಅನೇಕ ಜನೋಪಯೋಗಿ ಕಾರ್ಯವನ್ನು ಮಾಡಬೇಕೆಂದು ನಮ್ಮ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಅದನ್ನು ಮಾಡುವಂಥ ಶಕ್ತಿ ನಮ್ಮ ಸರ್ಕಾರಕ್ಕಿದೆ. ಯುವಕರಾದ ಮುಖ್ಯಮಂತ್ರಿಗಳು ನಮ್ಮ ರಾಜ್ಯಕೆ ಇದ್ದಾರೆ. ಹಿಂದೆ ಎಲ್ಲಾ ಮಂತ್ರಿಮಂಡಲದಲ್ಲಿ ವಯಸ್ಸಾದವರೇ ಇರುತ್ತಿದ್ದರು. ಆದರೆ ಈ ಬಾರಿಯ ಮಂತ್ರಿಮಂಡಲದಲ್ಲಿ ಹೆಚ್ಚು ಯುವಕರಿದ್ದಾರೆ. ಇವರೆಲ್ಲಾ ಮನಸ್ಸು ಮಾಡಿದರೆ ಒಳ್ಳೆಯ ಕೆಲಸವನ್ನು ಮಾಡಿ ಜನರಿಗೆ ಅನುಕೂಲಗಳನ್ನು ಮಾಡಬಹುದೆಂದು ನನ್ನ ಅಭಿಪ್ರಾಯ. ಇಷ್ಟು ಮಾತ್ರ ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ ಮಾತುಗಳನ್ನು ಮುಗಿಸುತ್ತೇನೆ.

SRI A. LAXMI SAGAR.—Sir, the Hon. Minister has promised that he would make a statement in connection with a matter which I raised this afternoon

SRI M. VEERAPPA MOILY.—Sir, I will furnish the reply at 5.45, P.M.

† ಶ್ರೀ ಬಾಪೂರಾವ್ ಧಾಶಪಾಂಡೆ.—(ಧಾರವಾಡ) ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಮಾತನಾಡಲು ನಾನು ನಿಂತಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಇಳಿಸುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುವುದೆಂದು ತಿಳಿಸಿದ್ದಾರೆ. ಈ ದಿಸೆಯಲ್ಲಿ ಕಳೆದ ಎರಡು ತಿಂಗಳುಗಳಿಂದ ಏನು ಪ್ರಯತ್ನ ಮಾಡಿದ್ದಾರೆನ್ನುವ ಪ್ರಶ್ನೆ ಸಹಜವಾಗಿ ಬರುತ್ತದೆ. ಬೆಲೆಗಳನ್ನು ಕಡಿಮೆ ಮಾಡುವುದಿರಲಿ, ಸಕ್ಕರೆ, ಸೀಮೆ ಎಣ್ಣೆ ಮತ್ತು ಸೌದೆಯ ಬೆಲೆ ದಿನೇ ದಿನೇ ಏರುತ್ತಿದ್ದು ಅವುಗಳು ಜನಸಾಮಾನ್ಯರ ಕೈಗೆ ನಿಲುಕದವುಗಳಾಗಿವೆ. ಇದನ್ನು ನೋಡಿದರೆ, ಸರ್ಕಾರ ಬೆಲೆ ನಿಯಂತ್ರಿಸುವ ಕುರಿತು ತಮ್ಮ ನೀತಿ ನಿರೂಪಣೆಯನ್ನು ಪ್ರಾಮಾಣಿಕವಾಗಿ ಜಾರಿಗೆ ಕೊಡುತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಇನ್ನೂ ಹಿಂದುಳಿದ ವರ್ಗಗಳ ವಸತಿ ಗೃಹಗಳ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಸತಿ ಗೃಹವೊಂದಿದೆ. ಅದರಲ್ಲಿ ನೂರು ಜನ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಕ್ಕೆ ಅವಕಾಶವಿದೆ. ಅಲ್ಲಿ ಇನ್ನೂ ನೂರು ವಿದ್ಯಾರ್ಥಿಗಳಿಗೆ ಅದನ್ನು ವಿಸ್ತರಿಸಬೇಕೆಂದು ಹಿಂದಿನ ಸಲ ನಿರ್ಣಯ ಮಾಡಲಾಗಿತ್ತು ಮತ್ತು ಅದು ಮಂಜೂರು ಆಗಿದೆ. ಆದರೆ, ಅದೂ ಕೂಡ ಇಂದಿಗೆ ಸಾಕಾಗುವುದಿಲ್ಲ. ಹಿಂದುಳಿದ ವರ್ಗಗಳಿಗೆ ಹೆಚ್ಚಿನ ವಿದ್ಯಾಭ್ಯಾಸ ಸಿಗಬೇಕು, ಅವರು ಮುಂದೆ ಬರಬೇಕೆನ್ನುವುದು ಸರ್ಕಾರದ ಉದ್ದೇಶವಾಗಿದ್ದರೆ, ಈ ವಸತಿ ಗೃಹವನ್ನು ವಿಸ್ತರಿಸುವುದು ಅವಶ್ಯಕವಿದೆ ಎಂದು ಹೇಳುತ್ತೇನೆ. ಇಲ್ಲದಿದ್ದರೆ, ಹಿಂದುಳಿದ ವರ್ಗಗಳ ವಿದ್ಯಾಭ್ಯಾಸ ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಬೇಕೋ ಅಷ್ಟು ಪ್ರಮಾಣದಲ್ಲಿ ಹೆಚ್ಚಾಗುವುದಿಲ್ಲ.

ಇನ್ನು ನೀತಿ ನಿರೂಪಣೆ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಾಗಿದೆ. ಇದರಬಗ್ಗೆ ನಾನು ಕೆಲವು ಮಾತುಗಳನ್ನು ಹೇಳುವುದು ಬಹಳ ಅವಶ್ಯಕವಿದೆ. ಮೊನ್ನೆ ನಡೆದ ಚುನಾವಣೆಗಳಿಂದ ಕೇಂದ್ರದಲ್ಲಿ ಅಧಿಕಾರ ಬದಲಾಯಿತು ಶ್ರೀಮತಿ ಇಂದಿರಾಗಾಂಧಿಯವರು ಮತ್ತೆ ಅಧಿಕಾರಕ್ಕೆ ಬಂದರು. ಆದರೆ, ಕರ್ನಾಟಕದಲ್ಲಿ ಅಧಿಕಾರ ಬದಲಾವಣೆಯಾದದ್ದು ಪಕ್ಷಾಂತರದಿಂದ. ಪಕ್ಷಾಂತರಿಗಳಿಂದ ರಚಿತವಾಗಿರುವ ಈ ಸರ್ಕಾರ ತನ್ನ ಪಕ್ಷದ ನೀತಿಯನ್ನು ಸ್ಪಷ್ಟಪಡಿಸುವುದು ಬಹಳ ಅಗತ್ಯವಿದೆ. ಇಂದು ಅದನ್ನು ಪಕ್ಷಾಂತರವೇ ಅಲ್ಲ, ಅವರು ಪಕ್ಷಾಂತರಿಗಳೇ ಅಲ್ಲ ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ, ಅವರ ಪಕ್ಷದಲ್ಲಿ ಕೆಲವರು—ಜಿಲ್ಲಾ ಮಟ್ಟದ ಅಧಿಕಾರ ವರ್ಗದವರು ಪಕ್ಷಾಂತರಿಗಳಿಗೆ ಸರ್ಕಾರ ರಚನೆಯ ಅವಕಾಶ ಕೊಡಬಾರದು ಎನ್ನುವ ಮಾತನ್ನು ಆಡುತ್ತಿದ್ದಾರೆ ಆದಕಾರಣ ಇಂತಹ ಸಮಯದಲ್ಲಿ ಪಕ್ಷಾಂತರಿಗಳನ್ನು ತೆಗೆದುಕೊಂಡು ಸರ್ಕಾರ ರಚನೆ ಮಾಡುವುದು ಯೋಗ್ಯವೇ ಎನ್ನುವುದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಏಕೆಂದರೆ, ಪಕ್ಷಾಂತರಿಗಳಿಂದ ರಚಿತವಾದ ಸರ್ಕಾರ ಬಹುಕಾಲ ಉಳಿಯುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮಂತ್ರಿ ಮಂಡಲವನ್ನು ಇನ್ನೂ ಪೂರ್ಣವಾಗಿ ರಚನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಕಾರಣವೇನೆಂದರೆ, ಮಂತ್ರಿ ಮಂಡಲದಲ್ಲಿರುವ ಮಂತ್ರಿಗಳ ಮತ್ತು ಪಕ್ಷದ ಕಾರ್ಯಕರ್ತರ ನಡುವೆ ಭಿನ್ನಾಭಿಪ್ರಾಯಗಳಿವೆ. ಇದರಿಂದಾಗಿ, ಆಯವ್ಯಯ ಅಧಿವೇಶನ ಮುಗಿದ ನಂತರ ಮುಂದಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಇಂದಿನ ಮಂತ್ರಿಮಂಡಲಕ್ಕೆ ಅಧಿಕಾರವಿದೆಯೋ ಅಥವಾ ಇಲ್ಲವೋ ಎಂದು ಹೇಳುವುದಕ್ಕೆ ಬರುವುದಿಲ್ಲ. ಮತ್ತೆ ಚುನಾವಣೆಯಾದರೆ ಇವರೇ ಮತ್ತೆ ಅಧಿಕಾರಕ್ಕೆ ಬರುವರೋ ಅಥವಾ ಬೇರೆಯವರು ಬರುವರೋ ಎನ್ನುವುದೂ ಸಹ ಅನಿಶ್ಚಿತವಾಗಿದೆ. ಆದುದರಿಂದ, ಈಗಿನ ಸರ್ಕಾರ ತನ್ನ ನೀತಿ ನಿರೂಪಣೆ ಮಾಡಬೇಕಾದುದು ಬಹಳ ಅವಶ್ಯಕವಿದೆ.

ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಮಂತ್ರಿಗಳು ಕೆಲವರು ಘೋಷಣೆ ಮಾಡಿದ್ದಾರೆ ಘೋಷಣೆ ಮಾಡುವುದು ಬಹಳ ಸುಲಭ. ಆದರೆ ಅದನ್ನು ಕಾರ್ಯರೂಪಕ್ಕೆ ತರುವಾಗ ಸರ್ಕಾರಕ್ಕೆ ಸತ್ವಪರೀಕ್ಷೆಯಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ರೈಲ್ವೆ ಮಾರ್ಗಗಳನ್ನು ಕುರಿತು ಸರ್ಕಾರ ಕೆಲವು ಮಾತುಗಳನ್ನು ಇದರಲ್ಲಿ ಹೇಳಿದೆ. ಹುಬ್ಬಳ್ಳಿ–ಕಾರವಾರದ ರೈಲ್ವೆ ಮಾರ್ಗದ ರಚನೆ, ಬೆಂಗಳೂರು ಮೀರಜ್ ರೈಲು ಮಾರ್ಗವನ್ನು ಬ್ರಾಡ್‌ಗೇಜ್‌ನ್ನಾಗಿ ಪರಿವರ್ತಿಸುವುದು ಮತ್ತು ವಿಜಯನಗರ ಉಕ್ಕಿನ ಕಾರ್ಖಾನೆ ಹಾಗೂ ಮಹಾಜನ್ ವರದಿಯನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಅನೇಕ ಮಾತುಗಳು ಕೇಳಿ ಬಂದಿವೆ. ಇವೆಲ್ಲ ಜನಗಳಿಗೆ ಆಕರ್ಷಕ ವಚನಗಳನ್ನು ಕೊಡುವ ರೀತಿಯಲ್ಲಿವೆ

ಎಂದು ನನಗೆ ಕಾಣುತ್ತದೆ. ಈ ಬಗ್ಗೆ ಕೇಂದ್ರದ ಮೇಲೆ ಪ್ರಭಾವ ಬೀರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಮನಸ್ಸು ಮಾಡಬೇಕು. ಇಲ್ಲದಿದ್ದರೆ, ಕಾರ್ಯಗತ ಮಾಡದ ವಿಷಯಗಳ ಬಗ್ಗೆ ಸರ್ಕಾರ ಮಾತನಾಡುವುದರಲ್ಲಿ ಏನು ಪ್ರಯೋಜನ?

ಈಗ ಮುಖ್ಯ ಮಂತ್ರಿಯಾಗಿರುವ ಮಾನ್ಯ ಗುಂಡೂರಾಯರು ಹಿಂದಿನ ಸರ್ಕಾರದಲ್ಲಿ ಸಾರಿಗೆ ಸಚಿವರಾಗಿದ್ದರು. ಒಂದು ಸಾವಿರ ಹೊಸ ಬಸ್ಸುಗಳನ್ನು ತರುತ್ತೇನೆ, ಸಾರಿಗೆ ವ್ಯವಸ್ಥೆಯನ್ನು ಸರಿ ಮಾಡುತ್ತೇನೆ ಎಂದು ಇದೇ ಸದನದಲ್ಲಿ ಅವರು ಭರವಸೆ ಕೊಟ್ಟಿದ್ದರು. ಸಾರಿಗೆ ಸಚಿವರಾಗಿದ್ದಾಗ ಅವರು ನೀಡಿದ್ದ ಭರವಸೆ ಇಂದಿಗೂ ಈಡೇರಿಲ್ಲ. ಈಗ ಅವರು ಮುಖ್ಯ ಮಂತ್ರಿಗಳಾದ ಮೇಲಾದರೂ ಅದು ಈಡೇರುತ್ತದೆಯೋ ಎನ್ನುವ ಬಗ್ಗೆ ನಮಗೆ ಸುಳಿವು ಕಾಣುತ್ತಿಲ್ಲ. ಸಾರಿಗೆ ಅವ್ಯವಸ್ಥೆ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಬಸ್ಸುಗಳ ಟೈರುಗಳು ಒಡೆದು ಅನೇಕ ಅಪಘಾತಗಳಾಗುತ್ತಿವೆ, ರಸ್ತೆ ಮಧ್ಯದಲ್ಲಿ ಬಸ್ಸುಗಳು ಕೆಟ್ಟು ನಿಂತು ಪ್ರಯಾಣಿಕರು ಬಹಳ ತೊಂದರೆ ಪಡುತ್ತಿರುವುದನ್ನು ನಾವು ನೋಡುತ್ತಿರುತ್ತೇವೆ. ಷೆಡ್ಯೂಲ್ ಬಸ್ಸುಗಳನ್ನೇ ಅನೇಕ ಸಲ ರದ್ದು ಮಾಡಿದ ಪ್ರಸಂಗಗಳಿವೆ. ಅಂತೂ ಸಾರಿಗೆ ವ್ಯವಸ್ಥೆ ಸರ್ಕಾರಕ್ಕೊಂದು ಸತ್ವಪರೀಕ್ಷೆಯಾಗಿದೆ. ಸಾರಿಗೆ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ಹೆಚ್ಚಿನ ಮಹತ್ವ ಕೊಡುತ್ತದೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಈ ದೃಷ್ಟಿಯಿಂದ ಹೇಳುವುದಾದರೆ, ಸರ್ಕಾರ ಇಲ್ಲಿಯತನಕ ಸಾರಿಗೆ ವ್ಯವಸ್ಥೆಯನ್ನು ಸರಿಪಡಿಸಲು ಕೈಗೊಂಡ ಕ್ರಮಗಳು ಏನೇನೂ ಸಾಲದು. ಹೊಸ ಬಸ್ಸುಗಳನ್ನು ಕೊಂಡುಕೊಳ್ಳುವುದರ ಜೊತೆಗೆ, ಸ್ವಲ್ಪ ಕೆಟ್ಟು ಹೋದ ಬಸ್ಸುಗಳನ್ನು ಸರಿಪಡಿಸಿ, ಸಾರಿಗೆ ವ್ಯವಸ್ಥೆಯನ್ನು ಉತ್ತಮಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಆಗಲೇ ಸರ್ಕಾರ ನೀಡಿರುವ ಆಶ್ವಾಸನೆಗೆ ಮಹತ್ವ ಬರುತ್ತದೆ. ಇಲ್ಲದಿದ್ದರೆ ಸ್ವಾಭಾವಿಕವಾಗಿ ಸರ್ಕಾರ ಈ ದಿಶೆಯಲ್ಲಿ ವಿಫಲವಾಗುತ್ತದೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ.

ಇನ್ನು ನಿರುದ್ಯೋಗಿ ಪದವೀಧರರುಗಳಿಗೆ ಸ್ಟೈಫಂಡರಿ ಆಧಾರದ ಮೇಲೆ ಸರ್ಕಾರದ ಇಲಾಖೆಗಳಲ್ಲಿ ಕೆಲಸ ನೀಡಲು ಸರ್ಕಾರ ಒಂದು ಯೋಜನೆಯನ್ನು ಹಾಕಿಕೊಂಡು ಅದರ ಮೇರೆಗೆ ಸ್ಟೈಫಂಡರಿ ಅವಧಿಯಲ್ಲಿ ತಿಂಗಳೊಂದಕ್ಕೆ ೧೫೦ ರೂಪಾಯಿಗಳನ್ನು ಅವರಿಗೆ ನೀಡಲಾಗುತ್ತಿದೆ. ಈ ಯೋಜನೆಯ ಕೆಳಗಡೆ ಧಾರವಾಡದಲ್ಲಿ ಸುಮಾರು ಒಂದು ಸಾವಿರದ ನಾಲ್ಕುನೂರು ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಂಡು ನಾಲ್ಕು ತಿಂಗಳುಗಳ ಕಾಲ ಕೆಲಸ ಮಾಡಿಸಿಕೊಂಡು ನಂತರ ಮನೆಗೆ ಕಳುಹಿಸಿದರು, ಈಗ ಅವರ ಗತಿ ಏನೆಂಬುದನ್ನು ಸರ್ಕಾರ ಯೋಚನೆ ಮಾಡಬೇಡವೇ? ಅಲ್ಲದೆ ಅವರಿಗೆ ನೀಡುತ್ತಿದ್ದ ಸಂಬಳವೂ ಸಹ ಕಡಿಮೆ. ಸ್ವಂತ ಊರಿನಲ್ಲಿ ಕೆಲಸದಲ್ಲಿದ್ದುಕೊಂಡು ಸ್ವಂತ ಮನೆಯಲ್ಲಿದ್ದರೆ ೧೫೦ ರೂಪಾಯಿ ಸರಿ ಹೋಗಬಹುದು. ಆದರೆ ಊರು ಬಿಟ್ಟು ಬಂದು ಕೆಲಸ ಮಾಡುವವರಿಗೆ ೧೫೦ ರೂಪಾಯಿ ಹೇಗೆ ಸಾಕಾಗುತ್ತದೆ? ಆದುದರಿಂದ, ಇದನ್ನು ಹೆಚ್ಚು ಮಾಡುವುದಲ್ಲದೆ, ಕೆಲಸದಿಂದ ಈಗಾಗಲೇ ತೆಗೆದು ಹಾಕಿರುವವರನ್ನು ಕೂಡಲೇ ಕೆಲಸಕ್ಕೆ ನೇಮಿಸಿಕೊಳ್ಳಬೇಕು. ಖಾಯಂ ಆಗಿ ನೇಮಕವಾಗಿರುವ ಪದವೀಧರರಿಗೆ ಕೊಡುವ ಕೆಲಸವನ್ನೇ ಇವರಿಗೂ ಕೊಟ್ಟು, ಸಂಬಳದಲ್ಲಿ ಮಾತ್ರ ಅವರಿಗಿಂತ ಬಹುಪಾಲು ಕಡಿಮೆ ಕೊಡುವುದು ಎಂದರೆ, ಸ್ವಾಭಾವಿಕವಾಗಿ ಇದು ವಿಚಾರ ಮಾಡತಕ್ಕ ಪ್ರಶ್ನೆಯಾಗಿರುತ್ತದೆ. ಈ ವಿಚಾರವಾಗಿ ನಮ್ಮ ರಾಜ್ಯದ ಅನೇಕ ಸ್ಟೈಫಂಡರಿ ಅಭ್ಯರ್ಥಿಗಳು ಮತ್ತು ನಿರುದ್ಯೋಗಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಅಲ್ಲದೆ, ಧಾರವಾಡ ಜಿಲ್ಲಾಧಿಕಾರಿಗಳವರ ಕಛೇರಿ ಮುಂದೆ ಕಳೆದ ಒಂದು ವಾರದಿಂದಲೂ ಸರದಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದು ಅವರೆಲ್ಲರೂ ಪದವೀಧರರ ಸ್ಟೈಫಂಡರಿ ನಿರುದ್ಯೋಗಿಗಳಿಗೆ ಖಾಯಂ ಕೆಲಸ ಕೊಡಬೇಕು ಮತ್ತು ೧೫೦ ರೂಪಾಯಿಗಳ ಸ್ಟೈಫಂಡರಿ ಧನವನ್ನು ಹೆಚ್ಚು ಮಾಡಬೇಕೆಂಬ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇದರ ಬಗ್ಗೆ ಇಲ್ಲಿಯವರೆಗೆ ಸರ್ಕಾರದಿಂದ ಹೇಳಿಕೆಬಂದಿಲ್ಲ, ಇಲ್ಲಿ ನೀತಿ ನಿಯಮದ ಅವಶ್ಯಕತೆ ಇದೆ. ಇದು ಇಲ್ಲದೇ ಹೋದರೆ ಅನೇಕ ಮಹತ್ವದ ಸಮಸ್ಯೆಗಳ ಕಡೆಗೆ ಸರ್ಕಾರ ಗಮನ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಬೇಕಾಗುತ್ತದೆ.

ಇನ್ನು ವಿದ್ಯಾ ಕ್ಷೇತ್ರದ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾಂತ್ರಿಕ ಜ್ಞಾನಕ್ಕೆ ಸಂಬಂಧಪಟ್ಟಂತೆ ನಮ್ಮ ರಾಜ್ಯದಲ್ಲಿ ಒಂದು ವಿಶ್ವ ವಿದ್ಯಾನಿಲಯವಾಗಬೇಕಾಗಿದೆ. ಕೃಷಿ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ವಿಶ್ವ

ವಿದ್ಯಾನಿಲಯಗಳಾಗಬೇಕಾಗಿದೆ. ಅದೇ ರೀತಿ ಮೆಡಿಕಲ್ ಕಾಲೇಜುಗಳಿಗೂ ಒಂದು ಪ್ರತ್ಯೇಕ ವಿಶ್ವ ವಿದ್ಯಾನಿಲಯದ ಅವಶ್ಯಕತೆ ಇದೆ. ಪ್ರತ್ಯೇಕ ವಿಶ್ವವಿದ್ಯಾನಿಲಯಗಳ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇದೆಯೋ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ; ಇದರ ಬಗ್ಗೆ ಸರ್ಕಾರದ ನೀತಿ ಏನೆಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ. ಈ ಕಾಲೇಜುಗಳಲ್ಲಿ ಸರಿಯಾದ ಶಿಕ್ಷಣ ಕೊಡಬೇಕು: ಶಿಕ್ಷಣ ಪಡೆದವರಿಗೆ ಉದ್ಯೋಗಾವಕಾಶಗಳನ್ನು ಒದಗಿಸುವ ಸಂಯೋಜನೆಯಾಗಬೇಕೆಂದು ಹೇಳುತ್ತೇನೆ. ವ್ಯವಸಾಯ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ವಿಶ್ವವಿದ್ಯಾನಿಲಯದ ಅವಶ್ಯಕತೆ ಬಹಳವಾಗಿದೆ.

ನಮ್ಮ ಸರ್ಕಾರ ರಾಜ್ಯದ ಜನತೆಯ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹೆಚ್ಚು ಗಮನಕೊಟ್ಟಿಲ್ಲ ವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹುಬ್ಬಳ್ಳಿ ಮತ್ತು ಧಾರವಾಡ ರಾಜ್ಯದ 2ನೇ ಮಹಾ ನಗರವಾಗಿ ಬೆಳೆಯುತ್ತಿದೆ. ಈ 2ನೇ ಮಹಾನಗರದಲ್ಲಿರತಕ್ಕ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಇದೇ ಮನೆಯಲ್ಲಿ ಅನೇಕ ಬಾರಿ ಚರ್ಚೆ ಮಾಡಿದ್ದೇವೆ. ಈ ಮಹಾನಗರಕ್ಕೆ ಸರ್ಕಾರದಿಂದ ದೊಡ್ಡ ಪ್ರಮಾಣದಲ್ಲಿ ಮೋಸವಾಗುತ್ತಿದೆ. ನೀರು ಸರಬರಾಜು ಮಾಡುವುದಕ್ಕೆ ಸರ್ಕಾರ ಪ್ರತ್ಯೇಕ ಮಂಡಲಿ ಇಟ್ಟುಕೊಂಡಿದ್ದರೂ ಕೂಡ ಇದುವರೆವಿಗೂ ಸಮರ್ಪಕವಾದರೀತಿಯಲ್ಲಿ ನೀರು ಸರಬರಾಜು ಮಾಡತಕ್ಕ ಕೆಲಸ ಆಗಿಲ್ಲ; ಇಂಥ ಮಹಾನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡತಕ್ಕ ಜವಾಬ್ದಾರಿಯನ್ನು ಇದುವರೆಗೆ ಸರ್ಕಾರ ಏತಕ್ಕೆ ತೆಗೆದುಕೊಂಡಿಲ್ಲ? ಈ ಯೋಜನೆಯನ್ನು ಯಾವಾಗ ಪೂರ್ತಿ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಲ್ಲದೆ, ಗ್ರಾಮಾಂತರ ಪ್ರದೇಶಗಳ ಕುಡಿಯುವ ನೀರಿನ ಯೋಜನೆಗೆ ಕೇಂದ್ರ ಸರ್ಕಾರದವರು ದೊಡ್ಡ ಪ್ರಮಾಣದಲ್ಲಿ ಹಣದ ಸಹಾಯ ಮಾಡುವುದಾಗಿ ವಾಗ್ದಾನ ಮಾಡಿದ್ದರು. ಈ ಯೋಜನೆ ಪ್ರಕಾರ ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವುದಕ್ಕೆ ಅವಕಾಶವಾಗುತ್ತಿತ್ತು. ಈ ದಿಶೆಯಲ್ಲಿ ಈಗಿನ ಸರ್ಕಾರ ಏನು ಮಾಡುತ್ತದೆಂಬುದನ್ನು ಕಾದು ನೋಡಬೇಕಾಗಿದೆ. ಮತ್ತು ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಬರತಕ್ಕ ಸಹಾಯದ ಬಗ್ಗೆ ಕೂಡ ಇವತ್ತು ಖಾತರಿ ಇಲ್ಲದಂತಾಗಿದೆ. ಇವತ್ತು ಪತ್ರಿಕೆಯಲ್ಲಿ ಮಾನ್ಯ ಬಂಗಾರಪ್ಪನವರು ಕೊಟ್ಟಿರತಕ್ಕ ಹೇಳಿಕೆ ಬಂದಿದೆ. ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಬರುವುದಕ್ಕೆ ಸಾಧ್ಯವಿಲ್ಲವಂತೆ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಪ್ರಧಾನಮಂತ್ರಿಯವರ ಹತ್ತಿರವೇ ಇದ್ದುಕೊಂಡು ರಾಜ್ಯದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆಂದು ಹೇಳಿಕೆಗಳು ಬರುತ್ತಿರುವಾಗ, ಸಕ್ಕರೆ ಪ್ರಮಾಣವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗಲಿಲ್ಲ ವೆಂದರೆ ನನಗೆ ಆಶ್ಚರ್ಯವಾಗುತ್ತದೆ. ಮತ್ತೆ ನಮ್ಮ ರಾಜ್ಯದ ಮುಖ್ಯ ನೀರಾವರಿಯೋಜನೆಯಾದ ಕೃಷ್ಣ ಮೇಲ್ದಂಡೆ ಯೋಜನೆ ಕೆಲಸ ನಿಂತುಹೋಗಿದೆ. ಇದರಿಂದ ಆ ಯೋಜನೆಯಲ್ಲಿ ಕೆಲಸ ಮಾಡತಕ್ಕ ಸಾವಿರಾರು ಜನ ನಿರುದ್ಯೋಗಿಗಳಾಗಿದ್ದಾರೆ. ಇವತ್ತು ಉತ್ತರ ಕರ್ನಾಟಕದ ಬಹು ಭಾಗದ ಕ್ಷಾಮ ಪ್ರದೇಶಕ್ಕೆ ನೀರು ಕೊಡತಕ್ಕ ಈ ಯೋಜನೆಯ ಕೆಲಸ ಕುಂಟುತ್ತಾ ಸಾಗಿದೆ. ಸರ್ಕಾರ ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲವೇ ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಬರೀ ರಾಜಕೀಯಕ್ಕಾಗಿ ಇಲ್ಲಿಂದ ಡೆಲ್ಲಿ, ಡೆಲ್ಲಿಯಿಂದ ಜಮ್ಮು ಅಲ್ಲಿಂದ ದೇವಸ್ಥಾನಕ್ಕೆ ಹೋಗಿ ದೇವಿಯ ದರ್ಶನ ಮಾಡುವುದರಿಂದ ರಾಜ್ಯದ ಸಮಸ್ಯೆಗಳು ಪರಿಹಾರವಾಗುವುದಿಲ್ಲ ಸರ್ಕಾರ ಜನತೆಗೆ ಕೊಟ್ಟಂತ ಆಶ್ವಾಸನೆಗಳನ್ನು ಪೂರ್ತಿಮಾಡುವ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಹೇಳಿ; ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್:—ಸ್ವಾಮಿ, ನಿನ್ನೆ 6 ಗಂಟೆಯವರೆವಿಗೂ ಪತ್ರಿಕಾ ಪ್ರತಿನಿಧಿಗಳು ಇದ್ದರು. 6 ಗಂಟೆಯನಂತರ ಸಭೆ ಮುಂದುವರಿದರೆ ಪತ್ರಿಕೆಯಲ್ಲಿ ಈ ಸಭೆಯಲ್ಲಿ ನಡೆದಂತ ಕಾರ್ಯಕಲಾಪಗಳು ಬರುವುದಿಲ್ಲ. ಈಗಾಗಲೇ ವೇಳೆಯಾಗುತ್ತಾ ಬಂದಿದೆ.

ಅಧ್ಯಕ್ಷರು:—ಮಂತ್ರಿಗಳು ಈಗ ಹೇಳಿಕೆ ಕೊಟ್ಟುಬಿಡಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ:—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರುಗಳಾದಂತ ಶ್ರೀ ಲಕ್ಷ್ಮೀ ಸಾಗರ್‌ರವರು, ಶ್ರೀ ರಾಂದೇವ್‌ರವರು ಈ ಸದನದಲ್ಲಿ ಎರಡು ವಿಚಾರಗಳನ್ನು ಎತ್ತಿದ್ದರು. ಈ ಸಂಬಂಧದಲ್ಲಿ ಒಂದು ಹೇಳಿಕೆ ಕೊಡುತ್ತೇನೆಂದು ನಾನು ಆಶ್ವಾಸನೆ ಕೊಟ್ಟಿದ್ದೆ. ಅದರ ಪ್ರಕಾರ ತಮ್ಮ ಅಪ್ಪಣೆ ಮೇರೆಗೆ ಹೇಳಿಕೆಯನ್ನು ಓದುತ್ತೇನೆ.